ಸಂಪುಟ : ೨೭

ಸಂಚಿಕೆ : ೨

ಕರ್ನಾಟಕ ಭಾರತಿ

ರಾಜ್ಯೋತ್ಸವ ಸಂಚಿಕೆ

ನೆವ್ಹಂಬರ, ೧೯೯೪

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಲೇಖಕರಿಗೆ ಸೂಚನೆಗಳು :

"ಕರ್ನಾಟಕ ಭಾರತಿ''ಯು ಸೃಜನ, ವಿಮರ್ಶನ, ಸಂಶೋಧನ, ಸಾಹಿತ್ಯ, ವಿಜ್ಞಾನ ಮತ್ತು ಮಾನವಿಕ ವಿಷಯಗಳ ಅಭಿವೃದ್ಧಿಗಾಗಿ ಮೀಸಲಾಗಿದ್ದು. ಅದರಲ್ಲಿ ಪ್ರಕಟನೆಗಾಗಿ ಈ ಬಗೆಯ ಎಲ್ಲ ಲೇಖನಗಳಿಗೂ ಸ್ವಾಗತವಿದೆ. ಅನುವಾದ ಲೇಖನ ಗಳಿದ್ದರೆ ಮೂಲ ಲೇಖಕರ ಅಥವಾ ಪ್ರಕಾಶಕರ ಅನುಮತಿಯನ್ನು ಕಳುಹಿಸಬೇಕು.

ಲೇಖನಗಳನ್ನು ಕಾಗದದ ಒಂದೇ ಮಗ್ಗುಲಲ್ಲಿ ಸಾಕಷ್ಟು ಮಾರ್ಜಿನ್ ಬಿಟ್ಟು, ಸ್ಪಷ್ಟವಾಗಿ ಬರೆದಿರಬೇಕು, ಇಲ್ಲವೆ ಟೈಪು ಮಾಡಿರಬೇಕು. ಹಸ್ತಪ್ರತಿಗಳು ಯಾವ ರೀತಿಯಿಂದಲೂ ಅಸ್ಪಷ್ಟವಾಗಿಯಾಗಲೀ ಅಸಂಪೂರ್ಣವಾಗಿಯಾಗಲೀ ಇರಬಾರದು.

ಲೇಖನ ಸ್ವೀಕೃತವಾದ ಕೂಡಲೇ ಲೇಖಕರಿಗೆ ತಿಳಿಸಲಾಗುತ್ತದೆ. ಅಸ್ವೀಕೃತ ಲೇಖನಗಳನ್ನು ಮರಳಿ ಪಡೆಯಲಿಚ್ಛಿಸುವವರು ಸಾಕಷ್ಟು ಅಂಚೆ ಚೀಟಿಗಳನ್ನು ಕಳುಹಿಸಬೇಕು.

ಲೇಖಕರಿಗೆ ಅವರ ಲೇಖನಗಳ ೨೫ ಪ್ರತಿಗಳನ್ನು ಲೇಖನವು ಪ್ರಕಟವಾದ ಸಂಚಿಕೆಯ ಪ್ರತಿಯೊಂದಿಗೆ ಕಳುಹಿಸಲಾಗುತ್ತದೆ. ಹೆಚ್ಚಿಗೆ ಪ್ರತಿಗಳು ಬೇಕಾದವರು ಅದರ ಮುದ್ರಣಾದಿ ವೆಚ್ಚವನ್ನು ವಹಿಸಬೇಕಾಗುತ್ತದೆ. ಲೇಖನ ಅಚ್ಚಾಗುವ ಪೂರ್ವದಲ್ಲಿ ಈ ವಿಷಯಕ್ಕೆ ತಿಳಿಸಬೇಕು.

ಲೇಖನಗಳನ್ನು, ಪುಸ್ತಕಗಳನ್ನು ವಿಮರ್ಶೆಗಾಗಿ ಸಂಪಾದಕರು, "ಕರ್ನಾಟಕ ಭಾರತಿ" ಕನ್ನಡ ಅಧ್ಯಯನಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಇವರಿಗೆ ಕಳುಹಿಸಬೇಕು. ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡು ಪ್ರತಿಗಳನ್ನು ಕಳುಹಿಸಬೇಕು. ಇನ್ನಿತರ ಯಾವದೇ ವಿಷಯಕ್ಕೆ ನಿರ್ದೇಶಕರು ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩ ಇವರಿಗೆ ಬರೆಯಬೇಕು.

ಕರ್ನಾಟಕ ಭಾರತಿ

೧. ಸ್ವಾತಂತ್ರ್ಯೋತ್ಸವ ಸಂಚಿಕೆ
೨. ರಾಜ್ಯೋತ್ಸವ ಸಂಚಿಕೆ
೩. ಸಂಕ್ರಮಣ ಸಂಚಿಕೆ
೪. ಅಕ್ಷಯಾ ತೃತೀಯಾ ಸಂಚಿಕೆ

ಬಿಡಿ ಸಂಚಿಕೆ ಬೆಲೆ : ರೂ. ೨೦–೦೦

ಕರ್ನಾಟಕ ಭಾರತಿ

ಸಂಪುಟ : ೨೬ ಸಂಚಿಕೆ -೩

ಗೌರವ ಸಂಪಾದಕರು

ಡಾ. ಎಸ್. ರಾಮೇಗೌಡ

ಕುಲಪತಿಗಳು

ಸಂಪಾದಕರು

ಡಾ. ವೀರಣ್ಣ ರಾಜೂರ

ಡಾ. ಬಿ. ಆರ್. ಹಿರೇಮಠ

ಪ್ರಸಾರಾಂಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ಭಾರತಿ

ಕರ್ನಾಟಕ ವಿಶ್ವವಿದ್ಯಾಲಯದ ತ್ರೈಮಾಸಿಕ ಪತ್ರಿಕೆ

ಸಂಪುಟ : ೨೬ ಸಂಚಿಕೆ -೨

ರಾಜ್ಯೋತ್ಸವ ಸಂಚಿಕೆ

ನವ್ಹೆಂಬರ, ೧೯೯೪

ಪ್ರಕಾಶಕರು
ಪ್ರೊ. ಎಚ್.ವಿ. ನಾಗೇಶ್
ನಿರ್ದೇಶಕರು, ಪ್ರಸಾರಾಂಗ, ಕ.ವಿ.ವಿ.ಧಾರವಾಡ

ಮುದ್ರಕರು
ಜೆ. ಎ. ಪರೇರಾ
ನಿರ್ದೇಶಕರು
ಕ.ವಿ.ವಿ, ಮುದ್ರಣಾಲಯ, ಧಾರವಾಡ

ಪರಿವಿಡಿ

ಪುಟ

೧. ಕವಿಗಳು ನಾವು ಕಲಿಗಳು (ಕವನ) ೧
- ಶಿವರುದ್ರ ಕಲ್ಲೋಳಕರ

೨. ಆದಿ ಅನಾದಿ ಇಲ್ಲದಂದು : ಒಂದು ವಿಶ್ಲೇಷಣೆ ೩
- ಎಸ್.ಜಿ.ಮಹಾದೇವಪ್ಪ

೩. ಭಾಷಾವಿಜ್ಞಾನ : ಪಾರಿಭಾಷಿಕ ಟಿಪ್ಪಣಿಗಳು ೧೪
- ವಿಲ್ಯಂ ಮಾಡ್ತ

೪. ಲಂಕೇಶರ ನಾಟಕಗಳು : ಒಂದು ಪರಿಚಯ ೩೧
- ಬಸವರಾಜ ನಾಯ್ಕರ

೫. ಜಗನ್ನಾಥದಾಸರ ಹರಿಕಥಾಮೃತಸಾರ ೪೧
- ವೀರಣ್ಣ ರಾಜೂರ

೬. ಭೂಶಾಖ ವಿದ್ಯುತ್‌ಶಕ್ತಿ ೫೨
- ಎಂ.ಮುನಿಸ್ವಾಮಯ್ಯ

೭. ಶಿ.ಶಿ.ಬಸವನಾಳರ ಮಾಧ್ಯಮಿಕ ಶಿಕ್ಷಣ ಪ್ರಸಾರ ೬೦
- ಬಿ.ಆರ್.ಹಿರೇಮಠ

೮. ಬಸವನ ಬಾಗೇವಾಡಿಯ ಸ್ತಂಭಶಾಸನಗಳು ೭೬
- ಎಸ್.ಕೆ.ಕೊಪ್ಪಾ

೯. ಆರು ದಲಿತ ಆತ್ಮಕಥನಗಳು : ಒಂದು ಚಿಂತನೆ ೮೧
- ಮರಾಠಿ ಮೂಲ : ವಾಸುದೇವ ಮುಲಾಟೆ
- ಕನ್ನಡಕ್ಕೆ : ಎಸ್.ಪಿ.ಪಾಟೀಲ

೧೦. ಆಣೆ - ಪ್ರಮಾಣ - ಎಚ್. ವಿ. ನಾಗೇಶ್ ೮೯

೧೧. ಒರೆಗಲ್ಲು : ಇಮ್ಮಡಿ ಗುರುಸಿದ್ಧಸ್ವಾಮಿಗಳ ಶಿವರಹಸ್ಯ ಪುರಾಣದ ನಾಂದ್ಯ ೯೪
- ಎಸ್.ಶಿವಣ್ಣ

- ಗ್ರಂಥಾವಲೋಕನ
- ಕಾವ್ಯಜೀವಿ ೧೦೦

- ಲೇಖಕರ ವಿಳಾಸಗಳು

ಕವಿಗಳು ನಾವು ಕಲಿಗಳು

★ ಶಿವರುದ್ರ ಕಲ್ಲೋಳಕರ

ಕವಿಗಳು ನಾವು ಕಲಿಗಳು
ಲಯಬದ್ಧತೆಯಿಲ್ಲ
ರಾಗ ತಾಳಗಳಿಲ್ಲ
ಧ್ವನಿ ಸಂಯೋಜನೆಯೂ ಇಲ್ಲ ನಮ್ಮ ಕವನಗಳಿಗೆ
ಆದರೂ ನಾವು ಕವಿಗಳು.

ಮದ್ದು ಗುಂಡುಗಳಿಲ್ಲ
ಬಂದೂಕು ಫಿರಂಗಿಗಳಿಲ್ಲ
ಬಾಣ ಬತ್ತಾಸುಗಳೂ ಇಲ್ಲ
ಆ ವಿದ್ಯೆಯ ನಮಗಾರೂ ಕಲಿಸಿಲ್ಲ
ಬರಿಗೈಲಿ ವೈರಿಗಳ ನಿತ್ರಾಣಗೊಳಿಸುತ
ನಡೆದಿಹೆವು ನಾವು ಕಲಿಗಳು.

ಸಾಹಿತ್ಯವನು ನಮ್ಮ ಹೊಟ್ಟೆ
ಹೊರೆಯುವದಕ್ಕೋಸ್ಕರ ಬಳಸಲಿಲ್ಲ
ಶತಶತಮಾನಗಳಿಂದ ಅದರ ಮೇಲೆ
ನಮ್ಮ ಹಿಡಿತವೂ ಇಲ್ಲ
ಇದ್ದದ್ದು ಇದ್ದ ಹಾಗೆ
ಎದೆಗೆ ಒದ್ದು ಹೇಳುವ
ನಾವು ಕವಿಗಳು ನಾವು ಕಲಿಗಳು.

ಯುದ್ಧ ಭೂಮಿಯಲಿ ಇಲ್ಲ
ನಮಗೆ ನಿಯಮ ನಿಯತ್ತುಗಳು
ಶಿಸ್ತು ಬದ್ಧಗಳು
ವೈರಿಗಳ ಕಂಡೆತ್ತ ರುಂಡ ಚೆಂಡಾಡುತ್ತ
ತಲೆಮರೆಸಿಕೊಳ್ಳುತ್ತಾ
ನರಳುತ್ತಾ ಸಾಯುತ್ತಾ ನಡೆದಿಹೆವು
ನಾವು ಕಲಿಗಳು ನಾವು ಕವಿಗಳು.

ನಮ್ಮ ಆಕ್ರೋಶಗಳ
ಹಿಡಿದಿಡಲು ಇಲ್ಲ ಕಡಿವಾಣಗಳು
ಸಾಕಾಗುವದಿಲ್ಲ ಮದ್ದು ಗುಂಡುಗಳು
ಲಂಗು ಲಗಾಮವಿಲ್ಲದ ಕುದುರೆಗಳು
ದಿಕ್ಕು ಕಾಣದ ಮರುಭೂಮಿಯಲ್ಲಿ
ಹೇಂಕರಿಸುವಂತೆ ಗರ್ಜಿಸುತ್ತವೆ
ನಮ್ಮ ಕವನಗಳು ವೈರಿಗಳ ಕಂಡು.

ಆದಿ ಅನಾದಿ ಇಲ್ಲದಂದು : ಒಂದು ವಿಶ್ಲೇಷಣೆ

★ ಎನ್.ಜಿ.ಮಹಾದೇವಪ್ಪ

ಅನೇಕ ವಚನಗಳು ''ಆದಿ ಅನಾದಿ ಇಲ್ಲದಂದು...'' [೧] ಅಥವಾ ''ಆದಿ ಇಲ್ಲದಂದು, ಅನಾದಿ ಇಲ್ಲದಂದು,'' ಅಥವಾ ''ಆದಿ ಮಧ್ಯಾವಸಾನವಿಲ್ಲದಂದು, ಆದಿ ಅನಾದಿ ನಾದ ಬಿಂದು ಕಳೆಗಳಿಲ್ಲದಂದು''[೨], ಅಥವಾ ''ಆದಿ ಅನಾದಿ ಇಲ್ಲದಂದು, ಶೂನ್ಯ ನಿಶ್ಶೂನ್ಯವಿಲ್ಲದಂದು... ಭೇದಾಭೇದಗಳಿಲ್ಲದಂದು...''[೩] ಅಥವಾ ''ಆದಿಯಿಂದತ್ತತ್ತ ನೀನೆ ಅಯ್ಯಾ, ಅನಾದಿಯಿಂದತ್ತತ್ತ ನೀನೆ ಅಯ್ಯಾ...''[೪] ಎಂಬ ಮಾತುಗಳನ್ನೊಳಗೊಳ್ಳುತ್ತವೆ. ಇಂತಹ ವಚನಗಳು (ಆಯಾ ವಚನಗಳ ಉಳಿದ ಭಾಗಗಳೊಡಗೂಡಿ) ಪರಶಿವನ ಸೃಷ್ಟಿಪೂರ್ವಸ್ಥಿತಿಗೆ ಅನ್ವಯಿಸುತ್ತವೆ. ಪ್ರಪಂಚವಾಗಲಿ, ಸೃಷ್ಟಿಸಬೇಕೆಂಬ ಇಚ್ಛೆಯಾಗಲಿ ಇಲ್ಲದಿದ್ದಾಗ ಪರಶಿವನೊಬ್ಬನೆ ಇದ್ದನು, ಅಂತಹ ಸ್ಥಿತಿಯಲ್ಲಿ ಅವನನ್ನು ಯಾವುದೇ ನಿರ್ದಿಷ್ಟ ಭಾಷೆಯಲ್ಲಿ ವರ್ಣಿಸಲು ಸಾಧ್ಯವಿಲ್ಲ (ಅವನು ''ಅನಿರ್ವಾಚ್ಯ ಮಹಾಶೂನ್ಯ''[೫]) ಎಂದು ತಿಳಿಸಬೇಕಾಗಿರುವುದು ಇಂತಹ ವಚನಗಳ ಮೂಲ ಉದ್ದೇಶ.

ಆದರೆ ''ಆದಿ ಅನಾದಿ ಇಲ್ಲದಂದು'' ಮತ್ತು ''ಆದಿಯಿಂದತ್ತತ್ತ, ಅನಾದಿಯಿಂದತ್ತತ್ತ'' ಎಂಬ ಪದಗುಚ್ಛಗಳ ಬಳಕೆಯು (ಅಥವಾ ಅದೇ ಅರ್ಥದ ಬೇರೆ ಪದಗುಚ್ಛಗಳ ಬಳಕೆಯು) ನಮ್ಮ ತರ್ಕಬುದ್ಧಿಗೆ ಒಂದು ಸವಾಲನ್ನೊಡ್ಡುತ್ತದೆ. ಆ ಸವಾಲಿಗೆ ನಾವು ಮೂರು ರೂಪಗಳನ್ನು ಕೊಡಬಹುದು.

೧. ಪ್ರಪಂಚದ ಪ್ರತಿಯೊಂದು ವಸ್ತುವಿಗೂ ಆದಿಯಿದೆ ಹಾಗೂ ನಿರ್ದಿಷ್ಟ ಕಾರಣವಿದೆ. ಇದಕ್ಕೆ ಯಾವ ವಸ್ತುವೂ ಹೊರತಲ್ಲ. ಉದಾಹರಣೆಗೆ ಕುರ್ಚಿಗೆ ಬಡಗಿಯೇ ಕಾರಣ ಮತ್ತು ಅದು ಒಂದು ನಿರ್ದಿಷ್ಟ ಕಾಲದಲ್ಲಿ ರಚಿತವಾಯಿತು. ಅಷ್ಟೇ ಏಕೆ, ವಚನಕಾರರ ಪ್ರಕಾರ, ಇಡೀ ವಿಶ್ವಕ್ಕೆ ಈ ಅರ್ಥದಲ್ಲಿ ಒಂದು ಆದಿ ಇದೆ. ಆದರೆ ವಿಶ್ವವನ್ನು ಸೃಷ್ಟಿಸಿದ ಪರಶಿವನಿಗೆ ಈ ರೀತಿ ಆದಿಯಿರಲು ಸಾಧ್ಯವಿಲ್ಲ. ಅವನಿಗೂ ಆದಿ ಇದ್ದಿದ್ದರೆ, ಅವನನ್ನು ನಿರ್ದಿಷ್ಟ ಕಾಲವೊಂದರಲ್ಲಿ ಸೃಷ್ಟಿಸುವ ವ್ಯಕ್ತಿ ಅವನಿಗಿಂತ ಉತ್ತಮನೂ ಹಿರಿಯನೂ ಆಗಿರಬೇಕಾಗುತ್ತದೆ. ಆದರೆ ಪರಶಿವನಿಗಿಂತ ಹಿರಿಯನೂ ಉತ್ತಮನೂ ಆದ ವ್ಯಕ್ತಿಯನ್ನು ಊಹಿಸಿಕೊಳ್ಳಲೂ ವಿರೋಧಾಭಾಸವಾಗುವುದರಿಂದ, ಪರಶಿವನೇ ಅತ್ಯುತ್ತಮನೆಂದೂ ಅತ್ಯಂತ ಹಿರಿಯ(ನಿತ್ಯ)ನೆಂದೂ — ಅಥವಾ ಅನಾದಿಯೆಂದೂ — ಹೇಳಬೇಕಾಗುತ್ತದೆ.

ಈ ದೃಷ್ಟಿಯಿಂದ ಮೇಲಿನ ಮಾತುಗಳನ್ನು ವಿಶ್ಲೇಷಿಸಿದಾಗ, ಪರಶಿವನು ''ಆದಿ ಇಲ್ಲದವನು'' ಅಥವಾ ''ಅನಾದಿ'' ಎಂದಷ್ಟೇ ವಚನಗಳು ಹೇಳಿದ್ದರೆ, ಯಾವ ಸಮಸ್ಯೆಯೂ ಏಳುತ್ತಿರಲಿಲ್ಲ. ಆದರೆ ಅವು ಅವನನ್ನು ''ಅನಾದಿ ಇಲ್ಲದವನು'' ಅಥವಾ ''ಅನಾದಿಯಿಂದತ್ತತ್ತ'' ಇರುವವನು ಎಂದು ಹೇಳಿ, ಒಂದು ತಾರ್ಕಿಕ ಸಮಸ್ಯೆಯನ್ನು ಉಂಟುಮಾಡಿವೆ. ಅನಾದಿ ಇಲ್ಲದ (ಅಂದರೆ ಆದಿ ಇರುವ) ಪರಶಿವ ಯಾರು? ಅಥವಾ ಆದಿಯಿಲ್ಲದ ಪರಶಿವ ಇರುವಂತೆ ಅನಾದಿಯಿಲ್ಲದ ಪರಶಿವನೂ ಇದ್ದಾನೆಯೇ? ಹಾಗೆ ಇಬ್ಬರು ಪರಶಿವರು ಇರಲು ಸಾಧ್ಯವೆ? ಇಬ್ಬರು ಇರಲು ಸಾಧ್ಯವಿಲ್ಲವಾದರೆ, ಅಥವಾ ಅನಾದಿಯಿಲ್ಲದ ಪರಶಿವನೂ ಇರಲು ಸಾಧ್ಯವಿಲ್ಲವಾದರೆ '' ಅನಾದಿಯಿಲ್ಲದ'' ಎಂಬ ಪದಗುಚ್ಛಕ್ಕೆ ಅರ್ಥವೇನು?

ಇದರ ಜೊತೆಗೆ ಏಳುವ ಮತ್ತೊಂದು ತಾರ್ಕಿಕ ಸಮಸ್ಯೆಯನ್ನು ಸಂಕ್ಷಿಪ್ತವಾಗಿ ಹೀಗೆ ನಿರೂಪಿಸಬಹುದು. ಒಂದು ವಸ್ತು ಅಥವಾ ವ್ಯಕ್ತಿಗೆ ಆದಿಯಿರಬೇಕು ಅಥವಾ ಅನಾದಿ ಇರಬೇಕು. ಆದಿಯಾಗಲಿ ಅನಾದಿಯಾಗಲಿ ಇಲ್ಲದ ವಸ್ತು ಅಥವಾ ವ್ಯಕ್ತಿ ಉಂಟೆ? ವಾಸ್ತವವಾಗಿ, ಅಂತಹ ವಸ್ತು ಅಥವಾ ವ್ಯಕ್ತಿ ಉಂಟೆಂದು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಉದಾಹರಣೆಗೆ '' ಈ ಕುರ್ಚಿಗೆ ಸಣ್ಣ ಗಾತ್ರವೂ ಇಲ್ಲ, ಸಣ್ಣದಲ್ಲದ (ದೊಡ್ಡ ಅಥವಾ ಮಧ್ಯಮತರದ) ಗಾತ್ರವೂ ಇಲ್ಲ'' ಎಂದು ಹೇಳುವುದು ತಾರ್ಕಿಕ ದೃಷ್ಟಿಯಿಂದ ಹೇಗೆ ಅಸಮಂಜಸವೋ ಹಾಗೆಯೇ ''ಪರಶಿವನಿಗೆ (ಅಥವಾ ಮತ್ತಾರಿಗೇ ಆಗಲಿ) ಆದಿಯೂ ಇಲ್ಲ, ಅನಾದಿಯೂ ಇಲ್ಲ'' ಎಂದು ಹೇಳುವುದೂ ಅಷ್ಟೇ ಅಸಮಂಜಸವಾಗುತ್ತದೆ. ಒಂದು ವಸ್ತುವಿಗೆ ಈ ಗಾತ್ರವಿರಬೇಕು, ಅಥವಾ ಅದರ ವಿರುದ್ಧದ ಗಾತ್ರವಿರಬೇಕು ಎಂದು ಯೋಚಿಸುವುದು ಮಾನವ ಆಲೋಚನೆಯ ಮೂಲನಿಯಮಕ್ಕನುಗುಣವಾಗಿದೆ. '' ಈ ಕುರ್ಚಿಗೆ ಸಣ್ಣಗಾತ್ರವೂ ಇಲ್ಲ, ಮತ್ತಾವ ಗಾತ್ರವೂ ಇಲ್ಲ'' ಎಂದು ಯೋಚಿಸುವುದು ಅಂತಹ ಮೂಲ ನಿಯಮಕ್ಕೆ ವಿರುದ್ಧವಾಗಿದೆ. ಅದೇ ರೀತಿ ''ಪರಶಿವನಿಗೆ ಆದಿಯೂ ಇಲ್ಲ, ಅನಾದಿಯೂ ಇಲ್ಲ'' ಎಂದು ಯೋಚಿಸುವುದೂ ಸಹ ಮಾನವ ಆಲೋಚನೆಯ ಮೂಲ ನಿಯಮಕ್ಕೆ ವಿರುದ್ಧವಾಗಿದೆ.

೨. ಎರಡನೆಯ ಸಮಸ್ಯೆಯು ಮೊದಲನೆ ಸಮಸ್ಯೆಯ ಮತ್ತೊಂದು ರೂಪ. ಪರಶಿವನು 'ಆದಿಯಿಂದತ್ತತ್ತ' ಇರುವವನು ಎಂದು ಹೇಳುವುದು ಸಮಂಜಸ. ಏಕೆಂದರೆ ಪ್ರಪಂಚಕ್ಕೆ ಒಂದು ಆದಿ ಇದ್ದರೆ. ಅದನ್ನು ಸೃಷ್ಟಿಸಿದ ಪರಶಿವ 'ಆದಿಯಿಂದತ್ತತ್ತ'ಲೇ ಇರಬೇಕಾಗುತ್ತದೆ. ಆದರೆ ಅವನಿಗೆ 'ಅನಾದಿಯಿಂದತ್ತತ್ತ' ಎಂಬ ಅದರ ವಿರುದ್ಧವಾದ ವಿಶೇಷಣವನ್ನೂ ಅನ್ವಯಿಸಿ, ವಚನಕಾರರು ಗೊಂದಲವನ್ನುಂಟುಮಾಡಿದ್ದಾರೆಂದು ಯಾರಿಗಾದರೂ ತಕ್ಷಣವೇ ಅನ್ನಿಸುತ್ತದೆ. ಈ ಅನ್ವಯದಿಂದಾಗಿ, ಮೇಲಿನಂತೆ ಇಲ್ಲೂ ಕೆಲವು ಸಮಸ್ಯೆಗಳು ಏಳುತ್ತವೆ. ಆದಿಯಿಂದ (ಸೃಷ್ಟಿಯಿಂದ) ಆಚೆಗಿರುವ ಪರಶಿವನಲ್ಲದೆ,

ಅನಾದಿಯಿಂದ ಆಚೆಗಿರುವ ಮತ್ತೊಬ್ಬ ಪರಶಿವನಿದ್ದಾನೆಯೇ? ಅಂತಹ ಪರಶಿವನನ್ನು ಕಲ್ಪಿಸಿಕೊಳ್ಳಲಾದರೂ ಸಾಧ್ಯವೆ? ಅದು ಸಾಧ್ಯವಿಲ್ಲವಾದರೆ, 'ಅನಾದಿಯಿಂದತ್ತತ್ತ' ಎಂಬುದಕ್ಕೆ ಅರ್ಥವೇನು?

ಇದರ ಜೊತೆಗೇ ಏಳುವ ಮತ್ತೊಂದು ತಾರ್ಕಿಕ ಸಮಸ್ಯೆಯನ್ನು ಹೀಗೆ (ಸಂಕ್ಷಿಪ್ತವಾಗಿ) ನಿರೂಪಿಸಬಹುದು. "ಈ ಆಕೃತಿಗೆ ವೃತ್ತದ ಗುಣಗಳೂ ಅದರ ವಿರುದ್ಧವಾದ ತ್ರಿಭುಜ ಅಥವಾ ಚೌಕದ ಗುಣಗಳೂ ಏಕಕಾಲದಲ್ಲಿ ಇವೆ" ಎಂದು ಹೇಳುವುದು ತಾರ್ಕಿಕ ದೃಷ್ಟಿಯಿಂದ ಹೇಗೆ ಅಸಮಂಜಸವೋ, ಹಾಗೆಯೇ "ಪರಶಿವನಿಗೆ ಏಕಕಾಲದಲ್ಲಿ ಆದಿಯಿಂದತ್ತತ್ತ ಇರಲೂ ಅನಾದಿಯಿಂದತ್ತತ್ತ ಇರಲೂ ಸಾಧ್ಯವಿದೆ" ಎಂದು ಹೇಳುವುದೂ ತಾರ್ಕಿಕ ದೃಷ್ಟಿಯಿಂದ ಅಸಮಂಜಸ.

ಇಲ್ಲಿ ಮೇಲ್ನೋಟಕ್ಕೆ ಎರಡನೆಯ ಸಮಸ್ಯೆಯು ಮೊದಲನೆಯ ಸಮಸ್ಯೆಯಿಂದ ಭಿನ್ನವಲ್ಲ ಎನ್ನಿಸುತ್ತದೆ. ಹಾಗೆ ಅನಿಸಲು ಒಂದು ಕಾರಣವೂ ಇದೆ. "ಆದಿಯಿಲ್ಲ" ಎಂದರೂ ಒಂದೇ, "ಆದಿಯಿಂದತ್ತತ್ತ" ಎಂದರೂ ಒಂದೇ; ಅದೇ ರೀತಿ, "ಅನಾದಿಯಿಲ್ಲ" ಎಂದರೂ ಒಂದೇ, "ಅನಾದಿಯಿಂತ್ತತ್ತ" ಎಂದರೂ ಒಂದೇ — ಹೀಗೆಂದು ಕೆಲವರು ವಾದಿಸಬಹುದು. ಆದರೆ ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಿದರೆ, ಕೋಶೀಯ ಅರ್ಥದ ದೃಷ್ಟಿಯಿಂದ ಇಲ್ಲಿ ಎರಡು ಭಿನ್ನ ಸಮಸ್ಯೆಗಳಿರುವುದು ವೇದ್ಯವಾಗುತ್ತದೆ. "ಆದಿಯೂ ಇಲ್ಲ, ಅನಾದಿಯೂ ಇಲ್ಲ' ಎಂದರೆ 'ಆದಿ' ಎಂಬ ವಿಶೇಷಣವನ್ನಾಗಲೀ, ಅದರ ವಿರುದ್ಧವಾದ "ಅನಾದಿ" ಎಂಬ ವಿಶೇಷಣವನ್ನಾಗಲಿ ಪರಶಿವನಿಗೆ ಯಾವಾಗಲೂ ಅನ್ವಯಿಸಬಾರದು, ಎಂಬರ್ಥವಿದೆ. ಆದರೆ "ಆದಿಯಿಂದತ್ತತ್ತ, ಅನಾದಿಯಿಂದತ್ತತ್ತ" ಎಂಬ ಮಾತಿಗೆ "ಆದಿಯಿಂದಲೂ ಆಚೆಗಿದ್ದಾನೆ, ಅನಾದಿಯಿಂದಲೂ ಆಚೆಗಿದ್ದಾನೆ" ಎಂಬ ಎರಡೂ ವಿಶೇಷಣಗಳನ್ನು ಏಕಕಾಲದಲ್ಲಿ ಪರಶಿವನಿಗೆ ಅನ್ವಯಿಸಬೇಕು, ಎಂಬರ್ಥವಿದೆ.

೩. ಈ ಎರಡು ಸಮಸ್ಯೆಗಳ ಮಿಲನದಿಂದ ಸಮಸ್ಯೆಯ ಮೂರನೆ ರೂಪ ಹುಟ್ಟುತ್ತದೆ. ಪರಶಿವನಿಗೆ ಆದಿಯಿರಬೇಕು, ಅಥವಾ ಅನಾದಿಯಿರಬೇಕು; ಅವನು ಆದಿಯಿಂದಾಚೆಗೆ ಇರಬಾರದು ಅಥವಾ ಅನಾದಿಯಿಂದಾಚೆಗೆ ಇರಬಾರದು, ಎಂದು ನಾವು ಸ್ವಾಭಾವಿಕವಾಗಿ ನಂಬುತ್ತೇವೆ. ಆದರೆ ಕೆಲವು ವಚನಗಳು ಪರಶಿವನಿಗೆ ಆದಿಯಾಗಲಿ ಅನಾದಿಯಾಗಲಿ ಇಲ್ಲವೆಂದೂ, ಮತ್ತೆ ಕೆಲವು ವಚನಗಳು, ಪರಶಿವನು ಆದಿ ಮತ್ತು ಅನಾದಿ ಎರಡರಿಂದಲೂ ಆಚೆ ಇದ್ದಾನೆ ಎಂದೂ ಹೇಳುತ್ತವೆ. ಅಂದರೆ, ಯಾವ ವಿಶೇಷಣಗಳನ್ನು ಕೆಲವು ವಚನಗಳು ನಿಷೇಧಿಸುತ್ತವೆಯೋ, ಅವೇ ವಿಶೇಷಣಗಳನ್ನು ಬೇರೆ ವಚನಗಳು ಅನುಮೋದಿಸುತ್ತವೆ. ಹೀಗಾಗಿ, ವಿರೋಧ ಸತ್ಯವೆಂದು ನಂಬಬೇಕೋ.

ಅನುಮೋದನೆ ಸತ್ಯವೆಂದು ನಂಬಬೇಕೋ, ಇವುಗಳ ಸತ್ಯಾಸತ್ಯತೆಯನ್ನು ನಿರ್ಧರಿಸುವ ಕ್ರಮ ಯಾವುದು, ಎಂಬ ಸಮಸ್ಯೆ ಉಂಟಾಗುತ್ತದೆ.

ಈ ಮೂರು ಸಮಸ್ಯೆಗಳಿಗೆ ಪರಿಹಾರವಿದೆಯೆ ಎಂಬುದನ್ನು ಈಗ ಪರಿಶೀಲಿಸೋಣ. ಮೊದಲು ಮೂರನೆಯ ಸಮಸ್ಯೆಯನ್ನೇ ಕೈಗೆತ್ತಿಕೊಳ್ಳೋಣ. ಉದಾಹರಣೆಗೆ, ಒಬ್ಬ ವ್ಯಕ್ತಿ ಯಾವುದೋ ಒಂದು ಧರ್ಮಕ್ಕೆ ಸೇರಿದ್ದಾನೆ ಎಂದು ಊಹಿಸೋಣ. ಆಗ ನಾವು "ಅವನು ಏಕಕಾಲದಲ್ಲಿ ವೀರಶೈವನೂ ಆಗಿದ್ದಾನೆ, ವೀರಶೈವೇತರನೂ ಆಗಿದ್ದಾನೆ" ಎಂದು ಹೇಳಿದರೆ ಸ್ವವಿರೋಧ (Self-Contradiction) ಆಗುತ್ತದೆ; ಅದೇ ರೀತಿ "ಅವನು ವೀರಶೈವನೂ ಅಲ್ಲ, ವೀರಶೈವೇತರನೂ ಅಲ್ಲ" ಎಂದರೂ ಅದೇ ಸ್ವವಿರೋಧವೇ ಆಗುತ್ತದೆ. ಅಂದರೆ, ಒಂದು ವಾಕ್ಯ ಅಭಾವಾತ್ಮಕವಾಗಿಯೂ ಮತ್ತೊಂದು ವಾಕ್ಯ ಭಾವಾತ್ಮಕವಾಗಿಯೂ ಇದ್ದರೂ, ಅವುಗಳ ತಾರ್ಕಿಕ ರೂಪ, ಅಥವಾ ಅವುಗಳ ವ್ಯಕ್ತಪಡಿಸುವ ಸಮಸ್ಯೆ ಸಾರದಲ್ಲಿ ಒಂದೇ. ಅದೇ ರೀತಿ, "ಪರಶಿವನು ಆದಿಯಿಂದಲೂ ಅಸ್ತಿತ್ವ ಇದ್ದಾನೆ, ಅನಾದಿಯಿಂದಲೂ ಅಸ್ತಿತ್ವ ಇದ್ದಾನೆ" ಎಂದರೂ, "ಪರಶಿವನಿಗೆ ಆದಿಯೂ ಇಲ್ಲ, ಅನಾದಿಯೂ ಇಲ್ಲ" ಎಂದರೂ ತಾರ್ಕಿಕವಾಗಿ ಒಂದೇ ಅರ್ಥವಿದೆ. ಆದುದರಿಂದ, ಮೊದಲನೆಯ ಸಮಸ್ಯೆ ಎರಡನೆ ಸಮಸ್ಯೆಯಿಂದ ಯಾವ ರೀತಿಯಿಂದಲೂ ಭಿನ್ನವಲ್ಲ. ಇದರಿಂದಾಗಿ, ಯಾವುದು ಸತ್ಯ, ಯಾವುದು ಅಸತ್ಯ ಎಂಬ ಮೂರನೆಯ ಸಮಸ್ಯೆ ಮಾಯವಾಗುತ್ತದೆ. ಅಂದರೆ, ನಮಗೆ ಕೊನೆಗೆ ಉಳಿಯುವುದು ಒಂದೇ ಸಮಸ್ಯೆ — ಮೊದಲನೆಯದು ಅಥವಾ ಎರಡನೆಯದು. ಮೇಲ್ನೋಟಕ್ಕೇ ಈ ಸಮಸ್ಯೆ ಅಪರಿಹಾರ್ಯ ಎಂದು ಕಾಣುವುದರಿಂದ, ವಚನಕಾರರಿಗೆ ಕೇವಲ ಸರಳ ತರ್ಕವೂ ಗೊತ್ತಿರಲಿಲ್ಲ ಎಂಬ ಆಕ್ಷೇಪಣೆಯಲ್ಲಿ ತಥ್ಯವಿದೆಯೆನಿಸುತ್ತದೆ. ಆದರೆ ಸ್ವಲ್ಪ ಸೂಕ್ಷ್ಮವಾಗಿ ಪರಿಶೀಲಿಸಿದರೆ — ಅಂದರೆ, "ಆದಿಯೂ ಇಲ್ಲ, ಅನಾದಿಯೂ ಇಲ್ಲ" ಎಂಬ ಪದಗಳಿಗೆ ಸಾಮಾನ್ಯ ಕೋಶೀಯ ಅರ್ಥ ಕೊಡದೆ, ಅವುಗಳಿಗೆ ವಿಶೇಷವಾದ ಹಾಗೂ ಸಾಂದರ್ಭಿಕ ಅರ್ಥ ಕೊಟ್ಟರೆ — ಆಗ ಅವುಗಳಲ್ಲಿ ಕಾಣುವ ಸ್ವವಿರೋಧವು ಕೇವಲ ತೋರಿಕೆಯದು, ನಿಜವಾದುದಲ್ಲ, ಎಂಬುದು ಸ್ಪಷ್ಟವಾಗುತ್ತದೆ.

೨

ನಮಗೆ ಯಾವುದೇ ಒಂದು ವಸ್ತುವಿನ ಅನುಭವ (ಅಥವಾ ಜ್ಞಾನ) ಉಂಟಾಗಬೇಕಾದರೆ, ಆ ವಸ್ತುವು ನಮ್ಮ ಅನುಭವದ ಪರಿಧಿಯೊಳಗೆ ಬಂದರೆ ಸಾಲದು. ಅದನ್ನು ನಾವು ಈಗಾಗಲೆ ತಿಳಿದುಕೊಂಡಿರುವ ವಸ್ತುಗಳೊಡನೆ ಹೋಲಿಸಬೇಕಾಗುತ್ತದೆ. ಹಾಗೂ ಅದಕ್ಕೂ ಇತರ ವಸ್ತುಗಳಿಗೂ ಇರುವ ಭಿನ್ನತೆಯನ್ನು ಗಮನಿಸಬೇಕಾಗುತ್ತದೆ. ಈ ಹೋಲಿಕೆ ಭಿನ್ನತೆಗಳ ಅರಿವಿಲ್ಲದೆ, ಯಾವ ವಸ್ತುವಿನ ಅನುಭವವೂ ನಮಗಾಗುವುದಿಲ್ಲ. ಉದಾಹರಣೆಗೆ ಪ್ರಪಂಚದ ತುಂಬ ಕೆಂಪು ಬಣ್ಣದ ವಸ್ತುಗಳೇ ಇದ್ದಿದ್ದರೆ.

ನಮಗಾಗುತ್ತಿದ್ದ ಅನುಭವವನ್ನು ''ಕೆಂಪು ಬಣ್ಣದ ವಸ್ತುಗಳ ಅನುಭವ'' ಎಂದು ನಾವು ಕರೆಯುತ್ತಿರಲಿಲ್ಲ. ನಮ್ಮ ಅನುಭವಕ್ಕೆ ಬರುವ ಕೆಂಪು ಬಣ್ಣವನ್ನು 'ಕೆಂಪು ಬಣ್ಣ'ವೆಂದು ನಾವು ವರ್ಣಿಸಬೇಕಾದರೆ, ಅದನ್ನು ನಾವು ಹಿಂದೆ ನೋಡಿದ ಕೆಂಪು ಬಣ್ಣದೊಡನೆ ಹೋಲಿಸಬೇಕು ಹಾಗೂ (ಅದು ನಿಜವಾಗಿಯೂ ಕೆಂಪು ಬಣ್ಣವೇ ಆಗಿದ್ದರೆ) ಅದನ್ನು ''ಹಸಿರು, ಹಳದಿ, ಇತ್ಯಾದಿ ಬಣ್ಣಗಳಲ್ಲ'' ಎಂದು (ಮಾನಸಿಕವಾಗಿಯಾದರೂ) ವರ್ಣಿಸಬೇಕು. ಅಂದರೆ, 'ಇದು ಕೆಂಪು' ಎಂಬ ಜ್ಞಾನವು ಉಂಟಾದಾಗಲೇ 'ಇದು ಕೆಂಪನ್ನುಳಿದು ಬೇರೆ ಬಣ್ಣವಲ್ಲ' ಎಂಬ ಅಪ್ರತ್ಯಕ್ಷ ಜ್ಞಾನವೂ ಉಂಟಾಗುತ್ತದೆ. ಅಷ್ಟೇ ಅಲ್ಲ, ಹಸಿರು, ಹಳದಿ, ಮುಂತಾದ ಬಣ್ಣಗಳು ವಾಸ್ತವವಾಗಿಯೂ ಇರಬೇಕಾಗುತ್ತದೆ (ಕೆಂಪು ಬೇರೆ, ಇಂತಹ ಅಪ್ರತ್ಯಕ್ಷ ಜ್ಞಾನದ ವಸ್ತುಗಳು ಇರಬೇಕಾಗಿಲ್ಲ, ಅಥವಾ ನಾವು ಕಲ್ಪಿಸಿಕೊಂಡಂತಹ ಗುಣಗಳನ್ನು ಅವು ವಾಸ್ತವವಾಗಿಯೂ ಹೊಂದಿರಬೇಕಾಗಿಲ್ಲ). ಒಂದು ವೇಳೆ ಕೆಂಪು ಬಣ್ಣಕ್ಕಿಂತ ಭಿನ್ನವಾದ ಬಣ್ಣಗಳೇ ಇಲ್ಲದಿದ್ದರೆ, ಕೆಂಪನ್ನು ಕೆಂಪಲ್ಲದ ಬಣ್ಣಗಳಿಂದ ಪ್ರತ್ಯೇಕಿಸಬೇಕಾಗಿಲ್ಲ, ಅಥವಾ, ಅದಕ್ಕೆ 'ಕೆಂಪು' ಎಂಬ ಹೆಸರನ್ನು ಕೊಡಬೇಕಾಗಿಲ್ಲ. ''ಇದು ಇವರ ಮೊದಲನೆ ಪುಸ್ತಕ'' ಎಂದರೆ '' ಇವರ ಎರಡನೆಯ ಪುಸ್ತಕವೂ ಉಂಟು'' ಅಥವಾ ಎರಡನೆಯ ಪುಸ್ತಕ ಬರೆಯುವ ಯೋಜನೆಯಾದರೂ ಉಂಟು ಎಂಬರ್ಥ. ಅವರು ಒಂದೇ ಪುಸ್ತಕ ಬರೆದಿದ್ದು, ಎರಡನೆಯ ಪುಸ್ತಕದ ಯೋಜನೆಯೇ ಇಲ್ಲದಿದ್ದರೆ '' ಇದು ಇವರ ಮೊದಲನೆ ಪುಸ್ತಕ'' ಎನ್ನುವುದರಲ್ಲಿ ಅರ್ಥವಿಲ್ಲ. ಹೀಗೆ ''ಮೊದಲನೆಯ-ಎರಡನೆಯ,'' ''ಕೆಂಪು-ಕೆಂಪಲ್ಲದ'' ಮುಂತಾದ ಜೋಡಿಗಳ ಪದಗಳು ಹೇಗೆ ಪರಸ್ಪರ ಪೂರಕವೋ ಹಾಗೆ ''ಆದಿ-ಅನಾದಿ'' ಜೋಡಿಯ ಪದಗಳೂ ಪರಸ್ಪರ ಪೂರಕ. ಆದರೆ ''ಕೆಂಪು'' ಎಂಬುದು ಹೇಗೆ ಪ್ರತ್ಯಕ್ಷ ಜ್ಞಾನವೋ ಹಾಗೆ ಆದಿಯ ಜ್ಞಾನವೂ ಪ್ರತ್ಯಕ್ಷವೆ; ಮತ್ತು ''ಕೆಂಪಲ್ಲದ'' ಎಂಬುದು ಹೇಗೆ ಅಪ್ರತ್ಯಕ್ಷ ಜ್ಞಾನವೋ ಹಾಗೆಯೇ ''ಅನಾದಿ''ಯ ಜ್ಞಾನವೂ ಅಪ್ರತ್ಯಕ್ಷವೇ. ಈ ಅಪ್ರತ್ಯಕ್ಷ ಜ್ಞಾನವನ್ನು ನಾವು ಉದ್ದೇಶಪೂರ್ವಕವಾಗಿ ಹಾಗೂ ಪ್ರಯತ್ನಪೂರ್ವಕವಾಗಿ ಪಡೆಯಬೇಕಾಗಿಲ್ಲ. ಅದನ್ನು ನಾವು ನಮಗರಿವಿಲ್ಲದೆಯೇ, ಅಯಾಚಿತವಾಗಿ, ಅನಾಯಾಸವಾಗಿ ಪಡೆಯುತ್ತೇವೆ.

ಒಂದು ವಸ್ತುವು ಒಂದು ನಿರ್ದಿಷ್ಟ ಕಾಲದಲ್ಲಿ ಮತ್ತು ಒಂದು ನಿರ್ದಿಷ್ಟ ಕಾರಣದಿಂದಾಗಿ ರಚಿತವಾಗಿದೆ ಎಂಬುದನ್ನು ತಿಳಿದು, ಅದರ ಆದಿಯನ್ನು ತಿಳಿದು, ಅದರ ವಿರುದ್ಧವಾದ ಅನಾದಿಯ ಬಗೆಗೆ ಅಪ್ರತ್ಯಕ್ಷವಾಗಿ ತಿಳಿದುಕೊಳ್ಳುತ್ತೇವೆ. ಈ ರೀತಿ ಅನಾದಿತ್ವ ಇರುವ ವಸ್ತು, ಸೃಷ್ಟಿಕರ್ತನಾದ ಪರಶಿವನಲ್ಲದೆ ಮತ್ತಾವುದೂ ಇರಲು ಸಾಧ್ಯವಿಲ್ಲ, ಎಂಬುದನ್ನು ನಾವು ತಾರ್ಕಿಕವಾಗಿ ತಿಳಿದುಕೊಳ್ಳುತ್ತೇವೆ. ಆದರೆ

ಆದಿಯೆಂದರೇನು ಎಂಬುದನ್ನು ತಿಳಿಯದೇಯೇ ಅನಾದಿಯೆಂದರೇನು ಎಂಬುದನ್ನು ತರ್ಕಿಸಲಾಗಲಿ, ಊಹಿಸಲಾಗಲಿ ಸಾಧ್ಯವಿಲ್ಲ. ಅದೇ ರೀತಿ ಮೊದಲೇ ಅನಾದಿಯ (ಪರಶಿವನ) ಪ್ರತ್ಯಕ್ಷ ಜ್ಞಾನ ಪಡೆದು, ಅನಂತರ ಆದಿಯ (ಪ್ರಪಂಚದ) ಅಪ್ರತ್ಯಕ್ಷ ಜ್ಞಾನ ಪಡೆಯಲೂ ಸಾಧ್ಯವಿಲ್ಲ. ಏಕೆಂದರೆ ನಮಗೆ ಅನಾದಿಯ ಪರಿಕಲ್ಪನೆ ಪ್ರತ್ಯಕ್ಷದ ಮೂಲಕ ಸಾಧ್ಯವಾಗುವುದೇ ಇಲ್ಲ.

ಹೀಗೆ, ಒಂದು ವಸ್ತು, ಗುಣ, ಕರ್ಮಗಳ ಅನುಭವದಿಂದ ಅದರ ವಿರುದ್ಧದ ವಸ್ತು, ಗುಣ, ಕರ್ಮಗಳನ್ನು ಊಹಿಸುವುದು ಅಥವಾ ತರ್ಕಿಸುವುದು ಮಾನವ ಬುದ್ಧಿಯ ಸ್ವಭಾವ; ಮಾನವ ಬುದ್ಧಿಯ ರಚನೆಯಾಗಿರುವುದೇ ಹಾಗೆ. ಅಂದರೆ, ಆದಿ, ಅನಾದಿ ಮತ್ತು ಅವುಗಳಲ್ಲಿನ ಅಂತರ-ಇವು ಇವೆ ಎಂದು ಹೇಳಬೇಕಾದರೆ ಮನುಷ್ಯನ ಬುದ್ಧಿಯೂ ಅಸ್ತಿತ್ವದಲ್ಲಿರಬೇಕಾಗುತ್ತದೆ. ಮನುಷ್ಯನ ಬುದ್ಧಿ ಅಸ್ತಿತ್ವಕ್ಕೆ ಬರಬೇಕಾದರೆ, ಸೃಷ್ಟಿಯಾಗಿರಬೇಕಾದುದು ಅವಶ್ಯಕವಾಗುತ್ತದೆ.

ಒಂದು ವೇಳೆ ನಾವು ಪ್ರಪಂಚಕ್ಕೆ ಆದಿ ಇದೆ ಎಂದು ನಂಬುವುದಾದರೆ ಅದನ್ನು ಸೃಷ್ಟಿಸಿದ ಪರಮಾತ್ಮನು ಅನಾದಿಯಾಗಿರಬೇಕು ಎಂದು ನಾವು ತರ್ಕಿಸುತ್ತೇವೆ. ಆದರೆ ಸೃಷ್ಟಿಯೇ ಆಗದಿದ್ದರೆ, ಮಾನವ ಬುದ್ಧಿಯೂ ಇರುವುದಿಲ್ಲ, ಆದಿ-ಅನಾದಿಗಳ ಪರಿಕಲ್ಪನೆಗಳೂ ಇರುವುದಿಲ್ಲ. ಅಂದರೆ ಪರಶಿವನು ಶೂನ್ಯಸ್ಥಿತಿಯಲ್ಲಿದ್ದಾಗ —ಅಂದರೆ, ಮನುಷ್ಯ ಮತ್ತು ಪ್ರಪಂಚ ಇಲ್ಲದಿದ್ದಾಗ-''ಪರಶಿವನಿಗೆ ಆದಿಯೂ ಇಲ್ಲ, ಅನಾದಿಯೂ ಇಲ್ಲ'' ಅಥವಾ ''ಪರಶಿವನು ಆದಿ ಮತ್ತು ಅನಾದಿ ಎಂಬ ದ್ವಂದ್ವಗಳಿಂದ ಅತ್ತತ್ತ'' ಎಂಬ ಮಾತುಗಳು ಯಾವ ವಿರೋಧಾಭಾಸವನ್ನೂ ಉಂಟು ಮಾಡುವುದಿಲ್ಲ. ಮತ್ತೊಂದು ಉದಾಹರಣೆಯೊಂದಿಗೆ ಅದನ್ನು ಹೀಗೆ ವ್ಯಕ್ತಪಡಿಸಬಹುದು. ಬಂಜೆಗೆ ಮಗನಿರಲು ಸಾಧ್ಯವಿಲ್ಲ ಎಂದ ಮೇಲೆ ''ಬಂಜೆಯ ಮಗ ವೀರಶೈವ'' ಮತ್ತು '' ಬಂಜೆಯ ಮಗ ವೀರಶೈವೇತರ'' ಎಂಬ ಎರಡು ವಾಕ್ಯಗಳೂ ಅಸತ್ಯವಾಗುತ್ತವೆ. ಆದರೆ ಯಾವುದೋ ಒಂದು ಧರ್ಮಕ್ಕೆ ಸೇರಿರುವ ವ್ಯಕ್ತಿಯನ್ನು ತೋರಿಸಿ ''ಇವನು ವೀರಶೈವನಾಗಿರಬೇಕು'' ಅಥವಾ ''ಇವನು ವೀರಶೈವೇತರನಾಗಿರಬೇಕು'' ಎಂಬ ಎರಡು ವಾಕ್ಯಗಳನ್ನು ಅವನಿಗೆ ಅನ್ವಯಿಸಿ ಹೇಳಿದರೆ, ಅವೆರಡೂ ಅಸತ್ಯವಾಗಿರಲಾಗಲಿ, ಅವೆರಡೂ ಸತ್ಯವಾಗಿರಲಾಗಲಿ ಸಾಧ್ಯವಿಲ್ಲ. ಅವುಗಳಲ್ಲಿ ಒಂದು ಮಾತ್ರ ಸತ್ಯ, ಮತ್ತೊಂದು ಅಸತ್ಯವಾಗಿರಲೇಬೇಕು. ಅದೇ ರೀತಿ, ಸೃಷ್ಟಿಯೇ (ಆದಿಯೇ) ಇಲ್ಲದಿದ್ದರೆ, ಪರಶಿವನಿಗೆ ಆದಿ ಇದೆ ಎಂಬುದೂ ಅಸತ್ಯ, ಅನಾದಿ ಇದೆ ಎಂಬುದೂ ಅಸತ್ಯ. ಆದರೆ ಸೃಷ್ಟಿಯಾದ ಮೇಲೆ, ಪರಶಿವನು ಅನಾದಿಯಾಗಿರಲೇ ಬೇಕು; ಆಗ ''ಅವನು ಅನಾದಿಯಿಂದತ್ತತ್ತ'' ಎಂದು ಹೇಳುವುದು ಅಸತ್ಯ ಹಾಗೂ ವಿರೋಧಾಭಾಸ. ಈ ದೃಷ್ಟಿಯಿಂದ ನೋಡಿದಾಗ ''ಆದಿಯಿಂದತ್ತತ್ತ ಅನಾದಿಯಿಂದತ್ತತ್ತ'' ಎಂಬುದಕ್ಕೆ ''ಆದಿ ಮತ್ತು ಅನಾದಿ ಎರಡೂ ಇರುವ

ಕಾಲವೊಂದಿದೆ'' ಎಂಬ ಅತಾರ್ಕಿಕ ಅರ್ಥವನ್ನು ಕೊಡದೆ, ''ಆದಿಯೇ ಇಲ್ಲದಿದ್ದ ಶೂನ್ಯಸ್ಥಿತಿಯಲ್ಲಿ ಆದಿ-ಅನಾದಿಗಳ ಪರಿಕಲ್ಪನೆಗಳೂ ಇಲ್ಲ'' ಎಂಬರ್ಥವನ್ನು ಕೊಡುವುದು ಹೆಚ್ಚು ತಾರ್ಕಿಕ.

೩

ಆದಿ-ಅನಾದಿ ಎರಡೂ ಇಲ್ಲದ ಅಥವಾ ಎರಡೂ ಇರುವ ಸಾಧ್ಯತೆಯನ್ನು ಜ್ಞಾನಮೀಮಾಂಸೀಯವಾಗಿಯೂ ಹೀಗೆ ಸಮರ್ಥಿಸಬಹುದು :

ನಮ್ಮ ಇಂದ್ರಿಯಾನುಭವವು ನಾನು-ಅದು, ಇದೆ-ಇಲ್ಲ, ಆದಿ-ಅನಾದಿ ಮುಂತಾದ ದ್ವಂದ್ವಗಳಿಗೆ ಒಳಪಟ್ಟಿದೆ. ವಾಸ್ತವವಾಗಿ ಇಂತಹ ದ್ವಂದ್ವಗಳಿಲ್ಲದೆ ಇಂದ್ರಿಯಾನುಭವವು ಸಾಧ್ಯವಾಗುವುದೇ ಇಲ್ಲ. ಉದಾಹರಣೆಗೆ, ನನಗೆ ಒಂದು ವಸ್ತುವಿನ ಪ್ರಜ್ಞೆ (ಪರಪ್ರಜ್ಞೆ) ಇದೆ ಎಂದರೆ, ಸ್ವಪ್ರಜ್ಞೆಯೂ ಇದೆ, ಎಂದರ್ಥ. ಸ್ವಪ್ರಜ್ಞೆ ಇರದೆ ಪರಪ್ರಜ್ಞೆಯೂ ಇಲ್ಲ, ಪರಪ್ರಜ್ಞೆ ಇರದೆ ಸ್ವಪ್ರಜ್ಞೆಯೂ ಇಲ್ಲ. ಆದರೆ ಸಮಾಧಿಸ್ಥನಾದ (=ಐಕ್ಯಸ್ಥಿತಿಯಲ್ಲಿರುವ) ಶಿವಯೋಗಿಯು ಸ್ವಪ್ರಜ್ಞೆಯನ್ನೂ ಪರಪ್ರಜ್ಞೆಯನ್ನೂ ಕಳೆದುಕೊಂಡಾಗ, ಅವನ ಈ ವಿಶಿಷ್ಟ ಅನುಭವವು ಇಂತಹ ದ್ವಂದ್ವಗಳಿಂದ ಅತೀತವಾಗುತ್ತದೆ. ''ನಾನೆಂಬುದಿಲ್ಲ, ನೀನೆಂಬುದಿಲ್ಲ, ಸ್ವಯವೆಂಬುದಿಲ್ಲ, ಪರವೆಂಬುದಿಲ್ಲ...ಒಳಗೆಂಬುದಿಲ್ಲ, ಹೊರಗೆಂಬುದಿಲ್ಲ, ಕೂಡಲ ಚೆನ್ನಸಂಗನೆಂಬ ಶಬ್ದ ಮುನ್ನಿಲ್ಲ''[1] ಎಂಬ ಚೆನ್ನಬಸವಣ್ಣನವರ ವಚನವೂ, ''ಇದ್ದಿತ್ತೆಂದರಿಯೆ, ಇಲ್ಲವೆಂದರಿಯೆ, ಏನೆಂದರಿಯೆ,''[2] ''ಆದಿ ಅನಾದಿ ಒಂದಾದಂದು, ಚಂದ್ರಸೂರ್ಯ ಒಂದಾದಂದು...''[3] ಮುಂತಾದ ವಚನಗಳು ಅನುಭಾವದ ದ್ವಂದ್ವಾತೀತತೆಯನ್ನೆ ಅನುಮೋದಿಸುತ್ತವೆ. ಇವುಗಳಲ್ಲಿ ''ಆದಿ ಅನಾದಿ ಒಂದಾದಂದು'' ಎಂಬ ಮಾತಿನೆಡೆ ನಮ್ಮ ಗಮನವನ್ನು ಹರಿಸೋಣ. ಇದನ್ನು ಅಂಗ (ಅಥವಾ ಆದಿ) ಮತ್ತು ಲಿಂಗ (ಅನಾದಿ) ಒಂದಾದಂದು'' ಎಂದು ಅರ್ಥೈಸುವುದು ಸೂಕ್ತ. ಲಿಂಗಾಂಗ ಸಾಮರಸ್ಯದಲ್ಲಿ ಆದಿ ಮತ್ತು ಅನಾದಿ ಒಂದಾಗುತ್ತವೆ ಎಂಬುದು ಸರ್ವವೇದ್ಯ. ಆದರೆ ಎರಡೂ ಒಂದಾದ ಈ ಸ್ಥಿತಿಯಲ್ಲಿ ಆದಿಯೂ ಇರುವುದಿಲ್ಲ, ಅನಾದಿಯೂ ಇರುವುದಿಲ್ಲ, ಎಂಬುದು ವಿಚಿತ್ರವಾದರೂ ಸತ್ಯ. ಏಕೆಂದರೆ 'ನಾನು ನೀನೆಂಬ' ಪ್ರಜ್ಞೆಯೇ ಇಲ್ಲವಾದರೆ, ಆದಿಯ ಪ್ರಜ್ಞೆಯಾಗಲಿ ಅನಾದಿಯ ಪ್ರಜ್ಞೆಯಾಗಲಿ ಇರಲು ಸಾಧ್ಯವಿಲ್ಲ. ಜಾಗ್ರತ ಸ್ಥಿತಿಯಲ್ಲಿ ಯಾವಾಗಲೂ ಇರುವ ದ್ವಂದ್ವ ತುರೀಯ ಸ್ಥಿತಿಯಲ್ಲಿ ಮಾಯವಾಗುತ್ತದೆ ಎಂಬ ಸತ್ಯವನ್ನು ಅರಿತುಕೊಂಡರೆ, 'ಆದಿಯನಾದಿ ಇಲ್ಲದಂದು' ಎಂಬ ಮಾತಿನ ಸ್ವವಿರೋಧ ಮಾಯವಾಗುತ್ತದೆ.

೪

ವಚನಕಾರರು 'ಆದಿ' ಮತ್ತು 'ಅನಾದಿ' ಎಂಬ ಪದಗಳಿಗೆ ಕೆಲವು ವೇಳೆ ಮೇಲೆ ಪ್ರಸ್ತಾಪಿಸಿದ ತಾರ್ಕಿಕ ಹಾಗೂ ಸಾಧಾರಣ ಅರ್ಥವನ್ನೂ ಅಲ್ಲದೆ, ದೇಹ, ಆತ್ಮ, ಪಿಂಡ ಪರಶಿವ ಎಂಬ ಅಸಾಧಾರಣ ಅರ್ಥವನ್ನೂ ಕೊಡುತ್ತಾರೆ. ಉದಾಹರಣೆಗೆ "ಆದಿ ಪಿಂಡ ಅನಾದಿ ಪಿಂಡವ ಕೂಡಿದ ಕಾರಣ ಬಿಂದು ಪಿಂಡ ಉದಯವಾಯಿತು. ಆ ಬಿಂದು ಪಿಂಡದಾದಿಪಿಡಿದು ನೋಡಲು ಅನಾದಿ ಶಿವತತ್ತ್ವದ್ವಾರದಿಂದ ಬಂದೆನೆಂದರಿದೆನು" ಎಂದು ಸ್ವತಂತ್ರ ಸಿದ್ಧಲಿಂಗೇಶ್ವರರ ವಚನವು ನಮ್ಮ ದೇಹ-ಮನಸ್ಸು-ಆತ್ಮಗಳ ಸಂಕೀರ್ಣಕ್ಕೆ ಆದಿ ಉಂಟು, ಆದರ ಆದಿಯು ಅನಾದಿ ಪರಶಿವನಿಂದ ಉಂಟಾಯಿತು ಎಂಬುದನ್ನು ಸ್ಥೂಲವಾಗಿ ತಿಳಿಸುತ್ತದೆ.

ಆದರೆ 'ಆದಿ' ಮತ್ತು 'ಅನಾದಿ' ಎಂಬ ಪದಗಳಿಗೆ ಈ ಅಸಾಧಾರಣ ಅರ್ಥಕೊಟ್ಟರೆ, ಅವುಗಳಲ್ಲಿನ ಸ್ವವಿರೋಧ ಮಾಯವಾಗುವುದು ಸತ್ಯವಾದರೂ, ಆ ಪದಗಳನ್ನು ಎಲ್ಲ ಸಂದರ್ಭಗಳಲ್ಲಿಯೂ ಹಾಗೆಯೇ ಅರ್ಥೈಸಬೇಕೆಂದು ವಿಧಿಸುವುದು ಸಾಧುವಲ್ಲ. 'ಆದಿ-ಅನಾದಿ' ಪದಗಳಲ್ಲಿ ವಾಸ್ತವವಾಗಿ ಸ್ವವಿರೋಧ ಇದ್ದರೂ, ಆ ಜೋಡಿಯನ್ನು ಸೃಷ್ಟಿಪೂರ್ವ ಸ್ಥಿತಿಗೆ ಅನ್ವಯಿಸಿದಾಗ, ಅವುಗಳ ಸ್ವವಿರೋಧ ಮಾಯವಾಗುತ್ತದೆ. "ನಿರವಯ ಶೂನ್ಯಲಿಂಗಮೂರ್ತಿ ಆದಿಯಲ್ಲ ಅನಾದಿಯಲ್ಲ, ಇಹದವನಲ್ಲ ... ಕಾರ್ಯಕಾರಣನಲ್ಲ... ನಮ್ಮ ಗುಹೇಶ್ವರಲಿಂಗ" ಎಂಬ ವಚನದಲ್ಲಿ 'ಇಹದವನಲ್ಲ ಪರದವನಲ್ಲ' ಎಂಬ ಮಾತೂ 'ಕಾರ್ಯಕಾರಣನಲ್ಲ' ಎಂಬ ಮಾತೂ, 'ಆದಿಯಲ್ಲ ಅನಾದಿಯಲ್ಲ' ಎಂಬ ಮಾತಿನಂತೆ ಸ್ವವಿರೋಧದ ಪ್ರಯೋಗಗಳು. ಆದರೆ ಅವುಗಳಲ್ಲಿರುವ ಸ್ವವಿರೋಧವನ್ನು ಇಲ್ಲವಾಗಿಸಲು 'ಆದಿಯಲ್ಲ, ಅನಾದಿಯಲ್ಲ' ಎಂಬ ಪದಗಳಿಗೆ 'ದೇಹವಲ್ಲ, ಪರಮಾತ್ಮನಲ್ಲ' ಎಂಬರ್ಥಕೊಡುವುದು, ಅಸಾಂದರ್ಭಿಕ ಮತ್ತು ಅನಾವಶ್ಯಕವಷ್ಟೇ ಅಲ್ಲ, ವಚನಕಾರರ ಭಾಷಾಸಾಮರ್ಥ್ಯವನ್ನು ಕೀಳುಗಳೆದಂತೆ. ಆದ್ದರಿಂದ, 'ಆದಿ ಅನಾದಿ' ಪದಗಳಿಗೆ ಸಾಧಾರಣ ಅರ್ಥವನ್ನೂ ಕೊಡಬೇಕು, ಅವುಗಳಲ್ಲಿನ ಸ್ವವಿರೋಧವನ್ನೂ ನಿವಾರಿಸಬೇಕು ಎಂದು ನಾವು ತೀರ್ಮಾನಿಸಿದರೆ, ಆಗ ನಾವು ಮೇಲೆ ಪ್ರತಿಪಾದಿಸಿದ ತಾರ್ಕಿಕ ಮತ್ತು ಜ್ಞಾನ ಮೀಮಾಂಸೀಯ ಪದ್ಧತಿ ಮಾತ್ರ ಸರಿ ಎಂಬುದು ಸಿದ್ಧವಾಗುತ್ತದೆ.

ಅದೇ ರೀತಿ 'ಆದಿ ಲಿಂಗ ಅನಾದಿ ಜಂಗಮ' ಎಂಬ ಪ್ರಯೋಗದಲ್ಲಿಯೂ ಒಂದು ಅಸಾಧಾರಣ ಅರ್ಥ ಅಡಕವಾಗಿದೆ. ಗುರು ಕೊಡುವ ಇಷ್ಟಲಿಂಗವನ್ನು ಮನುಷ್ಯ ಸೃಷ್ಟಿಸುವುದರಿಂದ 'ಲಿಂಗಕ್ಕೆ ಆದಿಯುಂಟು' ಹೇಳಲಾಗುತ್ತದೆ ಮತ್ತು ತಿರುಗಾಡುವ ಪರಶಿವನಿಗೆ (ಜಂಗಮನಿಗೆ) ಆದಿ ಇಲ್ಲ (=ಅನಾದಿ) ಎಂದು ಹೇಳಲಾಗುತ್ತದೆ. ಆದರೆ

ಈ ದೃಷ್ಟಿಯಿಂದ ನೋಡಿದಾಗ 'ಆದಿಯಿಲ್ಲದಂದು ಅನಾದಿಯಿಲ್ಲದಂದು' ಎಂಬುದು ಹೇಗೆ ಸ್ವವಿರೋಧದ ಜೋಡಿಯಾಗುತ್ತದೆಯೋ ಹಾಗೆ 'ಆದಿ' (ಇಷ್ಟಲಿಂಗ)- 'ಅನಾದಿ' (ಜಂಗಮ) ಎಂಬ ಪದಗಳು ಸ್ವವಿರೋಧದ ಜೋಡಿಯಾಗುವುದಿಲ್ಲ. ಆಗ ಅಂತಹ ವಿಶೇಷಾರ್ಥಗಳನ್ನುಳ್ಳ ಪದಗಳಲ್ಲಿನ ಸ್ವವಿರೋಧವನ್ನು ನಿವಾರಿಸುವ ಪ್ರಶ್ನೆಯೇ ಏಳುವುದಿಲ್ಲ.

೫

ಶರಣರ ವಚನಗಳಲ್ಲಿ ಪ್ರಯೋಗವಾಗಿರುವ ಪದಗುಚ್ಛಗಳಲ್ಲಿ ಮತ್ತೊಂದು ರೀತಿಯ ಸ್ವವಿರೋಧವನ್ನು ನಾವು ಗಮನಿಸಬಹುದು. ಆದರೆ ಅವುಗಳ ಸ್ವವಿರೋಧವು 'ಆದಿ ಅನಾದಿ ಇಲ್ಲದಂದು' ಅಥವಾ 'ಆದಿಯುಂಟತ್ತತ್ತ ಅನಾದಿಯುಂಟತ್ತತ್ತ' ಎಂಬ ಪದಗುಚ್ಛಗಳಲ್ಲಿರುವ ಸ್ವವಿರೋಧಕ್ಕಿಂತ ಭಿನ್ನ ಎಂಬುದನ್ನು ನಾವು ಆಗ ಗಮನಿಸಬೇಕಾಗುತ್ತದೆ. ಉದಾಹರಣೆಗೆ ''ಅರಿಯಬಾರದ ಲಿಂಗವನರಿವಂತೆ ಮಾಡಿಕೊಟ್ಟನು ಶ್ರೀಗುರು'' ಎಂಬ ಮಾತಿನಲ್ಲಿಯೂ ''ಎನ್ನ ಮನದ ಕೊನೆಯ ಮೊನೆಯ ಮೇಲೆ ಅಂಗವಿಲ್ಲದ ರೂಪನ ಕಂಡು ಮರುಳಾದೆನವ್ವ'' ಎಂಬ ಮಾತಿನಲ್ಲಿಯೂ ಅಂತಹ ಸ್ವವಿರೋಧವನ್ನು ಕಾಣಬಹುದು. ಲಿಂಗವನ್ನು ಯಾರಿಗೂ ಅರಿಯಬಾರದಿದ್ದರೆ, 'ಅರಿವಂತೆ ಮಾಡಿಕೊಟ್ಟನು' ಎಂದು ಹೇಳುವುದು ಸ್ವವಿರೋಧದ ಸ್ಪಷ್ಟ ಉದಾಹರಣೆ. ಅದೇ ರೀತಿ, ಭೌತವಸ್ತುಗಳಿಗೆ ಕೊನೆಯ ಮೊನೆ ಇದ್ದಂತೆ ಮನಸ್ಸಿಗೆ ಕೊನೆಯ ಮೊನೆ ಇದೆ ಎಂದು ಹೇಳುವುದೂ, 'ಅಂಗವಿಲ್ಲದ ರೂಪು' ಇದೆ ಎನ್ನುವುದೂ ಆ ರೂಪವನ್ನು ಕಾಣಲು ಸಾಧ್ಯವೆಂದು ಹೇಳುವುದೂ ಸ್ವವಿರೋಧವೇ. ಆದರೆ ಈ ಪ್ರಯೋಗಗಳಿಗೆ ಬೇರೆ ಬೇರೆ ಅರ್ಥಗಳಿರುವುದನ್ನು ನಾವು ಗಮನಿಸಿದರೆ, ಅವುಗಳಲ್ಲಿನ ಸ್ವವಿರೋಧವು ಮಾಯವಾಗಿ, ಆ ಮಾತುಗಳು ಅರ್ಥಪೂರ್ಣವಾಗುತ್ತವೆಯಷ್ಟೇ ಅಲ್ಲ, ಅವುಗಳಿಗೆ ಹೆಚ್ಚಿನ ಅರ್ಥವೂ ಬರುತ್ತದೆ. ಇಂದ್ರಿಯ ಪ್ರತ್ಯಕ್ಷದ ಮೂಲಕ ಲಿಂಗವ (ಪರಶಿವನ)ನ್ನು ಅರಿಯಲು ಯಾರಿಗೂ ಸಾಧ್ಯವಿಲ್ಲ. ಆದರೆ ಅದನ್ನು ಯೋಗಪ್ರತ್ಯಕ್ಷದ ಮೂಲಕ (ಅನುಭಾವದಲ್ಲಿ) 'ಅರಿ'ಯಲು ಸಾಧ್ಯ (ಅದನ್ನು ಶ್ರೀಗುರು ಕಲಿಸಿಕೊಟ್ಟಿದ್ದಾನೆ). ಅಂದರೆ 'ಸಾಧಾರಣ ರೀತಿಯಲ್ಲಿ ಅರಿ'ಯಬಾರದ ಲಿಂಗವ 'ಯೋಗ ಪ್ರತ್ಯಕ್ಷದ ಮೂಲಕ ಅರಿ'ವಂತೆ ಶ್ರೀಗುರು ಮಾಡಿಕೊಟ್ಟ ಎಂದು ಹೇಳುವಲ್ಲಿ ಯಾವ ಸ್ವವಿರೋಧವೂ ಇಲ್ಲ. ಒಂದು ವೇಳೆ, ಸಾಧಾರಣ ರೀತಿಯಲ್ಲಿ ಅರಿಯಬಾರದ ಲಿಂಗವ ಸಾಧಾರಣ ರೀತಿಯಲ್ಲಿ ಅರಿವಂತೆ ಗುರು ಮಾಡಿಕೊಟ್ಟ ಎಂದಾಗಲಿ, ಯೋಗ ಪ್ರತ್ಯಕ್ಷದ ಮೂಲಕವೂ ಅರಿಯಬಾರದ ಲಿಂಗವ ಯೋಗಪ್ರತ್ಯಕ್ಷದ ಮೂಲಕ ಅರಿವಂತೆ ಮಾಡಿಕೊಟ್ಟ ಗುರು ಎಂದಾಗಲಿ ವಚನಕಾರರು ಹೇಳಿದ್ದರೆ, ಆಗ ಖಂಡಿತವಾಗಿಯೂ ಆ ಮಾತುಗಳಲ್ಲಿ ಅಪರಿಹಾರ್ಯ ಸ್ವವಿರೋಧವಿರುತ್ತಿತ್ತು. ಆದರೆ ವಚನಕಾರರು ಈ ಎರಡು

ಸಂದರ್ಭಗಳಲ್ಲಿ 'ಅರಿ' ಎಂಬ ಪದವನ್ನು ಬೇರೆ ಬೇರೆ ಅರ್ಥಗಳಲ್ಲಿ ಉಪಯೋಗಿಸುತ್ತಿರುವುದರಿಂದ, ಅವರ ಮಾತಿಗೆ ನಾವು ಸ್ವವಿರೋಧ ದೋಷವನ್ನು ಆರೋಪಿಸಬೇಕಾಗಿಲ್ಲ.

ಸೂಜಿಯ ಅಥವಾ ಮೂಗಿನ ಕೊನೆಯ ಮೊನೆಯ ಮೇಲೆ (ಅಥವಾ ಮತ್ತಾವುದೇ ವಸ್ತುವಿನ ಮೇಲೆ) ಏನಾದರೂ ಇದೆ, ಅದು ಭೌತವಸ್ತುವಾಗಿರಬೇಕು, ಹಾಗೂ ಅದಕ್ಕೆ ರೂಪು ಇರಲೇಬೇಕು. ಆಗ ಅದನ್ನು ನಾವು ನೋಡಿ, ಅಥವಾ ಮುಟ್ಟಿ ತಿಳಿದುಕೊಳ್ಳಬಹುದು. ಆದರೆ ಮನಸ್ಸು ಭೌತವಸ್ತುವಲ್ಲದ್ದರಿಂದ, ಅದಕ್ಕೆ ಕೊನೆಯೂ ಇಲ್ಲ, ಮೊನೆಯೂ ಇಲ್ಲ; ಅದರ ಮೇಲೆ ಸ್ಥಾಪಿತವಾಗಿರುವ ಪರಶಿವನಿಗೆ ಅಂಗವೂ ಇಲ್ಲ, ರೂಪೂ ಇಲ್ಲ; ಅಂದರೆ ಅವನನ್ನು ಕಾಣಲಾಗಲಿ ಮುಟ್ಟಲಾಗಲಿ ಸಾಧ್ಯವಿಲ್ಲ. ಆದರೆ ಅಂತರಂಗದಲ್ಲಿ (ಅಥವಾ ಆತ್ಮನಲ್ಲಿ ಅಥವಾ ಮನಸ್ಸಿನಲ್ಲಿ)ರುವ ಗುಹೇಶ್ವರನನ್ನು ನಾವು ರಕ್ತಮಾಂಸಗಳ ಕಣ್ಣಿನಿಂದ ನೋಡದೆ ಒಳಗಣ್ಣಿನಿಂದ 'ನೋಡುತ್ತೇವೆ. ಹೀಗೆ ಇಲ್ಲಿ 'ನೋಡು' ಎಂಬ ಪದವೂ ಎರಡು ಬೇರೆ ಬೇರೆ ಅರ್ಥಗಳಲ್ಲಿ ಬಳಕೆಯಾಗಿರುವುದರಿಂದ 'ಮನದ ಕೊನೆಯ ಮೊನೆಯ ಮೇಲಿನ ಅಂಗವಿಲ್ಲದ ರೂಹನು' ಕಾಣುವುದು ಸ್ವವಿರೋಧದ ಮಾತಲ್ಲ, ಒಂದು ವೇಳೆ ಒಂದೇ ಅರ್ಥವಿದ್ದಿದ್ದರೆ, ಕಾಣಬಾರದ ವಸ್ತುವನ್ನು ಕಾಣುವುದು ಅಸಾಧ್ಯವಾಗುತ್ತಿತ್ತು; ಅಷ್ಟೇ ಅಲ್ಲ, ಅಚಿಂತ್ಯವೂ ಆಗುತ್ತಿತ್ತು. ಅಂದರೆ, 'ಕಾಣಬಾರದ ಪರಶಿವನ ಕಂಡು ಮರುಳಾದೆನವ್ವ' ಎಂಬುದು ಅಪರಿಹಾರ್ಯ ಸ್ವವಿರೋಧವಾಗುತ್ತಿತ್ತು.

ಇದರಿಂದ, 'ಆದಿಯಿಲ್ಲದಂದು, ಅನಾದಿಯಿಲ್ಲದಂದು' ಎಂಬ ಮಾತು ಸ್ವವಿರೋಧವೆನ್ನಿಸಿಕೊಳ್ಳುವುದು ಸಂದರ್ಭಕ್ಕನುಗುಣವಾಗಿಯೇ ಹೊರತು, ಅರ್ಥಕ್ಕನುಗುಣವಾಗಿ ಅಲ್ಲ; ಮತ್ತು 'ಮನದ ಮೊನೆಯ ಕೊನೆಯ ಮೇಲಿನ ಅಂಗವಿಲ್ಲದ ರೂಹನ ಕಾಣುವ' ಎಂಬ ಮಾತು ಸ್ವವಿರೋಧವೆನ್ನಿಸಿಕೊಳ್ಳುವುದು ಅರ್ಥಕ್ಕನುಗುಣವಾಗಿಯೇ ಹೊರತು, ಸಂದರ್ಭಕ್ಕನುಗುಣವಾಗಿ ಅಲ್ಲ, ಎಂಬ ಮಾತು ಸ್ಪಷ್ಟವಾಗುತ್ತದೆ.

ಸಂದರ್ಭಸೂಚಿ

೧. [illegible] (ಸಂ). ಚೆನ್ನಬಸವಣ್ಣನವರ ವಚನಗಳು ([illegible]), [illegible] (ಇನ್ನು ಮುಂದೆ ಈ ಗ್ರಂಥವನ್ನು [illegible])

೨. [illegible] (ಸಂ). ತೋಂಟದ ಸಿದ್ಧಲಿಂಗ ಶಿವಯೋಗಿಗಳ

ಷಟ್‌ಸ್ಥಲಜ್ಞಾನಸಾರಾಮೃತ (ಮುರುಘಾಮಠ, ಧಾರವಾಡ,೧೯೬೪), ವ.೧೧ (ಇನ್ನು ಮುಂದೆ ಈ ಗ್ರಂಥವನ್ನು ತೋಂಸಿಶಿ ಎಂಬ ಸಂಕೇತದಿಂದ ಸೂಚಿಸಲಾಗುವುದು)

೩. ಡಾ.ಫ.ಗು.ಹಳಕಟ್ಟಿ(ಸಂ) : **ವಚನಶಾಸ್ತ್ರಸಾರ** ಭಾಗ ಎರಡು (ಬಿಜಾಪುರ, ೧೯೩೦), ಪು ೪. ವ ೩.

೪. ಚೆಬವ, ವ.೩.

೫. ತೋಂಸಿಶಿ. ವ. ೨೧.

೬. ಡಾ.ಫ.ಗು.ಹಳಕಟ್ಟಿ(ಸಂ) :**ವಚನಶಾಸ್ತ್ರಸಾರ** (ಭಾಗ೧)(ಜಗದ್ಗುರು ತೋಂಟದಾರ್ಯ ಸಂಸ್ಥಾನಮಠ, ಗದಗ, ೧೯೮೨), ವ.೨೫೯೧.

೭. ಡಾ. ಆರ್.ಸಿ.ಹಿರೇಮಠ ಮತ್ತು ಡಾ.ಎಂ.ಎಸ್.ಸುಂಕಾಪುರ (ಸಂ) : **ಅಲ್ಲಮ ಪ್ರಭುದೇವರ ವಚನಗಳು** (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,೧೯೭೬)ವ.೭೭೨ (ಈ ಗ್ರಂಥವನ್ನು ಇನ್ನುಮುಂದೆ ಅಪ್ರವ ಎಂಬ ಸಂಕೇತದಿಂದ ಸೂಚಿಸಲಾಗುವುದು)

೮. ಅಪ್ರವ, ವ.೩೦೯.

೯. ಡಾ.ಎಚ್.ಪಿ.ಮಲ್ಲೇದೇವರು (ಸಂ) ; ಸ್ವತಂತ್ರ ಸಿದ್ಧಲಿಂಗೇಶ್ವರನ ಕೃತಿಗಳು (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭), ವ.೧೨; ಅಲ್ಲದೆ ನೋಡಿ, 'ಆದಿಯೇ ದೇಹ. ಅನಾದಿಯೇ ಆತ್ಮ' - ಚೆಬವ, ವ. 4.

೧೦. ಡಾ.ಫ.ಗು.ಹಳಕಟ್ಟಿ (ಭಾಗ ೧), ವ.೩.

೧೧. ಅಪ್ರವ, ವ. ೧೨೯೩.

೧೨. ಡಾ.ಎಂ.ಎಸ್.ಸುಂಕಾಪುರ (ಸಂ) : ಷಣ್ಮುಖಸ್ವಾಮಿಯ ವಚನಗಳು (ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೭), ವ.೨೧೦.

೧೩. ಅಪ್ರವ, ವ ೨೦೫.

ಭಾಷಾವಿಜ್ಞಾನ : ಪಾರಿಭಾಷಿಕ ಟಿಪ್ಪಣಿಗಳು

★ ವಿಲ್ಯಂ ಮಾಡ್ತ

೧. ಭಾಷಾವಿಜ್ಞಾನ

ಭಾಷೆಯ ಕುರಿತ ವೈಜ್ಞಾನಿಕ ಅಧ್ಯಯನವೇ ಭಾಷಾವಿಜ್ಞಾನ. ಭಾಷೆಯನ್ನು ಮೂರು ರೀತಿಯಲ್ಲಿ ಅಧ್ಯಯನ ಮಾಡಬಹುದು: (1) ಅವೈಜ್ಞಾನಿಕ, (2) ಶಾಸ್ತ್ರೀಯ ಮತ್ತು (3) ವೈಜ್ಞಾನಿಕ. ಯಾವುದೇ ಪದ್ಧತಿಯನ್ನು ಅಳವಡಿಸದೆ ಮನಸ್ಸಿಗೆ ಬಂದಂತೆ ಅಧ್ಯಯನ ಮಾಡಿದರೆ ಅದು ಅವೈಜ್ಞಾನಿಕ ಅಧ್ಯಯನವೆನಿಸುತ್ತದೆ. ಖಚಿತವಾದ ಪದ್ಧತಿಯನ್ನು ಅಳವಡಿಸಿಕೊಂಡು ಭಾಷೆಯ ಅಧ್ಯಯನವನ್ನು ಮಾಡಿದಾಗ ಅದು ಶಾಸ್ತ್ರೀಯ ಅಧ್ಯಯನವೆನಿಸಿಕೊಳ್ಳುತ್ತದೆ. ಆದರೆ ಎಲ್ಲ ಶಾಸ್ತ್ರೀಯ ಅಧ್ಯಯನ ವಿಜ್ಞಾನವೆನಿಸುವುದಿಲ್ಲ. ತತ್ವಶಾಸ್ತ್ರ (Philosophy) ನಿಗಮನ ಪದ್ಧತಿ (Deductive method) ಯನ್ನು ಅಳವಡಿಸಿಕೊಂಡು ಸಾಮಾನ್ಯ ತತ್ವಗಳಿಂದ ವಿಶಿಷ್ಟತೆಯತ್ತ ಸಾಗಿಕೊಂಡು ವಿಷಯಗಳ ಅಧ್ಯಯನ ನಡೆಯಿಸುವುದರಿಂದ ಅದನ್ನು ವಿಜ್ಞಾನವೆಂದು ಕರೆಯದೆ ಶಾಸ್ತ್ರವೆಂದು ಕರೆಯಲಾಗುತ್ತದೆ. ಅನುಗಮನ ಪದ್ಧತಿ (Inductive method) ಯನ್ನು ಅಳವಡಿಸುವ ಶಿಸ್ತು ಮಾತ್ರ ವಿಜ್ಞಾನವೆನಿಸಿಕೊಳ್ಳುತ್ತದೆ. ಭಾಷಾಶಾಸ್ತ್ರ ಎನಿಸಿದರೆ ಅನುಗಮನ ಪದ್ಧತಿಯನ್ನು ಅಳವಡಿಸುವ ಭಾಷಾಧ್ಯಯನ ಭಾಷಾಶಾಸ್ತ್ರ (Philology) ಎನಿಸಿದರೆ ಅನುಗಮನ ಪದ್ಧತಿಯನ್ನು ಅಳವಡಿಸುವ ಭಾಷಾಧ್ಯಯನ ಭಾಷಾವಿಜ್ಞಾನ (Linguistics) ಎನಿಸಿಕೊಳ್ಳುತ್ತದೆ.

ಭಾಷೆಯ ಬೆಳವಣಿಗೆಯ ಒಂದು ಕಾಲಘಟ್ಟಕ್ಕೆ ಸೀಮಿತವಾಗಿ ಅದರ ವಿವರಣೆಯನ್ನು ನೀಡುವ ಅಧ್ಯಯನಕ್ಕೆ ವಿವರಣಾತ್ಮಕ (Descriptive) ಅಥವಾ ಏಕಕಾಲಿಕ (Synchronic) ಭಾಷಾವಿಜ್ಞಾನ ಎಂದು ಕರೆದರೆ, ವಿವಿಧ ಕಾಲಗಳನ್ನು ಪರಿಗಣಿಸಿ ಅದರ ಇತಿಹಾಸವನ್ನು ಗುರುತಿಸಿದರೆ ಅದನ್ನು ಐತಿಹಾಸಿಕ (Historical) ಅಥವಾ ಬಹುಕಾಲಿಕ (Diachronic) ಭಾಷಾವಿಜ್ಞಾನ ಎಂದು ಕರೆಯುತ್ತಾರೆ. ಒಂದೇ ಭಾಷಾ ಪರಿವಾರಕ್ಕೆ ಸೇರಿದ ಅನೇಕ ಭಾಷೆಗಳ ತೌಲನಿಕ ಅಧ್ಯಯನಕ್ಕೆ ತೌಲನಿಕ ಭಾಷಾವಿಜ್ಞಾನ (Comparative Linguistics) ಎಂದು ಹೆಸರಿಸಿದರೆ ವಿಭಿನ್ನ ಭಾಷಾಪರಿವಾರಗಳಿಗೆ ಸೇರಿದ ಭಾಷೆಗಳ ವೈಷಮ್ಯಗಳನ್ನು ಎತ್ತಿತೋರಿಸುವ ಅಧ್ಯಯನವನ್ನು ವೈದೃಶಾತ್ಮಕ ಭಾಷಾವಿಜ್ಞಾನ (Contrastive Linguistics) ಎಂದು ಕರೆಯುತ್ತಾರೆ.

ಭಾಷಾ ವಿಜ್ಞಾನ ಅಂತರ್‌ಶಿಸ್ತೀಯ ಅಧ್ಯಯನವಾಗಿ . ಶೈಲಿವಿಜ್ಞಾನ, ಮನೋಭಾಷಾವಿಜ್ಞಾನ, ಸಾಮಾಜಿಕ ಭಾಷಾವಿಜ್ಞಾನ ಇತ್ಯಾದಿಗಳಾದಂತೆ. ವಿವಿಧ ವಿಶ್ಲೇಷಣಾ ತಂತ್ರಗಳನ್ನು ಅಳವಡಿಸಿಕೊಂಡು ರಾಚನಿಕ ಭಾಷಾವಿಜ್ಞಾನ, ಉತ್ಪಾದಕ-ರೂಪಾಂತರ ಭಾಷಾವಿಜ್ಞಾನ ಮೊದಲಾದ ಭಾಷಾವೈಜ್ಞಾನಿಕ ಪಂಥಗಳು ಇಂದು ಪ್ರಸಿದ್ಧವಾಗಿವೆ.

೨. ಶೈಲಿವಿಜ್ಞಾನ

ಒಂದು ವಾಕ್ಯದಲ್ಲಿ ಅಥವಾ ಪದ್ಯದಲ್ಲಿ ಬಳಸುವ ಆಕೃತಿಮಗಳ ಸಂಘಟನೆಯು ಅರ್ಥಾತ್ ವಿನ್ಯಾಸದ ಕ್ರಮವೇ ಶೈಲಿ. ಇದು ವ್ಯಕ್ತಿಯ ಪ್ರತಿಭೆಯಾನುಸಾರ ವಿಭಿನ್ನಗೊಳ್ಳುವುದರಿಂದ ವ್ಯಕ್ತಿಯೇ ಶೈಲಿ ಎನ್ನುವುದುಂಟು. ಆದರೆ ಅದು ಭಾಷಾರಚನೆಯನ್ನು ಅಳವಡಿಸಿ ಭಿನ್ನತೆಯನ್ನು ಪಡೆದಾಗ ಅದನ್ನೇ ರೀತಿ ಎನ್ನುತ್ತಾರೆ.

ಮಾತ್ರಾ ಛಂದಸ್ಸನ್ನು ಬಳಸಿ ರಚಿಸಿದ ಕಾವ್ಯ, ಅಂಶೀಗಣ ಛಂದಸ್ಸಿಗಿಂತ ಭಿನ್ನವಾಗುತ್ತದೆಂಬುದು ಕಾವ್ಯವಾಚನದ ಮೂಲಕ ಸ್ಪಷ್ಟವಾಗುತ್ತದೆ. ಅಂತೆಯೇ, ಲಯ, ಮಟ್ಟುಗಳ ಆಧಾರದ ಮೇಲೆ ಉಂಟಾಗಿರುವ ಜನಪದ ಹಾಡುಗಳು ಮೇಲಿನವುಗಳಿಗಿಂತ ಹೆಚ್ಚು ಸರಳವಾಗಿದ್ದು ಜನಪ್ರಿಯವಾಗುವುದಕ್ಕೆ ಅವುಗಳ ಮುಕ್ತ ಶೈಲಿಯೇ ಕಾರಣ. ಇದೇ ರೀತಿಯಲ್ಲಿ ಅನೇಕ ಆಕೃತಿಮಗಳನ್ನು ಸಂಯೋಜಿಸಿ ದೊಡ್ಡ ಪ್ರಮಾಣದ ಸಮಾಸಗಳನ್ನು ಮಾಡುವ, ಅಂತೆಯೇ ಪ್ರಕೃತಿಗಳಿಗೆ ಆದಿ ಹಾಗೂ ಅಂತ್ಯ ಪ್ರತ್ಯಯಗಳನ್ನು ಜೋಡಿಸಿ ಸಂಯುಕ್ತಾಕೃತಿಮಗಳನ್ನು ನಿರ್ಮಿಸುವ ಶಕ್ತಿ ಇರುವ ಆರ್ಯಭಾಷಾಶೈಲಿ ದ್ರಾವಿಡ ಭಾಷೆಗಳಿಗಿಲ್ಲ. ಸಣ್ಣಪುಟ್ಟ ವಾಕ್ಯಗಳಿಂದ ಆದಿ ಪ್ರತ್ಯಯಗಳನ್ನು ಹೆಚ್ಚಾಗಿ ಬಳಸದೆ ಚಿಕ್ಕ ಗಾತ್ರದ ಭಾಷಾರೂಪಗಳನ್ನೇ ಬಳಸುವ ದ್ರಾವಿಡ ಶೈಲಿ ಕನ್ನಡವೇ ಮೊದಲಾದ ದ್ರಾವಿಡ ಭಾಷೆಗಳಿಗೆ ವಿಶಿಷ್ಟವಾದದ್ದು. ಅನೇಕ ಘಟಕಗಳನ್ನು ಅಪರಿಸುವ ವಾಕ್ಯ ಸಂಸ್ಕೃತದಲ್ಲಿ ಸಮಂಜಸವೆನಿಸಿದರೆ ಅದು ಕನ್ನಡ ಜಾಯಮಾನಕ್ಕೆ ಹೊಂದದೆ ಇರುವುದಕ್ಕೆ ಭಾಷಾಶೈಲಿಯ ವ್ಯತ್ಯಾಸಗಳೇ ಕಾರಣ.

ಒಂದು ಭಾಷೆಯಲ್ಲಿ ಆಕೃತಿಮಗಳನ್ನು ವಿನ್ಯಾಸಗೊಳಿಸುವ ಸಾಧ್ಯತೆಗಳನ್ನು ಆಕೃತಿಮ ರಚನೆ ಹಾಗೂ ವಾಕ್ಯರಚನೆಯ ಹಂತಗಳಲ್ಲಿ ಗುರುತಿಸುವ ಅನ್ವಯಿಕ ಭಾಷಾವಿಜ್ಞಾನವನ್ನು ಶೈಲಿವಿಜ್ಞಾನ (Stylistics) ಎಂದು ಕರೆಯಲಾಗುತ್ತದೆ. ಶೈಲಿವಿಜ್ಞಾನ ಸಾಹಿತ್ಯವನ್ನು ತನ್ನ ಅಧ್ಯಯನದ ವಸ್ತುವನ್ನಾಗಿ ಸ್ವೀಕರಿಸುತ್ತದೆಯಲ್ಲದೆ ಯಾವುದು, ಯಾಕೆ, ಮತ್ತು ಹೇಗೆ ಪರಿಣಾಮಕಾರಿಯಾಗಿದೆಂಬುದನ್ನು ವಿವರಿಸುತ್ತದೆ. ಇದರಿಂದಾಗಿ ಭಾಷೆಗಳ ಶೈಲಿಯಾತ್ಮಕ ಆಂತರಿಕ ಇತಿಮಿತಿಗಳನ್ನೂ ಗುರುತಿಸಿಕೊಳ್ಳಬಹುದಾಗಿದೆ. ಸಾಹಿತ್ಯ, ಭಾಷೆಯ

ತಳಹದಿಯ ಮೇಲೆ ಇರುತ್ತದೆಯಾದುದರಿಂದ ಕಾವ್ಯ ಮೀಮಾಂಸೆಗಾರರು ವಿಶೇಷವಾಗಿ ಗಮನ ಹರಿಯಿಸದೆ ಇದ್ದ ಭಾಷಿಕ ರಚನೆಯತ್ತ ಶೈಲಿವಿಜ್ಞಾನ ಗಮನ ಹರಿಯಿಸಿ ತನ್ನ ಅಸ್ತಿತ್ವವನ್ನು ನಿರ್ಮಿಸಿಕೊಂಡಿದೆ.

೩. ಸಾಮಾಜಿಕ ಭಾಷಾವಿಜ್ಞಾನ

ಭಾಷೆಯ ಸಾಮಾಜಿಕ ಕ್ರಿಯೆಯನ್ನು ಕುರಿತ ವಿಜ್ಞಾನವೇ ಸಾಮಾಜಿಕ ಭಾಷಾವಿಜ್ಞಾನ. ಒಂದು ಸಮಾಜದ ಸದಸ್ಯರನ್ನು ಅನ್ಯೋನ್ಯತೆಯಿಂದ ಸಂಘಟಿಸುವ ಸಾಮರ್ಥ್ಯ ಭಾಷೆಗೆ ಇರುತ್ತದೆ. ಭಾಷಾವೈವಿಧ್ಯತೆ ಸಾಮಾಜಿಕ ರಚನೆಯಲ್ಲಿ ತನ್ನ ಪ್ರಭಾವವನ್ನು ಬೀರುತ್ತದೆ. ಭಾಷೆಗಳಿಂದ ಸಾಮಾಜಿಕ ಭಿನ್ನತೆಗಳೂ ಉಂಟಾಗುತ್ತವೆ. ಕರ್ನಾಟಕದಲ್ಲಿ ತುಳು ಸಮಾಜ, ಕೊಂಕಣಿ ಸಮಾಜ, ಕೊಡವ ಸಮಾಜ ಮೊದಲಾದುವುಗಳು ಇದಕ್ಕೆ ಉತ್ತಮ ನಿದರ್ಶನ. ಹಲವಾರುಸಲ ಭಾಷಾವ್ಯತ್ಯಾಸಗಳಿಂದ ವ್ಯಕ್ತಿಗಳ ಸಮಾಜವನ್ನು ಗುರುತಿಸುವುದು ಸಾಧ್ಯವಾಗುತ್ತದೆ. ಧಾರವಾಡದಲ್ಲಿ 'ಇವೆ/ಉಂಟು' ಎನ್ನುವುದಕ್ಕೆ ಲಿಂಗಾಯತರು 'ಐತಿ' ಎಂದರೆ ಬ್ರಾಹ್ಮಣರು 'ಅದ' ಎನ್ನುತ್ತಾರೆ. ಹೀಗೆ ಭಾಷಾ ಪ್ರಯೋಗಗಳ ಮೂಲಕ ವ್ಯಕ್ತಿಗಳ ಸಮಾಜ ಗುರುತಿಸಲು ಸಾಧ್ಯವಾಗುತ್ತದೆ. ಆದರೆ ಹಲವಾರು ಸಲ ಭಾಷಾಪ್ರಯೋಗಗಳನ್ನು ಗಮನಿಸಿ ಸಮಾಜ ಗುರುತಿಸುವುದರಿಂದ ಪ್ರಮಾದಗಳೂ ಆಗಬಹುದು. ಉದಾಹರಣೆಗೆ ಮುಂದುವರೆದವರು ಅಲ್ಪಪ್ರಾಣ-ಮಹಾಪ್ರಾಣ, ಹ್ರಸ್ವ-ದೀರ್ಘ, ಸ, ಶ, ಷಗಳ ಉಚ್ಚಾರ ವ್ಯತ್ಯಾಸಗಳನ್ನು ಚೆನ್ನಾಗಿ ಅರಿತು ಉಚ್ಚಾರಿಸುತ್ತಾರೆ; ಹಿಂದುಳಿದವರ ಬಾಯಿಯಲ್ಲಿ ಈ ವ್ಯತ್ಯಾಸಗಳು ಸಮರ್ಪಕವಾಗಿ ಉಚ್ಚಾರವಾಗುವುದಿಲ್ಲ ಎಂಬುದಾಗಿ ಹೇಳುವುದುಂಟು. ಆದರೆ ಇದು ತಪ್ಪು ಅಭಿಪ್ರಾಯ ಎಂದು ಪ್ರತ್ಯೇಕವಾಗಿ ಹೇಳುವ ಅವಶ್ಯಕತೆ ಇಂದು ಉಳಿದಿಲ್ಲ. ಅನೇಕ ವಿದ್ಯಾವಂತರು ಕೂಡಾ ಈ ವ್ಯತ್ಯಾಸಗಳ ಬಗೆಗೆ ನಿರ್ಲಕ್ಷ್ಯ ವಹಿಸುವುದನ್ನು ನಾವು ಗಮನಿಸುತ್ತೇವೆ.

ಭಾಷೆಯ ಸಾಮಾಜಿಕ ವಿಶ್ಲೇಷಣೆಯಿಂದ ಒಂದು ಸಮಾಜದಲ್ಲಿ ಬಳಕೆಯಾಗುವ ಭಾಷಾ ಸಂಗತಿಗಳ ಬಗೆಗೆ ನಿರ್ದಿಷ್ಟ ವಿವರ ನಮಗೆ ದೊರಕುವುದು ಸಾಧ್ಯವಾಗುತ್ತದೆ. ಸಮಾಜದಲ್ಲಿ ಭಾಷೆಯ ಬಳಕೆಯಾಗುವುದು ಪ್ರಮುಖವಾಗಿ ಸಂವಹನ ಮಾಧ್ಯಮವಾಗಿ. ಸಾಮಾಜಿಕ ಜೀವನದಲ್ಲಿ ವ್ಯಕ್ತಿಗೆ ಒಂದು ಸಮಾಜದ ಸದಸ್ಯನಾಗಿ ಬಾಳಲು ಇದು ಅತ್ಯಾವಶ್ಯಕವಾಗಿರುವತ್ತದೆ.

ಸಾಮಾಜಿಕ ಪರಿಸರದಿಂದಲೇ ಅನುಕರಣೆಯ ಮೂಲಕ ವ್ಯಕ್ತಿ, ಭಾಷೆಗಳನ್ನು ಕಲಿತುಕೊಳ್ಳುತ್ತಾನೆ. ವೈಯಕ್ತಿಕ ಭಾಷೆಯನ್ನು ವ್ಯಕ್ತಿಭಾಷೆ (Idiolect) ಎಂದು ಕರೆದರೆ

ಅವುಗಳ ಮೊತ್ತವನ್ನು ಉಪಭಾಷೆ (Dialect) ಎಂದು ಪರಿಗಣಿಸಿ ಅವುಗಳೆಲ್ಲವನ್ನು ಒಟ್ಟಾಗಿ ಭಾಷೆ (Language) ಎಂದು ಪಾರಿಭಾಷಿಕವಾಗಿ ಹೆಸರಿಸುತ್ತಾರೆ. ಸಮಾಜದಲ್ಲಿ ವ್ಯಕ್ತಿಭಾಷೆ ಹೆಚ್ಚು ಮೂರ್ತಸ್ವರೂಪದ್ದಾದರೆ, ಭಾಷೆ ಅಮೂರ್ತಸ್ವರೂಪದ್ದು. ಉಪಭಾಷೆಗಳಲ್ಲಿ ಸಂವಹನ, ಭಾಷೆಗಳಿಗಿಂತ ಹೆಚ್ಚು ದಟ್ಟವಾಗಿರುತ್ತದೆ. ಆದರೆ ಸಾಮಾಜಿಕ ಅಂತಸ್ತನ್ನು ಹೆಚ್ಚಾಗಿ ಪ್ರಮಾಣ ಭಾಷೆಯ ತಳಹದಿಯ ಮೇಲೆ ಅಳೆಯುತ್ತಾರೆ. ಸಾಹಿತ್ಯ ಮತ್ತು ಸಮೂಹ ಸಂವಹನ ಮಾಧ್ಯಮಗಳಲ್ಲಿ (ವಾರ್ತಾಪತ್ರಿಕೆ, ಆಕಾಶವಾಣಿ, ದೂರದರ್ಶನ) ಪ್ರಮಾಣ ಭಾಷೆಯನ್ನು ಬಳಸುವುದೇ ಹೆಚ್ಚು.

ಸಾಮಾಜಿಕವಾಗಿ ಭಾಷೆಯಲ್ಲಿ ಪ್ರಮಾಣಭಾಷೆ, ಆಡುಭಾಷೆ, ಪ್ರಾದೇಶಿಕ ಭಾಷೆ ಇತ್ಯಾದಿಯಾಗಿಯಲ್ಲದೆ ಜಾತಿಭೇದಗಳೂ ಉಂಟು. ಈ ವೈವಿಧ್ಯತೆಯಿಂದಾಗಿ ಭಾಷೆಗೂ ಸಮಾಜಕ್ಕೂ ಅನ್ಯೋನ್ಯ ನಂಟು ಇದೆ ಎಂಬುದು ಸ್ಪಷ್ಟಗೊಳ್ಳುತ್ತದೆ. ಪ್ರತಿಯೊಂದು ಭಾಷೆಗೂ ಅದರದ್ದೇ ಆದ ವ್ಯಾಕರಣವಿರುತ್ತದೆ ; ಅಲ್ಲಿಯ ಆಕೃತಿಮಗಳಿಗೆ ವಿಶಿಷ್ಟವಾದ ನಿರ್ದೇಶಕಾರ್ಥವಿರುತ್ತದೆಯಲ್ಲದೆ ಅವು ಸಂಯೋಜನೆಗೊಳ್ಳುವ ರೀತಿಯೂ ಭಿನ್ನವಾಗಿರುತ್ತದೆ. ಹೀಗೆ ಸಾಮಾಜಿಕವಾಗಿ ಭಾಷೆಗಳ ರೂಪ ಅರ್ಥಗಳೆರಡರಲ್ಲಿಯೂ ಭಿನ್ನತೆಯನ್ನು ನಾವು ಕಾಣುತ್ತೇವೆ. ಭಾಷೆಯ ಸಾಮಾಜಿಕ ವೈವಿಧ್ಯತೆಯನ್ನು ವ್ಯಾಪಕವಾದ ಕ್ಷೇತ್ರಕಾರ್ಯದ ಮೂಲಕ ಗುರುತಿಸಿ ನಮೂದಿಸುವುದು ಭಾಷಾವೈಜ್ಞಾನಿಕ ದೃಷ್ಟಿಯಿಂದ ಅತ್ಯಗತ್ಯ. ಭಾಷಾವಾರು ರಾಜ್ಯಗಳಲ್ಲಿ ಭಾಷಾಯೋಜನೆ ಮಾಡಲು ಅಂತೆಯೇ ನಮ್ಮ ಮುಂದಿನ ಪೀಳಿಗೆಗೆ ನಮ್ಮ ಭಾಷೆಗಳ ವೈವಿಧ್ಯತೆಯ ಅರಿವು ಹಾಗೂ ಅವುಗಳ ಸೂಕ್ತ ಬಳಕೆಗೆ ಬೇಕಾದ ನೈಪುಣ್ಯ ಅವರಿಗೆ ಒದಗಿಸಲು ಅದು ಅನಿವಾರ್ಯವೂ ಹೌದು. ಹೀಗೆ ಸಾಮಾಜಿಕ ಭಾಷಾವಿಜ್ಞಾನದ ತಿಳುವಳಿಕೆ, ಹಲವಾರು ಭಾಷೆಗಳು ಪ್ರಚಲಿತವಿದ್ದ ಪ್ರದೇಶಗಳಲ್ಲಿ, ಭಾಷಾಸೌಹಾರ್ದತೆಗೂ ಅನುಕೂಲಕರವಾಗಿರುತ್ತದೆ.

೪. ಭಾಷೆ

ಭಾಷಾವಿಜ್ಞಾನದಲ್ಲಿ ಭಾಷೆ ಎಂದರೆ ಸಾಮಾಜಿಕ ಸಂಪರ್ಕಕ್ಕೋಸ್ಕರ ಮಾನವ ನಿರ್ಮಿಸಿಕೊಂಡ ಯಾದೃಚ್ಛಿಕ ಮೌಖಿಕ ಸಂಕೇತಗಳ ವ್ಯವಸ್ಥೆ. ಪ್ರಪ್ರಥಮವಾಗಿ ಭಾಷೆ ಸಾಂಕೇತಿಕವಾದುದು. ಯಾವುದು ಇನ್ನೊಂದನ್ನು ಸೂಚಿಸುತ್ತದೆಯೊ ಅದೇ ಸಂಕೇತ. ಸಂಕೇತಗಳಲ್ಲಿ ಚಾಕ್ಷುಷ, ಶ್ರವಣ, ಸ್ಪರ್ಶನ, ಘ್ರಾಣೇಂದ್ರಿಯ ಮತ್ತು ಮೌಖಿಕಗಳೆಂದು ವೈವಿಧ್ಯತೆ ಇದೆ. ಭಾಷೆ, ಸ್ವರೂಪ ದೃಷ್ಟಿಯಿಂದ ಧ್ವನ್ಯಾತ್ಮಕವಾಗಿರುವುದರಿಂದ ಅದು ಮೌಖಿಕ ಸಂಕೇತಗಳಿಂದ ಕೂಡಿದ್ದುದಾಗಿದೆ.

ಧ್ವನ್ಯಂಗ ಮತ್ತು ಧ್ವನಿಸ್ಥಾನಗಳ ಸಂಯೋಗದಿಂದ ಅಥವಾ ಸಾಮೀಪ್ಯದಿಂದ

ಭಾಷಾಧ್ವನಿಗಳು ಹುಟ್ಟುತ್ತವೆ. ಈ ಮೌಖಿಕ ಧ್ವನಿಗಳು ಸಾಮಾಜಿಕ ಪರಿಸರದಿಂದ ಅರ್ಥವನ್ನು ಪಡೆದುಕೊಳ್ಳುತ್ತವೆಯಾದುದರಿಂದ ಹಾಗೂ ಧ್ವನಿ ಸಂಕೇತಗಳಲ್ಲಿ ಸಹಜವಾಗಿ ಅರ್ಥ ಹುದುಗಿಕೊಂಡಿರುವುದಿಲ್ಲವಾದುದರಿಂದ ಅವುಗಳು ಯಾದೃಚ್ಛಿಕವೆನಿಸಿಕೊಳ್ಳುತ್ತವೆ. ಈ ಯಾದೃಚ್ಛಿಕ ಮೌಖಿಕ ಸಂಕೇತಗಳು ನಿಯಮಬದ್ಧವಾಗಿ ಭಾಷೆಯಲ್ಲಿ ವರ್ತಿಸುವುದರಿಂದ ಭಾಷೆಯೆಂಬುದು ಯಾದೃಚ್ಛಿಕ ಮೌಖಿಕ ಸಂಕೇತಗಳ ವ್ಯವಸ್ಥೆ. ರೂಪ ಮತ್ತು ಅರ್ಥ ಇವೆರಡು ಭಾಷೆಯ ಪ್ರಮುಖ ಮುಖಗಳು. ರೂಪವನ್ನು ಧ್ವನ್ಯಾತ್ಮಕ, ಧ್ವನಿಮಾತ್ಮಕ, ಆಕೃತಿಮಾತ್ಮಕ ಮತ್ತು ವಾಕ್ಯಾತ್ಮಕ ಹಂತಗಳನ್ನಾಗಿ ವಿಭಜಿಸಿದರೆ ಅರ್ಥದ ಹಂತವನ್ನು ಅರ್ಥಾತ್ಮಕ (Semantic) ಹಂತ ಎಂದು ಕರೆಯುತ್ತಾರೆ. ಧ್ವನಿ (Phone), ಧ್ವನಿಮ (Phoneme), ಆಕೃತಿಮ (Morpheme), ವಾಕ್ಯ-ಘಟಕ (Syntagmeme) ಮತ್ತು ಅರ್ಥಿಮ (Sememe) ಗಳು ಅನುಕ್ರಮವಾಗಿ ಆಯಾಯ ಹಂತದ ಅತ್ಯಲ್ಪ ಘಟಕಗಳು. ಈ ಘಟಕಗಳ ಹಂತ ಹಂತದ ಸಂಯೋಜನೆಯೇ ಭಾಷೆ ಎಂಬ ಬೃಹತ್-ಘಟಕ ಎಂದು ಭಾಷಾವಿಜ್ಞಾನದ ರಾಚನಿಕ ಪಂಥ ಪರಿಗಣಿಸುತ್ತದೆ.

5. ಮನೋಭಾಷಾವಿಜ್ಞಾನ

ಮನೋಭಾಷಾವಿಜ್ಞಾನವೆಂಬುದು ಮನೋವಿಜ್ಞಾನ ಹಾಗೂ ಭಾಷಾವಿಜ್ಞಾನಗಳಿಂದ ಮೇಳೈಸಿದ ಅಂತರ್‌ಶಿಸ್ತೀಯ ಅಧ್ಯಯನ. ಶೈಕ್ಷಣಿಕ ರಂಗದಲ್ಲಿ ಮನಸ್ಸಿನ ಪಾತ್ರವನ್ನು ಕುರಿತು ಅಧ್ಯಯನ ಮಾಡುವಾಗ ಭಾಷಿಕ ವಿಷಯಗಳತ್ತ ಗಮನ ಹರಿಯಿಸುವ ಪ್ರಾಮುಖ್ಯತೆಯನ್ನು ಮನೋಭಾಷಾವಿಜ್ಞಾನ (Psycholinguistics) ಗೊತ್ತುಮಾಡಿದೆ. ಮಾನಸಿಕ ವಿಕ್ಷಿಪ್ತತೆಗಳನ್ನು ವಿಶ್ಲೇಷಿಸುವಲ್ಲಿ ಕೂಡಾ ಮನೋವಿಜ್ಞಾನಿಗಳಿಗೆ ಭಾಷಾವಿಜ್ಞಾನಿಗಳು ನೆರವನ್ನು ನೀಡಬಲ್ಲರು. ವ್ಯಕ್ತಿತ್ವದ ಬೆಳವಣಿಗೆಯಲ್ಲಿ ಭಾಷಾಪ್ರಭುತ್ವದ ಪಾತ್ರ ಬಹಳ ಹಿರಿದಾಗಿದೆಂಬುದು ಇತ್ತೀಚೆಗಿನ ಪ್ರಯೋಗಗಳಿಂದ ಖಚಿತವಾಗಿದೆ. ಭಾಷೆಯಲ್ಲಿ ವ್ಯತಿರಿಕ್ತತೆಯನ್ನು ಗಮನಿಸಿ ವ್ಯಕ್ತಿಯ ಚಿತ್ತವಿಕಲತೆ (ಸ್ಕಿಜೊಫ್ರೇನಿಯ), ಚಿತ್ತಚಂಚಲತೆ (ನ್ಯೂರೋಸಿಸ್) ಮೊದಲಾದ ಮನೋದೌರ್ಬಲ್ಯತೆಗಳನ್ನು ಗುರುತಿಸಬಹುದಾಗಿದೆ. ಸಮಾಜದಲ್ಲಿ ಎಲ್ಲ ವರ್ಗದ ಜನರ ಭಾಷೆಗಳಿಗೆ ಸಮಾನ ಅವಕಾಶ ಹಾಗೂ ಗೌರವ ಸಿಗದೆ ಹೋದಾಗ ಆ ವರ್ಗದ ಜನರು ಹಿಂದುಳಿದವರಾಗುತ್ತಾರೆಂಬುದೂ ನಿಜವೇ. ವಸ್ತುಸ್ಥಿತಿ ಹೀಗಿರುವಾಗ, ಪ್ರಜಾಪ್ರಭುತ್ವದಲ್ಲಿ ಜನರ ಹಕ್ಕುಗಳ ಸಮಾನತೆಯನ್ನು ಕಾಪಾಡುವಲ್ಲಿ ಅವರ ಭಾಷೆಗಳ ಬೆಳವಣಿಗೆಯತ್ತ ಸರಕಾರಗಳು ಹಾಗೂ ಸಾಮಾಜಿಕ ಸಂಸ್ಥೆಗಳು ವಿಶೇಷ ಲಕ್ಷ್ಯ ಕೊಡದೆ ಹೋದಲ್ಲಿ ಹಲವು ಜನಸಮುದಾಯಗಳು ನಿಮ್ನ ವರ್ಗಗಳಾಗಿ, ಹಿಂದುಳಿದ ಪಂಗಡಗಳಾಗಿ, ಸದಾ ಉಳಿಯುವುದರಲ್ಲಿ ಸಂದೇಹವಿಲ್ಲ. ಕಾರಣ, ರಾಷ್ಟ್ರದ ಹಾಗೂ

ರಾಜ್ಯಗಳ ಭಾಷಾಯೋಜನೆಗಳಲ್ಲಿ ಎಲ್ಲರಿಗೂ ಸಮಾನ ನ್ಯಾಯ ದೊರಕಿಸಲು ಮನೋಭಾಷಾವಿಜ್ಞಾನದಂತಹ ಶಿಸ್ತುಗಳು ಅತ್ಯಗತ್ಯ.

ಮನೋಭಾಷಾವಿಜ್ಞಾನ, ಭಾಷೆಗಳ ಸಂವಹನಶೀಲತೆಯನ್ನು ಹಾಗೂ ಮಾನಸಿಕ ಪ್ರಕ್ರಿಯೆಗಳನ್ನು, ಮಾತುಗ ಹಾಗೂ ಕೇಳುಗರನ್ನು ಗಮನಿಸಿ, ವಿಶ್ಲೇಷಿಸುತ್ತದೆ. ಈ ವಿಶ್ಲೇಷಣೆಗೆ ಮೂರು ಆಯಾಮಗಳಿವೆ : (1) ಸಂವಹನದ ವಿಷಯ ಅಥವಾ ವಸ್ತು, (2) ಮಾತುಗ, (3) ಕೇಳುಗ. ಮೊದಲನೆಯದು ಭಾಷಿಕ ಸಂಕೇತಗಳಿಗೆ, ಎರಡನೆಯದು ಮಾತುಗನ ಭಾವಗಳಿಗೆ, ಮೂರನೆಯದು ಕೇಳುಗನ ಅರ್ಥೈಸುವಿಕೆಗೆ ಸಂಬಂಧಪಟ್ಟವುಗಳಾಗಿವೆ. ಈ ಮೂರು ಆಯಾಮಗಳ ಅಂತಸ್ಸಂಬಂಧಗಳನ್ನು ವಿವೇಚಿಸುವುದೇ ಮನೋಭಾಷಾವಿಜ್ಞಾನದ ಮುಖ್ಯ ಗುರಿ.

ಭಾಷಾವಿಜ್ಞಾನಿಗಳು ಭಾಷಾರಚನೆಗೆ ಹೆಚ್ಚು ಒತ್ತುಕೊಟ್ಟರೆ ಮನೋಭಾಷಾವಿಜ್ಞಾನ ಭಾಷೆಯ ಸಾಂಕೇತಿಕತೆ, ಅರ್ಥ ಹಾಗೂ ಅದರ ಗ್ರಹಿಕೆಯನ್ನೊಳಗೊಂಡ ಅಧ್ಯಯನದ ವ್ಯಾಪ್ತಿಯನ್ನು ಪಡೆದಿದೆ. ಇಂತಹ ಸಮಗ್ರ ಅಧ್ಯಯನದಲ್ಲಿ ಅದು ಭಾಷಾವಿಜ್ಞಾನ ಹಾಗೂ ಮನೋವಿಜ್ಞಾನಗಳ ಸಾರವನ್ನು ಸಮೀಕರಿಸಿ ಮುಕ್ತ ರೀತಿಯಲ್ಲಿ ಮುಂದುವರಿಯುತ್ತದೆ. ಕಾರಣ ಇಂದಿನ ಅಂತರ್‌ಶಿಸ್ತೀಯ ಅಧ್ಯಯನದ ಯುಗದಲ್ಲಿ ಮನೋಭಾಷಾವಿಜ್ಞಾನ ಪ್ರಸ್ತುತತೆಯನ್ನು ಪಡೆದಿದೆ.

೬. ಸ್ವೀಕರಣ

ಭಾಷೆ ನಿತ್ಯವೂ ಹೊಸತು. ಅದು ಬದಲಾಗುತ್ತಾ ಇರುವುದೇ ಅದಕ್ಕೆ ಕಾರಣ. ಈ ಬದಲಾವಣೆಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಸ್ವೀಕರಣವೂ ಒಂದು. ಅನೇಕ ಭಾಷೆಗಳು ಒಂದೆಡೆ ಕಲೆತಾಗ ಅವುಗಳೊಳಗೆ ಸಹಜವಾಗಿ ಕೊಡುಕೊಳ್ಳುವಿಕೆಗಳು ಉಂಟಾಗುತ್ತವೆ. ತತ್ಪರಿಣಾಮವಾಗಿ ಒಂದು ಭಾಷೆ ಇನ್ನೊಂದು ಭಾಷೆಯಿಂದ ಶಬ್ದಗಳನ್ನು ಆಮದು ಮಾಡಿಕೊಳ್ಳುತ್ತದೆ. ಈ ಪ್ರಕ್ರಿಯೆಯನ್ನು ಸ್ವೀಕರಣ (Borrowing) ಎಂದು ಕರೆಯುತ್ತೇವೆ. ಹೀಗೆ ಕನ್ನಡದಲ್ಲಿ ಸಂಸ್ಕೃತದಿಂದ ಸ್ವರ್ಗ, ನರಕ, ಪಾಪ ಇತ್ಯಾದಿ ಇಂಗ್ಲೀಷಿನಿಂದ ಕಾರು, ಬಸ್ಸು, ಟಿ.ವಿ., ರೇಡಿಯೊ ಮುಂತಾದ ಪದಗಳು ಸ್ವೀಕೃತಗೊಂಡಿವೆ. ಈ ಸ್ವೀಕರಣ ಎರಡು ಭಾಷೆಗಳ ನಡುವೆ ನಡೆದುದರಿಂದ ಅದನ್ನು ಭಾಷಾಸ್ವೀಕರಣ ಎಂದು ಕರೆಯುತ್ತೇವೆ. ಅದು ಒಂದೇ ಭಾಷೆಯ ಎರಡು ಉಪಭಾಷೆಗಳ ನಡುವೆ ಜರುಗಿದರೆ ಅದನ್ನು ಉಪಭಾಷಾಸ್ವೀಕರಣ ಎಂದು ಕರೆಯುತ್ತಾರೆ

ಧಾರವಾಡ ಕನ್ನಡದಲ್ಲಿ 'ತಿನಸು' ವಿನ ಸ್ಥಾನದಲ್ಲಿ 'ತಿಂಡಿ' ಬಳಕೆಯಾದಾಗ ಅಂತೆಯೇ 'ತೊಪ್ಪಲ'ದ ಸ್ಥಾನದಲ್ಲಿ 'ಸೊಪ್ಪು' ಬಳಸಿದಾಗ ಅವು ಉಪಭಾಷಾಸ್ವೀಕರಣಕ್ಕೆ ಉತ್ತಮ ನಿದರ್ಶನಗಳಾಗುತ್ತವೆ.

ಸ್ವೀಕರಣದಲ್ಲಿ (೧) ಭಾಷಾಂತರ ಸ್ವೀಕರಣ, (೨) ರೂಪಾಂತರ ಸ್ವೀಕರಣ (೩) ಶಬ್ದಾಂತರ ಸ್ವೀಕರಣ (೪) ಸ್ಥಾನಾಂತರ ಸ್ವೀಕರಣ (೫) ಮಿಶ್ರ ಸ್ವೀಕರಣವೆಂದು ಮುಖ್ಯವಾಗಿ ಐದು ರೀತಿ.

ಕೊಡುವ ಭಾಷೆ, ಪ್ರದಾತೃ ಭಾಷೆ ಎಂದೆನಿಸಿಕೊಂಡರೆ ಕೊಳ್ಳುವ ಭಾಷೆ ಗೃಹಿತೃ ಭಾಷೆಯೆನಿಸಿಕೊಳ್ಳುವುದು.

i. ಶಬ್ದಸ್ವೀಕರಣ :

ಪ್ರದಾತೃ ಭಾಷೆಯಿಂದ ಶಬ್ದಗಳನ್ನು ಸ್ವೀಕರಿಸಿದರೆ ಅದನ್ನು ಶಬ್ದಸ್ವೀಕರಣವೆನ್ನುತ್ತೇವೆ. ಈ ಪ್ರಕಿಯೆಯಲ್ಲಿ ಗೃಹಿತೃ ಭಾಷಾರಚನೆಗೆ ಹೊಂದಿಕೊಳ್ಳುವಂತೆ ಅಲ್ಪಸ್ವಲ್ಪ ವ್ಯತ್ಯಾಸಗಳಾಗುತ್ತವೆ. : ಕಾರ್>ಕಾರು, ಬಸ್>ಬಸ್ಸು; ಮಾತೃ >ಮಾತ್ರು ಇತ್ಯಾದಿ.

ಶಬ್ದಸ್ವೀಕರಣದಿಂದಾಗಿ ಗೃಹಿತೃ ಭಾಷೆಯಲ್ಲಿ ಅನೇಕ ರೀತಿಯ ಭಾಷಿಕ ಬದಲಾವಣೆಗಳು ಉಂಟಾಗುತ್ತವೆ :

(ಅ) ಶಬ್ದಕೋಶ ಬದಲಾವಣೆ : ಪ್ರದಾತೃ ಭಾಷೆಯಿಂದ ಪಡೆಯಲಾದ ಶಬ್ದಸ್ವೀಕರಣದಿಂದಾಗಿ ಗೃಹಿತೃ ಭಾಷೆಯ ಶಬ್ದಕೋಶ ವಿಸ್ತೃತಗೊಳ್ಳುತ್ತದೆ. ಹೀಗೆ ಕನ್ನಡದಲ್ಲಿ ಅನೇಕ ಸಂಸ್ಕೃತ, ಪ್ರಾಕೃತ, ಇಂಗ್ಲೀಷ್ ಮುಂತಾದ ದೇಶಿ ಹಾಗೂ ವಿದೇಶಿ ಭಾಷೆಗಳ ಶಬ್ದಗಳು ಬಳಕೆಯಲ್ಲಿವೆ: ದೇಶ, ಕಾಲ, ರೈಲು, ರೇಡಿಯೋ ಇತ್ಯಾದಿ.

(ಆ) ರೂಪ ಬದಲಾವಣೆ : ಶಬ್ದಸ್ವೀಕರಣದಿಂದ ಗೃಹಿತೃ ಭಾಷೆಯಲ್ಲಿಲ್ಲದ ಹೊಸ ರೂಪ ಬರುವುದೇ ರೂಪ ಬದಲಾವಣೆ: ಸ್ತ್ರೀ, ಸ್ವರ್ಗ, ಸ್ಕ್ರೂ ಇತ್ಯಾದಿ.

(ಇ) ವ್ಯಾಕರಣ ಬದಲಾವಣೆ : ಪ್ರದಾತೃ ಭಾಷೆಯ ಪ್ರಭಾವದಿಂದ ಗೃಹಿತೃ ಭಾಷೆಯ ವ್ಯಾಕರಣ ಬದಲಿತಗೊಂಡರೆ ಅದು ವ್ಯಾಕರಣ ಬದಲಾವಣೆಯಾಗುತ್ತದೆ. ಉದಾ: ಕನ್ನಡದಲ್ಲಿ ಕರ್ಮಣಿ ಪ್ರಯೋಗ; 'ಮತ್ತು' ಎಂಬ ಸಮುಚ್ಚಯವನ್ನು ಬಳಸಿ ಉತ್ಪಾದಿಸುವ ಸಮಾನ ವಾಕ್ಯಗಳು.

(ಈ) ವಿಕಲ್ಪ ಬದಲಾವಣೆ : ಪ್ರದಾತೃ ಭಾಷೆಯ ರೂಪಗಳಿಗೆ ಗೃಹಿತ ಭಾಷೆಯ ರೂಪಗಳನ್ನು ಹಚ್ಚಿ ಅವುಗಳನ್ನು ಸಂವಾದಿಗಳಾಗಿ ಬಳಸುವುದೇ ವಿಕಲ್ಪ ಬದಲಾವಣೆ.

ಉನ್ನತ + ಇಕೆ > ಉನ್ನತಿಕೆ = ಔನ್ನತ್ಯ
ಪ್ರಮುಖ + ತೆ > ಪ್ರಮುಖತೆ = ಪ್ರಾಮುಖ್ಯ
ಉದ್ಧಟ + ತನ > ಉದ್ಧಟತನ = ಔದ್ಧತ್ಯ ಇತ್ಯಾದಿ.

(ಉ) ಧ್ವನಿಮ ಬದಲಾವಣೆ : ಸ್ವೀಕರಣದಿಂದಾಗಿ ಗೃಹಿತ ಭಾಷೆಯ ಧ್ವನಿಮ ವ್ಯವಸ್ಥೆಯಲ್ಲಿ ಬದಲಾವಣೆಯಾಗುವುದುಂಟು. ಉದಾಹರಣಾರ್ಥವಾಗಿ ಕನ್ನಡದಲ್ಲಿಯ ಮಹಾಪ್ರಾಣಗಳು; ಸ, ಷ, ಶ ವ್ಯತ್ಯಾಸಗಳು ಇತ್ಯಾದಿ.

ii. ಭಾಷಾಂತರ ಸ್ವೀಕರಣ :

ಪ್ರದಾತೃ ಭಾಷೆಯ ಶಬ್ದವನ್ನು ಇದ್ದಕ್ಕಿದ್ದಂತೆ ಭಾಷಾಂತರ ಮಾಡಿ ಸ್ವೀಕರಿಸುವುದು.

ವಿಷಕಂಠ > ನಂಜುಗೊರಲ
ಹಿಮಾಲಯ > ಮಂಜುವೆಟ್ಟ
Foreword> ಮುನ್ನುಡಿ
Hand bag> ಕೈಚೀಲ

iii. ರೂಪಾಂತರ ಸ್ವೀಕರಣ :

ಪ್ರದಾತೃ ಭಾಷೆಯ ಶಬ್ದವನ್ನು ಗೃಹಿತ ಭಾಷೆಯ ರಚನೆಗೆ ಅನುಗುಣವಾಗಿ ರೂಪಾಂತರಗೊಳಿಸುವುದು :

ದಿಶಾ > ದೆಸೆ; ಪುಸ್ತಕಂ > ಹೊತ್ತಗೆ; ಕ್ಲಾಸ್ > ಕ್ಲಾಸು

iv. ಸ್ಥಾನಾಂತರ ಸ್ವೀಕರಣ :

ಪ್ರದಾತೃ ಭಾಷೆಯ ಶಬ್ದವನ್ನು ಸ್ವೀಕರಿಸದೆ ಅದು ಸೂಚಿಸುವ ಸಾಮಗ್ರಿಗೆ ಗೃಹಿತ ಭಾಷೆಯ ಶಬ್ದವನ್ನು ಬಳಸುವುದೇ ಸ್ಥಾನಾಂತರ ಸ್ವೀಕರಣ :

ರೇಡಿಯೊ : ಆಕಾಶವಾಣಿ
ಸೆಟಿಲೈಟ : ಉಪಗ್ರಹ
ಬುಕ್‌ಪೋಸ್ಟ್ : ತೆರೆದಂಚೆ, ಇತ್ಯಾದಿ.

v. ಮಿಶ್ರ ಸ್ವೀಕರಣ :

ಶಬ್ದಸ್ವೀಕರಣ ಹಾಗೂ ಸ್ಥಾನಾಂತರ ಸ್ವೀಕರಣಗಳನ್ನು ಬೆರೆಯಿಸಿಕೊಳ್ಳುವುದೇ ಮಿಶ್ರಸ್ವೀಕರಣ.

Atom bomb> ಅಣುಬಾಂಬ್
Bus stand> ಬಸ್ ನಿಲ್ದಾಣ
Railway station> ರೈಲು ನಿಲ್ದಾಣ, ಇತ್ಯಾದಿ.

ಭಾಷಾಸ್ವೀಕರಣಕ್ಕೆ ಕೆಲವೊಮ್ಮೆ ಪ್ರತಿಷ್ಠೆ ಕಾರಣವಾದರೆ ಹಲವು ಸಲ ಅಗತ್ಯತೆಯೂ ಕಾರಣವಾಗುತ್ತದೆ. ಅದೇನೆ ಇದ್ದರೂ ಸ್ವೀಕರಣದಿಂದಾಗಿ ಭಾಷೆ ಬದಲಾಗುತ್ತಾ ಹೋಗುತ್ತದೆ. ಇದು ಅನಿವಾರ್ಯ.

vii. ಭಾಷಾವರ್ಗೀಕರಣ

ಜಗತ್ತಿನಾದ್ಯಂತ ಸಾವಿರಾರು ಭಾಷೆಗಳಿರುವಾಗ ಅಧ್ಯಯನ ದೃಷ್ಟಿಯಿಂದ ಅವುಗಳ ವರ್ಗೀಕರಣ ಅತ್ಯಗತ್ಯ. ಐತಿಹಾಸಿಕ ಹಾಗೂ ತೌಲನಿಕ ಭಾಷಾವಿಜ್ಞಾನಗಳ ಆಧಾರದ ಮೇಲೆ ಭಾಷಾವರ್ಗೀಕರಣವನ್ನು ಪ್ರಮುಖವಾಗಿ (೧) ಐತಿಹಾಸಿಕ ವರ್ಗೀಕರಣ, (೨) ಜನಾಂಗಿಕ ವರ್ಗೀಕರಣ, (೩) ಭೌಗೋಳಿಕ ವರ್ಗೀಕರಣ, (೪) ಪ್ರಾಂತಿಕ ವರ್ಗೀಕರಣ ಮತ್ತು (೫) ರಾಚನಿಕ ವರ್ಗೀಕರಣ ಎಂದು ವಿಂಗಡಿಸಿದ್ದಾರೆ.

೧. ಐತಿಹಾಸಿಕ ವರ್ಗೀಕರಣ : ಭಾಷೆಯ ಇತಿಹಾಸವನ್ನು ಆಧರಿಸಿ ಮೂಲಭಾಷೆ, ಪ್ರಾಚೀನ ಭಾಷೆಗಳು, ಮಧ್ಯಕಾಲೀನ ಭಾಷೆಗಳು, ಆಧುನಿಕ ಭಾಷೆಗಳು ಎಂದು ಭಾಷಾ ವರ್ಗೀಕರಣ ಮಾಡುತ್ತಾರೆ. ಹೀಗೆ ಕನ್ನಡದ ಇತಿಹಾಸವನ್ನು ಗಮನಿಸಿ ಪೂರ್ವದ ಹಳಗನ್ನಡ, ಹಳಗನ್ನಡ, ನಡುಗನ್ನಡ, ಹೊಸಗನ್ನಡ ಮತ್ತು ಆಧುನಿಕ ಕನ್ನಡ ಎಂದು ವರ್ಗೀಕರಿಸಬಹುದು.

೨. ಜನಾಂಗಿಕ ವರ್ಗೀಕರಣ : ಜಗತ್ತಿನಾದ್ಯಂತ ವ್ಯಾಪಿಸಿಕೊಂಡಿರುವ ಜನರ ಭಾಷೆಗಳನ್ನು ಅವರವರ ಜನಾಂಗಗಳ ಆಧಾರದ ಮೇಲೆ ವರ್ಗೀಕರಿಸುವುದೇ ಜನಾಂಗಿಕ ವರ್ಗೀಕರಣ. ಉದಾಹರಣಾರ್ಥವಾಗಿ ಕಾಕೇಶಿಯನರು ಆಡುವ ಭಾಷೆಗಳನ್ನು ಕಾಕೇಶಿಯನ್ ಭಾಷೆಗಳೆಂದೂ, ನೀಗ್ರೋಗಳ ಭಾಷೆಗಳನ್ನು ನೀಗ್ರೋ ಭಾಷೆಗಳೆಂದೂ, ಆರ್ಯರು ಮಾತನಾಡುವ ಭಾಷೆಗಳನ್ನು ಆರ್ಯ ಭಾಷೆಗಳೆಂದೂ, ದ್ರಾವಿಡ ಜನಾಂಗದವರು ಆಡುವ ಭಾಷೆಗಳನ್ನು ದ್ರಾವಿಡ ಭಾಷೆಗಳೆಂದೂ ವರ್ಗೀಕರಿಸಿದ್ದಾರೆ.

೩. ಭೌಗೋಳಿಕ ವರ್ಗೀಕರಣ : ಭಾಷೆಗಳು ದೊರೆಯುವ ಪ್ರದೇಶಗಳನ್ನವಲಂಬಿಸಿ ಮಾಡಿದ ಭಾಷಾ ವರ್ಗೀಕರಣವನ್ನು ಭೌಗೋಳಿಕ ವರ್ಗೀಕರಣವೆನ್ನುವರು. ಹೀಗೆ ಭಾರತೀಯ ಭಾಷೆಗಳು, ಚೀನಿ ಭಾಷೆಗಳು, ರಷ್ಯನ್ ಭಾಷೆಗಳು, ಅಮೇರಿಕ ಭಾಷೆಗಳು ಇತ್ಯಾದಿಯಾಗಿ ವರ್ಗೀಕರಿಸಿದ್ದಾರೆ.

೪. ವಾಂಶಿಕ ವರ್ಗೀಕರಣ : ಒಂದೇ ಮೂಲಭಾಷೆಯಿಂದ ಹುಟ್ಟಿ ಬೆಳೆದ ಭಾಷೆಗಳನ್ನು ಒಂದೇ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳೆಂದು ನಿರ್ಣಯಿಸಿ ಅವುಗಳನ್ನು ವರ್ಗ, ಉಪವರ್ಗಗಳಲ್ಲಿ ವರ್ಗೀಕರಿಸಿಕೊಳ್ಳುವುದೇ ವಾಂಶಿಕ ವರ್ಗೀಕರಣ. ಹೀಗೆ ಭಾರತದ ಭಾಷೆಗಳನ್ನು ಆರ್ಯ, ದ್ರಾವಿಡ, ಸೀನೋ ಟಿಬೆಟಿಯನ್, ಆಸ್ಟ್ರೋ-ಏಷ್ಯಾಟಿಕ್ ಭಾಷೆಗಳೆಂದು ಉಪವರ್ಗೀಕರಿಸುತ್ತಾರೆ. ಒಂದೇ ಭಾಷಾಪರಿವಾರಕ್ಕೆ ಸೇರಿದವುಗಳನ್ನು ಜ್ಞಾತಿ ಭಾಷೆಗಳೆಂದು ಗುರುತಿಸುತ್ತಾರೆ.

೫. ರಾಚನಿಕ ವರ್ಗೀಕರಣ : ಭಾಷೆಗಳನ್ನು, ಅವುಗಳ ವಿವಿಧ ರಚನಾತ್ಮಕ ಅಂಶಗಳನ್ನು (ವ್ಯಾಕರಣ, ಪದರಚನೆ, ವಾಕ್ಯರಚನೆ) ಆಧರಿಸಿ, ವರ್ಗೀಕರಿಸುವ ವಿಧಾನವೇ ರಾಚನಿಕ ವರ್ಗೀಕರಣ. ಈ ವರ್ಗೀಕರಣದ ಪ್ರಕಾರ ಪ್ರತ್ಯಯಗಳಿಲ್ಲದ ಭಾಷೆಗಳನ್ನು (ಚೀನಿ, ಟಿಬೆಟನ್, ಬರ್ಮೀ..) ಅಯೋಗಾತ್ಮಕ ಭಾಷೆಗಳೆಂದು ಪ್ರತ್ಯಯಗಳುಳ್ಳ ಭಾಷೆಗಳನ್ನು ಯೋಗಾತ್ಮಕ ಭಾಷೆಗಳೆಂದೂ (ದ್ರಾವಿಡ ಭಾಷೆಗಳು) ಇವೆರಡುಗಳನ್ನೂ ಹೊಂದಿರುವ ಭಾಷೆಗಳನ್ನು (ಗ್ರೀಕ್.ಸಂಸ್ಕೃತ. ಲ್ಯಾಟಿನ್)ಅಂತರ್ಗಮಕ ಭಾಷೆಗಳೆಂದೂ ಶ್ಲೆಗೆಲ್ ಕರೆದಿದ್ದಾನೆ.

೮. ಭಾಷಾಪರಿವಾರಗಳು

ಜಗತ್ತಿನಲ್ಲಿ ಸು.೧೦ ಸಾವಿರಕ್ಕೂ ಮಿಕ್ಕಿ ಭಾಷೆಗಳಿವೆ. ಇವುಗಳನ್ನು ಭಾಷಾವಿಜ್ಞಾನಿಗಳು: (೧) ಇಂಡೋಯುರೋಪಿಯನ್, (೨) ಆಸ್ಟ್ರೋ ಏಷ್ಯಾಟಿಕ್, (೩) ಸಿನೋ ಟಿಬೆಟಿಯನ್, (೪) ಅಮೆರಿಕನ್, (೫) ಆಫ್ರಿಕನ್, (೬) ದ್ರಾವಿಡ, (೭) ಫಿನ್ನೋ ಉಗ್ರಿಕ್, (೮) ಅವರ್ಗೀಯ ಭಾಷಾಪರಿವಾರಗಳೆಂದು ಎಂಟು ವರ್ಗಗಳಲ್ಲಿ ಗುರುತಿಸಿದ್ದಾರೆ.

೧. ಇಂಡೋಯುರೋಪಿಯನ್ ಭಾಷಾಪರಿವಾರ ಅತ್ಯಂತ ವಿಶಾಲವಾದ ಭಾಷಾಪರಿವಾರ. ಇದರಲ್ಲಿ ೧೮೦೦ ಕ್ಕೂ ಮೀರಿ ಭಾಷೆಗಳಿವೆ ಎಂದು ಅಂದಾಜು ಮಾಡಲಾಗಿದೆ. ಈ ಪರಿವಾರವನ್ನು ಪ್ರಧಾನವಾಗಿ ಕೆಂತುಮ್ ಮತ್ತು ಸೆಟುಮ್ ಎಂದು ಎರಡು ಪ್ರಮುಖ ವಿಭಾಗಗಳನ್ನಾಗಿ ವಿಂಗಡಿಸಿದ್ದಾರೆ.

ಇಂಡೋಯುರೋಪಿಯನ್ ★ /ಕ್/>/ಸ್/ ಎಂದು ಬದಲಾವಣೆಗೊಂಡ ಭಾಷೆಗಳೆಲ್ಲವೂ ಕೆಂತುಮ್ ವಿಭಾಗಕ್ಕೆ ಸೇರಿದವುಗಳಾದರೆ ★/ಕ್/>/ಕ್/ ಅಥವಾ /ಗ್/ ಎಂದು ಬದಲಾವಣೆಗೊಂಡ ಭಾಷೆಗಳೆಲ್ಲವೂ ಸೆತುಮ್ ವಿಭಾಗಕ್ಕೆ ಸೇರಿದವುಗಳು.

ಕೆಂತುಮ್ ಭಾಷಾವರ್ಗಕ್ಕೆ ಸೇರಿದ ಭಾಷೆಗಳ ಅಂತರಿಕ ಸಂಬಂಧವನ್ನು ಗಮನಿಸಿ ಅದನ್ನು ಈ ಕೆಳಗಿನಂತೆ ವರ್ಗೀಕರಿಸುತ್ತಾರೆ.

(ಅ) ಜರ್ಮಾನಿಕ್ ವರ್ಗ : ಇಂಗ್ಲಿಷ್, ಅಂಗ್ಲೊ ಸ್ಯಾಕ್ಸನ್, ಡೇನಿಷ್, ಫ್ರಿಸಿಯನ್, ನಾರ್ವೇಜಿಯನ್, ಪೆರೋಯಿಸ್, ಗಾಟ್‌ಲ್ಯಾಂಡಿಕ್, ಸ್ವೀಡಿಶ್, ಫ್ಲೆಮಿಶ್, ಡಚ್ಚ್, ಯೆಡ್ಡಿಶ್, ಆಪ್ರಿಕಾನಾ, ಫ್ರಾಂಕೋನಿಯನ್, ಬರಂಡಿಯನ್, ಗಾಥಿಕ್, ಐಸ್‌ಲ್ಯಾಂಡಿಕ್ ಮುಂತಾದ ಭಾಷೆಗಳು. ಇವುಗಳನ್ನು ಅಮೇರಿಕೆ, ಇಂಗ್ಲಂಡ್, ಅಸ್ಟ್ರೇಲಿಯಾ, ಆಸ್ಟ್ರಿಯ, ಸ್ವೀಡನ್, ಸ್ವಿಜರ್ಲೆಂಡ್ ಮುಂತಾದ ಕಡೆಗಳಲ್ಲಿ ನೋಡಬಹುದು.

(ಆ) ರೊಮಾನಿಕ್ ವರ್ಗ : ಫ್ರೆಂಚ್, ಪೋರ್ಚುಗೀಸ್, ಲ್ಯಾಟಿನ್, ಇಟಾಲಿಯನ್, ಸ್ಪಾನಿಷ್, ಕಾಟ್‌ಲಾನ್, ಸಾರ್ಡೀನಿಯನ್, ರುಮೇನಿಯನ್ ಇತ್ಯಾದಿಗಳು. ಇಟಲಿ, ಸಿಸಿಲಿ, ರೋಂ, ಬ್ರೆಜಿಲ್, ಕೆನಾಡ, ಸ್ಪೇನ್ ಇತ್ಯಾದಿ ಕಡೆಗಳಲ್ಲಿ ಕಾಣಬಹುದು.

(ಇ) ಕೆಲ್ಟಿಕ್ ವರ್ಗ : ವೇಲ್ಸ್, ಬ್ರಿಟಾನಿಯಾ, ಐರಿಷ್, ಸ್ಕಾಟಿಷ್, ಕಾರ್ನಿಷ್, ಸ್ಕಾಚ್‌ಗಾಲಿಕ್, ಮ್ಯಾಕ್ಸ್ ಇತ್ಯಾದಿ ಭಾಷೆಗಳು: ಬ್ರಿಟನ್, ಫ್ರಾನ್ಸ್, ಸ್ಕಾಟ್‌ಲೆಂಡ್, ಅಯರ್ಲೆಂಡ್, ಮಾನ್ ಮೊದಲಾದ ಕಡೆಗಳಲ್ಲಿ ಇವು ಪ್ರಚಲಿತವಾಗಿವೆ.

(ಈ) ಗ್ರೀಕ್ ವರ್ಗ : ಗ್ರೀಕ್, ಅಕಿಯನ್, ಲೋಕೋನಿಯನ್, ಮೆಸ್ಸೀನಿಯನ್, ಅಸ್ರೊಲಿಕ್, ಕ್ರೀಟನ್ ಮುಂತಾದವು ಈ ವರ್ಗದಲ್ಲಿ ಪ್ರಮುಖವಾಗಿವೆ. ಇವುಗಳನ್ನು ಗ್ರೀಸ್, ಅಲೆಗ್ಸಾಂಡ್ರಿಯ, ಸೈಪ್ರಸ್, ಇಟಲಿ, ಯುಗೋಸ್ಲಾವಿಯಾ ಮತ್ತು ರುಮೇನಿಯಾಗಳಲ್ಲಿ ನೋಡಬಹುದು.

(ಉ) ತೊಖಾರಿಯನ್ ವರ್ಗ : ಈ ವರ್ಗದಲ್ಲಿ ತುಷಾರಿಯನ್, ಕರ್‌ಶರಿಯನ್, ಕೋಚಿಯೆನ್, ಅಗನಿಯನ್ ಇತ್ಯಾದಿ ಭಾಷೆಗಳು ಮುಖ್ಯ. ಚೀನಾ, ತುರ್ಕಿಸ್ತಾನಗಳಲ್ಲಿ ಇವುಗಳನ್ನು ಕಾಣಬಹುದು.

ಸೆಂತುಮ್ ಭಾಷಾವರ್ಗಕ್ಕೆ ಸೇರಿದ ಭಾಷೆಗಳ ಆಂತರಿಕ ಸಂಬಂಧವನ್ನು ಗಮನಿಸಿ ಅದನ್ನು ಈ ಕೆಳಗಿನಂತೆ ವರ್ಗೀಕರಿಸುತ್ತಾರೆ :

(ಅ) ಸ್ಲಾವೊನಿಕ್ ವರ್ಗ : ರಷ್ಯನ್, ರುಥೇನಿಯನ್, ಜೆಕ್, ಸೆರ್ಬಿಯನ್, ವೆಂಡಿಶ್ ಪೋಲಿಷ್, ಬಲ್ಗೇರಿಯನ್, ಸ್ಲಾವೋನಿಯನ್, ಮೊದಲಾದ ಭಾಷೆಗಳು ಪ್ರಮುಖ. ಇವು ಬಲ್ಗೇರಿಯ, ತುರ್ಕಿ, ರುಮೇನಿಯ, ಹಂಗೇರಿ, ಗ್ರೀಸ್ ಮುಂತಾದ ಕಡೆಗಳಲ್ಲಿವೆ.

(ಆ) ಬಾಲ್ಟಿಕ್ ವರ್ಗ : ಇದರಲ್ಲಿ ಪ್ರಶನ್, ಲೆಟ್ಟಿಷ್, ಲಿಥುಆನಿಯನ್ ಮೊದಲಾದುವುಗಳು ಮುಖ್ಯ. ಬಾಲ್ಟಿಕ್ ಸಮುದ್ರದ ಪೂರ್ವ ಪಶ್ಚಿಮ ಭಾಗಗಳಲ್ಲಿ ಇವು ಬಳಕೆಯಲ್ಲಿವೆ.

(ಇ) ಅಲ್ಬೇನಿಯನ್ ವರ್ಗ : ಇದರಲ್ಲಿ ಇಲಿರಿಯನ್, ಡೆಮಾಟಿಯನ್, ಅಲ್ಬೇನಿಯನ್, ಮೆಸ್ಸಾಪಿಯನ್ ಮೊದಲಾದ ಭಾಷೆಗಳು ಪ್ರಮುಖವಾಗಿವೆ. ಇಟಲಿ, ಗ್ರೀಸ್, ಯುಗೋಸ್ಲಾವಿಯ, ಬಲ್ಗೇರಿಯ ಮುಂತಾದ ಕಡೆಗಳಲ್ಲಿ ಇವು ಪ್ರಚಲಿತವಾಗಿವೆ.

(ಈ) ಆರ್ಮೇನಿಯನ್ ವರ್ಗ : ಆರ್ಮೇನಿಯನ್ ವರ್ಗದಲ್ಲಿ ಪಶ್ಚಿಮ ಮತ್ತು ಪೂರ್ವ ಆರ್ಮೇನಿಯನ್ ಭಾಷೆಗಳೆಂದು ಉಪವರ್ಗಗಳಿವೆ. ಮೊದಲನೆಯ ವರ್ಗದಲ್ಲಿ ಕರಿನ್, ಮುಸ್ಕ್, ವನ್, ಚರಬೆರ್ದ್, ಪ್ರಪಂಜಿತ್, ಪುಲಿತಿಯ, ಸಿಲಿಸಿಯನ್, ಸ್ಪೆರಿಯನ್, ಸೆರಬೆಕಿರ್, ಅಕ್ನ್, ಅಟೆಸ್ತ್ ಮೊದಲಾದುವು ಪ್ರಮುಖವಾಗಿವೆ. ಎರಡನೆಯ ವರ್ಗದಲ್ಲಿ ಫ್ರಿಜಿಯನ್, ಎರಿವನ್, ಪೆಟ್ಲಿಸ್, ಕರಬಗ್, ಅಸ್ತ್ರಖನ್, ಅಗುಲಿಸ್ ಮೊದಲಾದುವು ಮುಖ್ಯವಾಗಿವೆ. ಇವುಗಳನ್ನು ಯುರೋಪ್ ಮತ್ತು ಏಷ್ಯಾಮೈನರ್‌ಗಳ ನಡುವೆ ಕಾಣಬಹುದು.

(ಉ) ಇರಾನಿಯನ್ ವರ್ಗ : ಸೋಗಡಿಯನ್, ಪರ್ಶಿಯನ್, ಪಾಮಿರಿ, ಪಶ್ತೋ, ಬಲೂಚಿ, ಕುರ್ದಿಷ್, ದೇವಾರಿ, ಮುಂಜ್ಯಾಣಿ ಮೊದಲಾದುವುಗಳು ಮುಖ್ಯ. ಇವು ಇರಾನ್, ಇರಾಕ್, ಪಾಕಿಸ್ತಾನ, ಬಲೂಚಿಸ್ತಾನ, ಅಫಘಾನಿಸ್ತಾನ, ಸಿರಿಯ, ತುರ್ಕಿ, ಹಂಗೇರಿ, ಪರ್ಷಿಯ, ರಷ್ಯಾ ಮೊದಲಾದ ಕಡೆಗಳಲ್ಲಿ ಬಳಕೆಯಲ್ಲಿವೆ.

(ಊ) ದರದ್ ವರ್ಗದಲ್ಲಿ ಖೋವಾರ್, ಕಾಫಿರಿ, ಚಿತ್ರಾಲಿ, ಗಲಗಿತಿ, ಕಾಶ್ಮೀರಿ, ಕೊಹಿಸ್ತಾನಿ, ಮೈಯ, ಪೋಶ್ವಾಲಿ, ಗರ್ಬಿ, ಶೀನಾ ಮುಂತಾದುವುಗಳು ಮುಖ್ಯ.

ಇವು ಅಫಘಾನಿಸ್ತಾನ, ದರದ್‌ಸ್ತಾನ, ಪಾಕಿಸ್ತಾನ, ಕೊಯಿಸ್ತಾನ, ಜಮ್ಮು, ಕಾಶ್ಮೀರ ಮುಂತಾದ ಕಡೆಗಳಲ್ಲಿ ಚಾಲ್ತಿಯಲ್ಲಿವೆ.

(ಋ) ಆರ್ಯವರ್ಗ : ಹಿಂದಿ, ಗುಜರಾತಿ, ಕೊಂಕಣಿ, ಮರಾಠಿ, ಪಂಜಾಬಿ, ಆಸ್ಸಾಮಿ, ಬಂಗಾಳಿ, ರಾಜಸ್ಥಾನಿ, ಓರಿಯ, ಬಿಹಾರಿ, ಸಿಂಹಳಿ ಇತ್ಯಾದಿಗಳು ಈ ವರ್ಗಕ್ಕೆ ಸೇರುತ್ತವೆ.

೨. ಅಸ್ಟ್ರೋಏಷ್ಯಾಟಿಕ್ ಭಾಷಾಪರಿವಾರ :

ಈ ಪರಿವಾರಕ್ಕೆ ಸೇರಿದ ಭಾಷೆಗಳು ಆಸ್ಟ್ರೇಲಿಯಾದಿಂದ ಹಿಡಿದು ಏಷ್ಯಾದ ವರೆಗೆ ಹರಡಿಕೊಂಡಿವೆ. ಈ ಪರಿವಾರದ ಭಾಷೆಗಳನ್ನು ಪ್ರಮುಖವಾಗಿ ಈ ಕೆಳಗಿನಂತೆ ವರ್ಗೀಕರಿಸಿಬಹುದು :

(ಅ) ಇಂಡೊನೇಷಿಯನ್ ವರ್ಗ : ಈ ವರ್ಗದಲ್ಲಿ ಮಲಯನ್, ಬತಕ, ಅಕಿನೀಸ್, ಅಫೊನ್, ಜಾವಾನೀಸ್, ಸುಂದನೀಸ್, ದಯಕ, ಬುಗನೀಸ್, ತಗಲ, ಫಾರ್ಮೋಸಾನ, ಲದೋರ್ನಿ, ಹೋವಾ ಮುಂತಾದ ಭಾಷೆಗಳಿವೆ. ಇವು ಇಂಡೋನೇಷಿಯಾದಲ್ಲಿ ಬಳಕೆಯಲ್ಲಿವೆ.

(ಆ) ಮಲನೇಶಿಯನ್ ವರ್ಗದಲ್ಲಿ ಫಿಜಿಯನ್, ಕೆಲಿಡೋನಿ ಲ್ವಾಯಿಲ್ಟಿ, ಹೆಬ್ರಿದಿ, ಸಲೋಮಾನಿ ಮೊದಲಾದ ಭಾಷೆಗಳಿವೆ. ಇವು ಫಾರ್ಮೋಸಾದಿಂದ ಹಿಡಿದು ನ್ಯೂಜಿಲೆಂಡಿನ ವರೆಗೆ ವ್ಯಾಪಿಸಿವೆ.

(ಇ) ಪಪುವನ್ ವರ್ಗದಲ್ಲಿ ಮಫೊರ್, ಸೊಆರಸಿ, ಪಪುವನ್ ಮೊದಲಾದ ಭಾಷೆಗಳು ಮುಖ್ಯ. ಟಾಸ್ಮೇನಿಯ, ನ್ಯೂಗಿನಿ, ಆಸ್ಟ್ರೇಲಿಯ, ನ್ಯೂಜಿಲೆಂಡ್, ಈಸ್ಟರ್ ದ್ವೀಪ ಮೊದಲಾದ ಕಡೆಗಳಲ್ಲಿ ಬಳಕೆಯಲ್ಲಿವೆ.

(ಉ) ಆಸ್ಟ್ರೇಲಿಯನ್ ವರ್ಗದಲ್ಲಿ ಮುಕಭಾರಿ, ಕಮಿಲ್‌ರೋಯಿ ಮುಂತಾದುವುಗಳು ಪ್ರಮುಖ. ಆಸ್ಟ್ರೇಲಿಯದ ಮೂಲ ನಿವಾಸಿಗಳ ಈ ಭಾಷೆಗಳೆಲ್ಲವೂ ಈ ವರ್ಗದಲ್ಲಿ ಸೇರುತ್ತವೆ.

(ಊ) ಮೈಕ್ರೋನೇಷಿಯನ್ ವರ್ಗದಲ್ಲಿ ನಉರ, ಯಪ್, ನತಿನುಯಿ, ಮಪಿಯ, ಪೊನ್‌ಪೆ, ನತಿಕ್, ಮಾಕಿಲ್, ಪಿಗಲ್ಟ್, ಪುಲವತ್, ಸತವತ್, ಕುಸಇಯನ್ ಮೊದಲಾದ ಭಾಷೆಗಳಿವೆ. ಇವು ಫಿಲಿಪೈನ್ಸ್ ಹಾಗೂ ಬೋರ್ನಿಯೋ ದ್ವೀಪಗಳ ಪಕ್ಕದಲ್ಲಿರುವ ಸಣ್ಣಪುಟ್ಟ ದ್ವೀಪಗಳಲ್ಲಿ ಬಳಕೆಯಲ್ಲಿವೆ.

(ಪ) ಆಸ್ಟಿಕ್ ವರ್ಗದಲ್ಲಿ ಮಾನ, ಖ್ಮೇರ್, ಸಂತಾಲಿ, ಮುಂಡಾರಿ, ನಿಕೋಬಾರಿ ಮೊದಲಾದ ಭಾಷೆಗಳಿವೆ. ಇವು ಭಾರತದ ಕೆಲವೆಡೆ, ಬರ್ಮ, ಕಂಬೋಡಿಯಾ, ವಿಯೆಟ್ನಾಮ್, ಥಾಯ್ಲೆಂಡ್ ಮೊದಲಾದ ಕಡೆಗಳಲ್ಲಿವೆ.

3. ಸೀನೋಟಿಬೆಟಿಯನ್ ಭಾಷಾಪರಿವಾರ :

ಈ ಭಾಷಾಪರಿವಾರಕ್ಕೆ ಸೇರಿದ ಭಾಷೆಗಳು ಚೀನ, ಬರ್ಮ, ಸಯಾಮ್, ಇಂಡೋಚೀನ, ಲಾವೋಸ್, ಅನ್ನಾಮ್, ಕಾಂಬೋಡಿಯ, ವಿಯೆಟ್ನಾಂ, ಟಿಬೆಟ್, ನೇಪಾಳ, ಭೂತಾನ ಹಾಗೂ ಉತ್ತರ ಭಾರತದ ಬೇರೆ ಬೇರೆ ಭಾಗಗಳಲ್ಲಿ ವ್ಯಾಪಿಸಿವೆ. ಗಾರೋ, ಬೋಡೆ, ನಾಗಾ, ಮಿಕ್ಕಿ, ಅಕ, ಮಿರಿ, ಅಹೋಮ್, ಖಾಮ್ತಿ, ಹಿಮಾಲಯನ್, ಗುರುಂಗ್, ಕಘಾರಿ, ಕರೆನ್, ಬರ್ಮ, ಬಾಲ್ತಿ, ಲಡಾಖಿ, ಲಹುಲಿ, ಲಾವೋ- ಶಾನ, ನೇವಾರಿ, ಮಂಡಾರಿನ್, ಕುಂಟನೀಸ್, ಹುನ್ನಾನೀಸ್, ಹಕ್ಕ, ಫುಕಿನ್, ಫೂಂಚೊ, ವೆನಿ, ಹಸಿಯಾಂಗ್, ಮೀಆವೋ, ಟೋಕಿನ್, ಕೋಚಿನ್, ಚಮ್, ಥಾಯ್ ಶಾನ್, ನುಂಗ್, ಥೋ, ಕಾಮ್, ಸುಯಿ, ಪ್ಯ; ಅಹೋಮ್, ಖಾಮ್ತಿ, ಲೊಲೊ, ಮೋಸೋ, ಗಾರೋ, ಬೋಡೋ, ನಾಗಾ, ಮಿಕ್ಕಿ, ಅಕ, ಮಿರಿ, ಭೋಟಿಯ, ಬಾಲ್ತಿ, ಭೂತಾನಿ, ಬುದ್ಧಿ, ಯುಕ್ಷ, ಖಿಂಬು ಲಡಾಖಿ, ಮಂಬು, ಮೋಂಗ್, ಖಿತಿ, ಬಿಹ್, ಸೆರ್ಪ, ಲಿಂಬು, ಯಾಕ, ವಾಯು, ಪೋಪೋ, ಶಾಕ್ಯದಾರ್, ದುಮಿ, ಕುಲುಂಗ್, ಪೆಂಗ್, ಲಿಶೀ, ಮರು, ಇಂತ, ದಸು, ಯವ್, ಅಸಾಮು, ನೀಘಾ, ಕುಕಿಚಿನ್, ಥಾಡೋ, ಕುಂಕಲ್, ಕ್ಯು, ಹಮರ್, ಕರುಮ್, ಫುರುಮ್, ಚಿನ್ನೆ, ಚಿನ್, ವೆಲೋಂಗ್, ಬ್ಯಾಂಗ್, ಮ್ರೋಂಗ್, ಮುಂತು ಮುಂತಾದವುಗಳು ಇಲ್ಲಿ ಮುಖ್ಯವಾಗಿವೆ.

4. ಅಮೆರಿಕನ್ ಭಾಷಾಪರಿವಾರ :

ಅಮೆರಿಕ, ಮೆಕ್ಸಿಕೋ ಮುಂತಾದ ಕಡೆಗಳಲ್ಲಿಯ ಭಾಷೆಗಳನ್ನು ಅಮೆರಿಕನ್ ಭಾಷೆಗಳೆನ್ನುವರು. ಯುರೋಪು, ಏಷ್ಯಾ, ಆಫ್ರಿಕೆಗಳಿಂದ ವಲಸೆಹೋದ ಭಾಷೆಗಳನ್ನು ಬಿಟ್ಟು ಕ್ರೆಚುವ, ತ್ಸಿಮ್‌ಶಿಯನ್, ಗುಅರಾನಿ, ಚರಿತ್, ಹೋಪಿ, ಶೂಶಾನ್, ಅಲ್ಗೋಂಕ್ವಿಯನ್, ಕರೋಕ್, ಮುಸ್ಕೋಗಿ, ಯುಚೆತನ್, ಚಕ್, ಚಿಕ್ವಿಲ್, ಕಕ್‌ಚಿ, ಮಮ್, ಮಿಕ್ಸ್‌ಟೆಕ್, ಒಂತೋಮಿ, ಕ್ರೆಚೆ, ಪೋಪೋನಕ್, ಯುಚೆತೆಕ್, ಜಪೋಟೆಕ್, ಐಮರ್, ಕ್ರೆಕೆ, ಯುಕಿ, ಪೀನು, ಪೆಪೆಗೊ, ಯುಮನ್, ಜೂನಿ, ಯುಕುಂಬು, ಕಿವಾತೂನನ್, ಫಾಕ್ಸ್, ಮೊದಲಾದ ಸಾವಿರಾರು ಭಾಷೆಗಳು ಉತ್ತರ ಅಮೇರಿಕ, ಮಧ್ಯ ಅಮೇರಿಕಾ, ದಕ್ಷಿಣ ಅಮೇರಿಕಾಗಳಲ್ಲಿ ಚಾಲ್ತಿಯಲ್ಲಿವೆ.

5. ಅಫ್ರಿಕನ್ ಭಾಷಾಪರಿವಾರ :

ಹರನಿ, ತಿಗ್ರೆ, ಹೌಸ, ಗಲ್ಲ, ಸೋಮಾಲಿ, ಸ್ವಹಿಲಿ, ಲುಬ, ಖಾಸ, ಜುಲು, ಕಂಬ, ಗಂದ, ಯರುಬ, ಕನುರಿ, ಕಾಂಗೊ, ಮಂಗೊ, ಪೊನ್, ಮಸ್ಸಿ, ಕ್ರು, ಕ್ರವಿ, ಕ್ಲವು, ಬಸ್ಯ, ದೆ, ಕ್ವಾ, ಗ್ವ, ಕ್ಯಮ್, ಅರಿ, ಅಬೆ, ಮೈ, ಫಂತಿ, ಅಕ್ರು, ಗಾ, ಎವೆ, ಪೊಪೊ, ಹುಲ, ಹೊ, ತುಲ, ವಜ, ಸರಿ, ಪರ್, ಗೆಂಗ್ಲ, ಕರಿ, ಕೆರೆ, ತುನಿಯ ನಿಲಮ, ವೊರ, ಲಿಂದ, ಬಂದ, ವದ, ಬರು, ನ್ದಿ, ಕೆ, ಬಬ, ನೊಂಗೊ, ಸೆರೆ, ಬೈ, ದಂಗೊ, ಇಂದ್ರಿ, ಮನ್ಯುಗ, ಅಮದಿ, ಸ್ಯ, ಲೋಮ, ತೊಮ, ಮ್ವ, ಸ್ವ, ಬಸ, ಬುಸ, ಲೋಬೆ, ಗುರ್ಮ, ಗ್ರುಸಿ, ಮೆಸ್ಸಿ, ಫಲಕ, ಲೋದಿ, ಬೊಬೊ, ವಲ, ದಗರಿ, ಲೆಲೆ, ಕಂಜನ, ಕಸಲೆ, ಮೊಬ, ಪಿಲಿ ಮುಂತಾದವುಗಳು ಅಫ್ರಿಕನ್ ಖಂಡದ ಹಲವಾರು ಕಡೆಗಳಲ್ಲಿ ಹಬ್ಬಿವೆ.

6. ದ್ರಾವಿಡ ಭಾಷಾಪರಿವಾರ :

ದ್ರಾವಿಡ ಭಾಷಾಪರಿವಾರವನ್ನು ದಕ್ಷಿಣ ದ್ರಾವಿಡ, ಮಧ್ಯ ದ್ರಾವಿಡ ಮತ್ತು ಉತ್ತರ ದ್ರಾವಿಡ ಭಾಷೆಗಳೆಂದು ವರ್ಗೀಕರಿಸುತ್ತಾರೆ.

(ಅ) ದಕ್ಷಿಣ ದ್ರಾವಿಡ ಭಾಷೆಗಳಲ್ಲಿ ತಮಿಳು, ಮಲಯಾಳಂ, ಕೋತ, ತೊಡ, ಇರುಳ, ಕುರುಂಬ, ಮುಡುಗ;

ಕನ್ನಡ, ಬಡಗ, ಹವ್ಯಕ, ಕೊಡಗು, ಸೋಲಿಗ, ಕಾಡುಕುರುಬ, ಜೇನುಕುರುಂಬ; ತುಳು;

ಸವಾರ, ಮನ್ನೆ, ಗೊಲ್ಲ, ವಡ್ಡರಿ, ಯುನದಿ, ಚೆಂಚು, ಡೊಂಬ, ಇಂದಿ ಮುಂತಾದವುಗಳು ಮುಖ್ಯ. ಇವು ತಮಿಳುನಾಡು, ಕೇರಳ, ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಹೆಚ್ಚು ವ್ಯಾಪಿಸಿಕೊಂಡಿದ.

(ಆ) ಮಧ್ಯ ದ್ರಾವಿಡ ಭಾಷೆಗಳಲ್ಲಿ ತೆಲುಗು ಕೋಲಾಮಿ, ನಾಯಿಕಿ, ಪರ್ಜಿ, ಗದಬ, ಗೋಂಡಿ, ಕೊಂಡ, ಮಂಡ, ದೊರ್ಲಿ, ಪೆಂಗೊ, ಕೋಯ, ಪೋಯ, ಕುಯಿ, ಕುವಿ ಮೊದಲಾದವುಗಳು ಮುಖ್ಯ. ಇವು ಒರಿಸ್ಸ, ಬಿಹಾರ್, ಪಶ್ಚಿಮ ಬಂಗಾಳ, ಉತ್ತರ ಪ್ರದೇಶ, ಮಧ್ಯಪ್ರದೇಶ, ಮಹಾರಾಷ್ಟ್ರ, ಅಸ್ಸಾಮ್, ಆಂಧ್ರಪ್ರದೇಶ ಮೊದಲಾದ ಕಡೆಗಳಲ್ಲಿ ಹರಡಿವೆ.

(ಇ) **ಉತ್ತರ ದ್ರಾವಿಡ ಭಾಷೆ**ಗಳಲ್ಲಿ ಕುರುಖ್, ಮಾಲ್ತೊ, ಬ್ರಾಹೂಯಿ ಾಷೆಗಳು ಮುಖ್ಯವಾಗಿವೆ. ಇವು ಮಧ್ಯಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಾಕಿಸ್ತಾನ, ಬಲೂಚಿಸ್ತಾನ, ಇರಾನ್ ಮುಂತಾದೆಡೆಗಳಲ್ಲಿ ಈ ಭಾಷೆಗಳು ಹಬ್ಬಿವೆ.

7. ಫಿನ್ನೊಉಗ್ರಿಕ್ ಭಾಷಾಪರಿವಾರ :

ಈ ಪರಿವಾರದ ಫಿನ್ನಿಷ್, ಎಸ್ತೋನಿಯನ್, ಕರೇಲಿಯನ್, ಇಂಗ್ರಿಯನ್, ಂದಿಯನ್, ವೋತಿಯನ್, ವೆಪ್ಸಿಯನ್ ಮುಂತಾದವುಗಳ ಎಸ್ತೋನಿಯ, ನಾರ್ವೆ, ್ವೀಡನ್, ರಷ್ಯ ಮುಂತಾದ ಕಡೆಗಳಲ್ಲಿ ಇದ್ದರೆ, ಲೆಪ್ಪಿಕ, ಉಲೆಪ್ಪ, ರುಜಿಲೆಪ್ಪ, ಓತೆಲೆಪ್ಪ, ತ್ಯಾದಿಗಳು ನಾರ್ವೇ, ಸ್ವೀಡನ್, ರಷ್ಯ, ಫಿನ್ಲೆಂಡ್ ಮುಂತಾದ ಸ್ಥಳಗಳಲ್ಲಿದ್ದರೆ ಾಲ್ಟಾಯಿಕ್ ಭಾಷೆಗಳು ರಷ್ಯದ ಬೇರೆ ಬೇರೆ ಭಾಗಗಳಲ್ಲಿ ಪರ್ಮಿಯನ್ ಭಾಷೆಗಳು ರಿಯ ಮುಂತಾದ ಕಡೆಗಳಲ್ಲಿ, ಉಗ್ರಿಕ್ ಭಾಷೆಗಳು ಸಮೋಯಡಿಕ್ ಭಾಷೆಗಳು, ಂಗೇರಿಯ ಸುತ್ತುಮುತ್ತಲ ಪ್ರದೇಶಗಳಲ್ಲಿ, ಅಲ್ಟಾಯಿಕ್ ಭಾಷೆಗಳು, ರಷ್ಯ, ಬಲ್ಗೇರಿಯ, ್ರಸ್, ಇರಾನ್ ಅಫಘಾನಿಸ್ತಾನ, ತುರ್ಕಿ, ಸೈಬೇರಿಯಾ ಮುಂತಾದ ಕಡೆಗಳಲ್ಲಿ ಳಕೆಯಲ್ಲಿವೆ. ಟರ್ಕಿಯ ಸುತ್ತುಮುತ್ತಲು ತುರ್ಕಿ ಭಾಷೆಗಳು ಪ್ರಚಲಿತವಾಗಿವೆ. ಚೀನ, ಫಘಾನಿಸ್ತಾನ, ಮಂಗೋಲಿಯ ಮುಂತಾದ ಕಡೆಗಳಲ್ಲಿ ಮಂಗೋಲಿಯನ್ ಭಾಷೆಗಳು ೊರಿಯ ಜಪಾನ್ ಮುಂತಾದೆಡೆಗಳಲ್ಲಿ ಮಂಚು ಮತ್ತು ತುಂಗುಸ್ ಭಾಷೆಗಳು ಇವೆ.

8. ಅವರ್ಗೀಯ ಭಾಷಾಪರಿವಾರ :

ಕಾಶ್ಮೀರಿ, ಬುರುಷಾಸ್ಕಿ, ಕರೆಗ, ಏನ್, ಮಾನ್, ಅಂಡಮಾನಿ ಅವರ್ಗೀಯ ಾಷೆಗಳಲ್ಲಿ ಮುಖ್ಯವಾದವರೆ, ಆದಿ, ರಭಿಯ, ಅಪಿರಿ, ಬರ್ಗಂಡಿ, ಗುಜಲಿ, ಮುರಿಯ, ಾಸಲ್, ಬಂಗ್ರೆ, ದೊಂಬರಿ, ಕಷ್ಟೆ, ನಸ್ನ, ರಾತಿಯ, ಸುದಿಯ, ಗೊರಿಲ, ಗೊಲ್ಲ, ಸತಿ, ಲಲಿ, ನಿಂಗ್, ಕೊರವ, ಹೆಂಗ್ನ, ಮಾಷ, ದಲ್ಲು, ದೆಲ್ಪೆ, ಮುಂತಾಗಿ ಸುಮಾರು 600 ಾಷೆಗಳು ಈ ಪರಿವಾರದಲ್ಲಿವೆ. ಅವೆಲ್ಲ ಭಾರತದಲ್ಲಿವೆ.

ಗ್ರಂಥಸೂಚಿ

1 HALL (Jr.), R A. *Introductory Linguistics*, Delhi, 1969

2. HIARTMANN, R.R.K. and STORK, F.C *Dictionary of* Languages and Linguistics, 1976

3. HUNTER, W.W. *A Comparative Dictionary of the Languages of India and High Asia,* New Delhi, 1976

4. MULLER, S. *The World's Living Languages*. 1964

5. PEI. M.A. *World's Chief Languages*, London, 1949

6. SARKAR, A. (Ed.) *Hand Book of Languages and Dialects of India,* Calcutta, 1964

7. THURSTON, E. *Castes and Tribes of Southern India*, 1909

8. ಕುಳ್ಳಿ, ಜೆ.ಎಸ್. ಐತಿಹಾಸಿಕ ಭಾಷಾವಿಜ್ಞಾನ, ಧಾರವಾಡ, 1973

9. ಕೆಂಪೇಗೌಡ, ಕೆ. ಭಾಷೆ ಮತ್ತು ಭಾಷಾವಿಜ್ಞಾನ. ಮೈಸೂರು. 1987

10. ಮಾಡ್ತ, ವಿಲ್ಯಂ. ಕನ್ನಡ ಭಾಷೆಯ ರೂಪರೇಷೆಗಳು. ಧಾರವಾಡ. 1975

ಲಂಕೇಶರ ನಾಟಕಗಳು : ಒಂದು ಪರಿಚಯ

★ ಬಸವರಾಜ ನಾಯ್ಕರ

ಪಿ. ಲಂಕೇಶ (ಜ. ೧೯೩೫) ಕನ್ನಡದ ಸುಪ್ರಸಿದ್ಧ ಲೇಖಕರಾಗಿದ್ದಾರೆ. ಬಹುಮುಖ ವ್ಯಕ್ತಿತ್ವವನ್ನು ಹೊಂದಿದ ಅವರು ಸಾಹಿತ್ಯದ ಅನೇಕ ಪ್ರಕಾರಗಳಲ್ಲಿ ಕೃಷಿಮಾಡಿ ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೃತಿಗಳನ್ನು ನೀಡಿದ್ದಾರೆ. ಸಣ್ಣಕಥೆ, ಕಾದಂಬರಿ, ನಾಟಕ, ವಿಮರ್ಶೆ, ಅನುವಾದ, ಅಂಕಣ ಬರವಣಿಗೆ ಮುಂತಾದ ಕ್ಷೇತ್ರಗಳಲ್ಲಿ ಅವರು ಅವಿರತವಾಗಿ ಬರೆಯುತ್ತಲೇ ಬಂದಿದ್ದಾರೆ. 'ಉಮಾಪತಿಯ ಸ್ಕಾಲರ್‌ಶಿಪ್ ಯಾತ್ರೆ', 'ಕಲ್ಲು ಕರಗುವ ಸಮಯ ಮತ್ತಿತರ ಕಥೆಗಳು' ಮುಂತಾದ ಕಥಾಸಂಕಲನಗಳು; 'ಬಿರುಕು' ಮತ್ತು 'ಮುಸ್ಸಂಜೆಯ ಕಥಾಪ್ರಸಂಗ' ಎಂಬ ಕಾದಂಬರಿಗಳು, 'ಅಂತಿಗೊನೆ' ಮತ್ತು 'ದೊರೆ ಈಡಿಪಸ್' ಎಂಬ ಗ್ರೀಕ್ ನಾಟಕದ ಅನುವಾದಗಳು, 'ಪಾಪದ ಹೂವುಗಳು' ಎಂಬ ಫ್ರೆಂಚ್ ಕವಿತೆಗಳ ಅನುವಾದ ಮತ್ತು 'ಲಂಕೇಶ ಪತ್ರಿಕೆ'ಯಲ್ಲಿ ಅವಿರತವಾಗಿ ಬರೆಯುವ ಅವರ ಅಂಕಣ ಬರಹಗಳು ಲಂಕೇಶರ ಸಾಹಿತ್ಯ ಸಮೃದ್ಧಿಗೆ ಸಾಕ್ಷಿಯಾಗಿವೆ. ಕನ್ನಡದ ಅನೇಕ ನವ್ಯಸಾಹಿತಿಗಳಂತೆ ಲಂಕೇಶರೂ (ಬೆಂಗಳೂರು ವಿಶ್ವವಿದ್ಯಾಲಯದಲ್ಲಿ) ಇಂಗ್ಲಿಷ್ ಅಧ್ಯಾಪಕರಾಗಿದ್ದರು. ಕೊನೆಗೆ ವಿಶ್ವವಿದ್ಯಾಲಯದ ಉಸಿರುಗಟ್ಟುವ ವಾತಾವರಣಕ್ಕೆ ಬೇಸತ್ತು, ಅದಕ್ಕೆ ವಿದಾಯ ಹೇಳಿ ಈಗ ಸುಪ್ರಸಿದ್ಧ ಲಂಕೇಶ ಪತ್ರಿಕೆಯನ್ನು ನಡೆಸುತ್ತಿದ್ದ ಸಂಗತಿ ಎಲ್ಲರಿಗೂ ಚಿರಪರಿಚಿತವಾಗಿದೆ. ಲಂಕೇಶರು ನಮ್ಮ ಗಮನ ಸೆಳೆಯುವುದು ತಮ್ಮ ಬುದ್ಧಿಯ ತೀಕ್ಷ್ಣತೆ, ಕಾವ್ಯಮಯತೆ, ಸ್ವೋಪಜ್ಞತೆ ಮತ್ತು ಸಮಕಾಲೀನ ಪ್ರಜ್ಞೆಯಿಂದಾಗಿ.

ಈ ಲೇಖನದಲ್ಲಿ ಲಂಕೇಶರ ನಾಟಕಗಳನ್ನು ಮಾತ್ರ ಪರಿಚಯಿಸಲಾಗಿದೆ. ಅವರ ನಾಟಕಗಳನ್ನು ಸಾಮಾನ್ಯವಾಗಿ ಪ್ರತಿಭಟನಾ ರಂಗ (Theatre of Revolt)ವೆಂದು ಪರಿಗಣಿಸಬಹುದಾದರೂ ಅವುಗಳನ್ನು ಬಂಡಾಯ ಸಾಹಿತ್ಯವೆಂದು ಸ್ಪಷ್ಟವಾಗಿ ವರ್ಗೀಕರಿಸಲಾಗದು. ಏಕೆಂದರೆ ಅವರ ನಾಟಕಗಳಲ್ಲಿ ಬಂಡಾಯ ಸಾಹಿತ್ಯದ ಒರಟುತನದ ಮತ್ತು ವಾಚ್ಯಾರ್ಥ ಪ್ರಾಧಾನ್ಯಗಳು ಕಂಡು ಬರವೆ. ನವ್ಯಸಾಹಿತ್ಯದ ಸೂಕ್ಷ್ಮತೆ, ದ್ವಂದ್ವಗಳು ಮತ್ತು ಗತ್ತುಗಾರಿಕೆಗಳು ಪ್ರಮುಖವಾಗಿ ಕಾಣಸಿಕೊಳ್ಳುತ್ತವೆ. ಅವರು ಈ ವರೆಗೆ ಬರೆದ ನಾಟಕಗಳ ಸಂಖ್ಯೆ ಎಂಟೇ ಆದರೂ, ಅವುಗಳ ಮೌಲಿಕತೆಯನ್ನು ಪ್ರಶ್ನಿಸುವಂತಿಲ್ಲ. ಅವರ ನಾಟಕಗಳನ್ನು ಇತರ ಭಾರತೀಯ ನಾಟಕಕಾರರಾದ ವಿಜಯ ತೆಂಡೂಲ್ಕರ್ ಮತ್ತು ಮೋಹನ್ ರಾಕೇಶ್ ಅವರ ನಾಟಕಗಳೊಂದಿಗೆ ಹೋಲಿಸಿ ನೋಡಲು ಸಾಧ್ಯವಿದೆ.

'ಗಿಳಿಯು ಪಂಜರದೊಳಿಲ್ಲ' ಎಂಬ ನಾಟಕದಲ್ಲಿ ಮಧ್ಯಮ ವರ್ಗದ ವ್ಯಕ್ತಿಯೊಬ್ಬನ ದ್ವಂದ್ವವನ್ನು ಅಸಂಗತ ತಂತ್ರದ ಮೂಲಕ ನಿರೂಪಿಸಲಾಗಿದೆ. ಈ

ನಾಟಕದಲ್ಲಿ ಗಂಡ, ಹೆಂಡತಿ, ಗಾಯತ್ರಿ ಮತ್ತು ಮುನಿಸ್ವಾಮಿ ಎಂಬ ನಾಲ್ಕೇ ನಾಲ್ಕು ಪಾತ್ರಗಳಿದ್ದು, ಇಡೀ ಸನ್ನಿವೇಶ ಬೆಂಗಳೂರಿನಲ್ಲಿ ನಡೆಯುತ್ತದೆ. ಗಂಡ ರೇಲ್ವೆಸ್ಟೇಶನ್ನಿಗೆ ಹೋದಾಗ ಕ್ಷೌರಿಕನಾದ ಮುನಿಸ್ವಾಮಿಯು ಆತನನ್ನು ಕಳೆದ ನಾಲ್ಕು ವರ್ಷಗಳಲ್ಲಿ ಮೊದಲಬಾರಿ ಮಾತನಾಡಿಸಿ ಆತನಿಗೆ ತಂದೆ ತಾಯಿ ಹಾಗೂ ಮಕ್ಕಳುಮರಿಗಳು ಇದ್ದಾರೆಯೆ ಎಂದು ಕೇಳುತ್ತಾನೆ. ಅದಕ್ಕೆ ಗಂಡ ಹೌದೆಂದು ಉತ್ತರಿಸಿ ಮನೆಗೆ ಮರಳುತ್ತಾನೆ. ಅನಂತರ ಕ್ಷೌರಿಕನು ಆತನ ಮನೆಗೆ ಬಂದು ತನ್ನ ತಂದೆಯ ಅಂತ್ಯ ಸಂಸ್ಕಾರಕ್ಕೆಂದು ಮೂವತ್ತು ರೂಪಾಯಿಗಳನ್ನು ಕೇಳುತ್ತಾನೆ. ಆಗ ಗಂಡ ಆತನಿಗೆ ಎರಡು ಗಂಟೆಗಳ ನಂತರ ಬಂದು ಇಪ್ಪತ್ತು ರೂಪಾಯಿಗಳನ್ನು ತೆಗೆದುಕೊಂಡು ಹೋಗಲು ಹೇಳುತ್ತಾನೆ. ಆ ಪ್ರಕಾರ ಕ್ಷೌರಿಕನು ಎರಡು ಗಂಟೆಗಳ ನಂತರ ಬರುತ್ತಾನೆ. ಅಷ್ಟರಲ್ಲಿ ಗಂಡನು ತನ್ನ ನಿರ್ಧಾರವನ್ನು ಬದಲಿಸಿರುತ್ತಾನೆ. ಆತ ಕ್ಷೌರಿಕನಿಗೆ ಹಣದ ಸಲುವಾಗಿ ಬೇರೆಯವರನ್ನು ಅವಲಂಬಿಸಬಾರದೆಂದು ಚೆನ್ನಾಗಿ ಬಯ್ದು, ಇನ್ನೊಂದು ಗಂಟೆಯ ನಂತರ ಬಂದು ಇಪ್ಪತ್ತು ರೂಪಾಯಿಗಳನ್ನು ಇಸಿದುಕೊಂಡು ಹೋಗಲು ಹೇಳುತ್ತಾನೆ. ಆ ಪ್ರಕಾರ ಕ್ಷೌರಿಕನು ಮೂರನೆಯ ಬಾರಿ ಆತನ ಮನೆಗೆ ಬಂದಾಗ ಆತ ತನ್ನ ಹೆಂಡತಿಗೆ ತಾನು ಮನೆಯಲ್ಲಿಲ್ಲವೆಂದು ಹೇಳುವಂತೆ ಆಜ್ಞಾಪಿಸುತ್ತಾನೆ. ಹೀಗೆ ಈ ನಾಟಕದ ಕಥಾನಾಯಕ ತನ್ನ ನಿರ್ಧಾರವನ್ನು ಬದಲಿಸುತ್ತ ಹೋಗುವುದು ಅಸಂಗತವಾಗಿ ಕಾಣಿಸುತ್ತದೆ. ಕ್ಷೌರಿಕನ ದಾರುಣ ಬಡತನದ ಚಿತ್ರವನ್ನು ಕೊಡುವುದರ ಜೊತೆಗೆ ಮಧ್ಯಮ ವರ್ಗದ ವ್ಯಕ್ತಿಯ ದ್ವಂದ್ವವು ರಾಜಿಯಲ್ಲಿ ಪರ್ಯವಸಾನಗೊಳ್ಳುವುದನ್ನು ತೋರಿಸಲಾಗಿದೆ. ಬಡವನಿಗೆ ಸಹಾಯಮಾಡಬೇಕೆಂಬ ಮನಸ್ಸಿದ್ದರೂ, ಹಣಕಾಸಿನ ತೊಂದರೆಯಿಂದಾಗಿ ಆತ ಹಂತಹಂತವಾಗಿ ನಿಸ್ಸಹಾಯಕನಾಗಿ ಕೊನೆಗೆ ನಿರ್ದಯನಾಗುವುದರ ಚಿತ್ರ ಈ ನಾಟಕದಲ್ಲಿದೆ.

'ಸಿದ್ಧತೆ' ನಾಟಕದಲ್ಲಿ ಕಲಾವಿದನೊಬ್ಬನ ನಿರಾಶೆಯ ಜೀವನವನ್ನು ಚಿತ್ರಿಸಲಾಗಿದೆ. ಕಥಾನಾಯಕನಾದ ರಂಗಣ್ಣನು ಅರವತ್ತು ವರ್ಷಗಳ ವೃದ್ಧನಾಗಿದ್ದು ತನ್ನ ಮಗ ರಾಮುವಿನ ಹುಟ್ಟುಹಬ್ಬವನ್ನು ಆಚರಿಸುತ್ತಲಿದ್ದು ಮಗಳಾದ ಜಯಾಳ ಬರುವಿಗಾಗಿ ಕಾಯುತ್ತಿದ್ದಾನೆ. ಆತನ ಪತ್ನಿ ಲಲಿತಳು ಆತನ ಹರೆಯದ ದಿನಗಳ ಪ್ರೇಮಪ್ರಸಂಗಗಳನ್ನು ನೆನಪಿಸಿ ಆತನನ್ನು ಪೀಡಿಸುತ್ತಿದ್ದಾಳೆ. ಆದರೆ ರಂಗಣ್ಣನ ಜೀವನವು ಸುಖಮಯವಾಗಿಲ್ಲ. ಪ್ರಸಿದ್ಧ ನಾಟ್ಯ ಕಲಾವಿದನಾಗಬೇಕೆಂಬ ಆತನ ಕನಸು ನನಸಾಗಲೇ ಇಲ್ಲ. ಹೀಗಾಗಿ ಆತನ ಜೀವನ ನಿರಾಶೆಯಿಂದ ತುಂಬಿದೆ. ಆತನ ಕನಸುಗಳನ್ನು ನನಸಾಗಿಸುವುದಕ್ಕೆ ಅಡ್ಡಿಯಾದವರು ಆತನ [illegible] [illegible] ಧನಿಕರ [illegible] [illegible] ಈ ಕೃತಿ. ಆತನ [illegible] ಆತನ ಕಲಾತ್ಮಕ ಸಾಧನೆಗೆ [illegible] ಜೀವನವನ್ನು

ದೆಸಿದ ರಂಗಣ್ಣ ಕೊನೆಗೆ ಅನಿರೀಕ್ಷಿತವಾಗಿ ಮರಣ ಹೊಂದುತ್ತಾನೆ. ಆತನ ಬದು ಜೀವನ ಮರಣಕ್ಕಾಗಿ ಮಾಡಿದ ವಿಪತ್ತೆಯೆನ್ನಬಹುದು. ಈ ನಾಟಕದಲ್ಲಿ ಆಧುನಿಕ ನಾಟಕದಲ್ಲಿ, ಅದರಂತೆ ಭಾರತದಲ್ಲಿ, ಕಲಾಕಾರನ ಜೀವನದಲ್ಲಿ ಎಷ್ಟೊಂದು ಅಡ್ಡಿ ಆತಂಕಗಳು ಬರುತ್ತವೆಂಬುದನ್ನು ಸೂಚ್ಯವಾಗಿ ಚಿತ್ರಿಸಲಾಗಿದೆ. ಒಂದುಕಡೆ ಬಂಗಾಲದ ಸುಪ್ರಸಿದ್ಧ ಲೇಖಕರಾದ ನಿರಧ್ ಚೌಧುರಿಯವರು ಹೇಳಿದಂತೆ, ಭಾರತದಲ್ಲಿ ಗಂಡ ಧನಸಂಪಾದಿಸುವುದನ್ನು ಬಿಟ್ಟು ಮತ್ತಾವ ಕಾರ್ಯವನ್ನು ಮಾಡುವದೂ ವೈವಾಹಿಕ ವ್ರತಕ್ಕೆ ವಿರುದ್ಧವೆಂದು ಆತನ ಪತ್ನಿ ಪರಿಗಣಿಸುತ್ತಾಳೆ. ಈ ನಾಟಕ ಇಂಥ ನಿರ್ಲಜ್ಜ ಲೌಕಿಕವಾದವನ್ನೇ ವಿಡಂಬಿಸಿ ತೋರಿಸುತ್ತದೆ. ಈ ನಾಟಕದಲ್ಲಿ ಟಿ.ಎಸ್.ಎಲಿಯಟ್‌ನ 'ದಿ ಫ್ಯಾಮಿಲಿ ರೀಯೂನಿಯನ್' ನಾಟಕದ ನಿರಾಶೆ ಮತ್ತು ಹುಟ್ಟು ಹಬ್ಬದ ದಿನವೇ ಸಂಭವಿಸುವ ಸಾವು-ಇಂಥ ಕಥಾವಸ್ತುವಿನ ಪ್ರತಿಧ್ವನಿ ಕಂಡುಬರುತ್ತದೆ.

ಜೀವನದಲ್ಲಾದ ನಿರಾಶೆಯಿಂದ ಉದ್ಭವಿಸುವ ಪೀಡೆಯ ಹುಚ್ಚು (Persucution-mania) 'ಪೋಲಿಸರಿದ್ದಾರೆ ಎಚ್ಚರಿಕೆ' ಎಂಬ ನಾಟಕದಲ್ಲಿ ಚಿತ್ರಿತವಾಗಿದೆ. ಈ ನಾಟಕ ಕನ್ನಡದ ಹಿರಿಯ ನಾಟಕಕಾರರಾದ ಸಂಸರ ಜೀವನದ ಮೇಲೆ ಆಧಾರಿತವಾಗಿದೆ. ಮೇಲುನೋಟಕ್ಕೆ ಅಸಂಗತ ವೈನೋದಿಕವೆಂದು ಕಾಣುವ ಈ ನಾಟಕ ಆಳದಲ್ಲಿ ಮನೋವೈಜ್ಞಾನಿಕ ದುರಂತವಾಗಿದೆ. ಈ ನಾಟಕದ ಕಥಾನಾಯಕನಾದ ರುದ್ರಮೂರ್ತಿಯು ನಾಟಕಕಾರನಾಗಿದ್ದು ಆತನ ಹಸ್ತಪ್ರತಿಯನ್ನು ಪ್ರಕಾಶಕರು ತಿರಸ್ಕರಿಸಿದ್ದರಿಂದ ಆತ ನಿರಾಶೆಗೊಂಡಿದ್ದಾನೆ. ರಂಗಣ್ಣನು ರುದ್ರಮೂರ್ತಿಯ ಅಣ್ಣನಾದ ಚಂದ್ರಶೇಖರನನ್ನು ಕರೆತಂದಾಗ, ರುದ್ರಮೂರ್ತಿಯ ಹಸ್ತಪ್ರತಿಯನ್ನು ಪ್ರಕಟಗೊಳಿಸುವುದಾಗಿ ವಚನವಿತ್ತು ಆತನನ್ನು ಸುಪ್ರೀತಗೊಳಿಸಲು ಪ್ರಯತ್ನಿಸುತ್ತಾನೆ. ಆದರೆ ರುದ್ರಮೂರ್ತಿಯು ತನ್ನ ಅಣ್ಣನನ್ನು ಗುರುತಿಸದಿರುವದು ಅಸಂಗತ ಹಾಸ್ಯಕ್ಕೆಡೆಮಾಡಿಕೊಡುತ್ತದೆ. ರಂಗಣ್ಣನು ಪ್ರಕಟಪಡಿಸುವ ನಾಟಕಕ್ಕಾಗಿ ಹತ್ತು ರೂಪಾಯಿಗಳ ಸಂಭಾವನೆ ಕೊಡಲಿಕ್ಕೆ ಹೋದರೂ ರುದ್ರಮೂರ್ತಿಯು ಅದನ್ನು ತಿರಸ್ಕರಿಸುತ್ತಾನೆ. ಆದರೂ ರಂಗಣ್ಣನ ಬಲವಂತದಿಂದಾಗಿ ಅದನ್ನು ಸ್ವೀಕರಿಸಿದ ಮೇಲೆ ಅವನಿಂದಲೇ ಅದಕ್ಕೊಂದು ರಶೀದಿಯನ್ನು ಪಡೆಯಲಿಚ್ಛಿಸುವದು ಹಾಸ್ಯಾಸ್ಪದವಾಗಿದೆ. ಆತ ಯಾವಾಗಲೂ ತನ್ನನ್ನು ಪೋಲೀಸರು ಬೆನ್ನತ್ತಿದ್ದಾರೆಂಬ ಭ್ರಮೆಯಲ್ಲಿರುತ್ತಾನೆ. ಏಕೆಂದರೆ ಆತನಿಗೆ 'ನೌಕರಿಯಿಲ್ಲ, ಹಣವಿಲ್ಲ, ಮತ್ತು ಸಂಬಂಧಿಕರಿಲ್ಲ'ವಂತೆ. ಇದಕ್ಕೆಲ್ಲ ಕಾರಣ ಆತನಿಗೆ ಆರ್ಥಿಕ ಮತ್ತು ಭಾವನಾತ್ಮಕ ಸುಭದ್ರತೆಯಿಲ್ಲದಿರುವುದೇ ಆಗಿರಬಹುದು. ಈ ಅಭದ್ರತೆಯಿಂದ ಆತನ ಮಾನಸಿಕ ವ್ಯಾಧಿ ಉಲ್ಬಣಿಸಿದಂತೆ ತೋರುತ್ತದೆ. ಆತನ ಅಣ್ಣ ಚಂದ್ರಶೇಖರ ಆತನಿಗೆ ಸಮಾಧಾನಪಡಿಸಲು ಪ್ರಯತ್ನಿಸಿದಾಗ ಆತ ತನ್ನನ್ನು ಪೀಡಿಸುತ್ತಿದ್ದಾನೆಂಬ ವರ್ತಿಸುತ್ತಾನೆ. ರಂಗಣ್ಣ ಮತ್ತು ಚಂದ್ರಶೇಖರ ಇಬ್ಬರೂ ರುದ್ರಮೂರ್ತಿಗೆ ಮೊದಲು ಮದುವೆಯಾಗಿ ಅನಂತರ ತನ್ನ ಸ್ವಾಭಿಮಾನಕ್ಕೆ ಹೊಂದುವಂಥ ನಾಟಕಗಳನ್ನು ರಚಿಸಲು ಸೂಚಿಸುತ್ತಾರೆ.

ಆದರೆ ರುದ್ರಮೂರ್ತಿಯು ಸಮಾಜಕ್ಕೆ ಒಪ್ಪಿಗೆಯಾಗುವ ಅಥವಾ ಸ್ನೇಹಿತರು ಮತ್ತು ಸರಕಾರವನ್ನು ಸುಪ್ರೀತಗೊಳಿಸುವ ಸಾಹಿತ್ಯವನ್ನು ರಚಿಸಲು ನಿರಾಕರಿಸುತ್ತಾನೆ. ಆತ ಆತ್ಮಹತ್ಯೆಗೆ ಮಾಡಿದ ಪ್ರಯತ್ನ ಒಂದು ಅಪರಾಧವಾಗಿದ್ದು ಅದಕ್ಕೆ ಪೋಲೀಸಿನವರಿಂದ ದೃಢೀಕರಣ ಪತ್ರವೊಂದನ್ನು ತರುತ್ತೇವೆಂದು ಅವರು ಹೇಳಿದಾಗ ರುದ್ರಮೂರ್ತಿಯು ಆ ಅಪರಾಧವನ್ನೊಪ್ಪಿಕೊಳ್ಳುವುದಿಲ್ಲ. ಮರುದಿನ ರಂಗಣ್ಣನು ರುದ್ರಮೂರ್ತಿಯ ಸಮಸ್ಯೆಯನ್ನು ಅರಿತುಕೊಳ್ಳಲು ಪ್ರಯತ್ನಿಸುತ್ತಾನೆ. ಆಗ ರುದ್ರಮೂರ್ತಿಯು ತಾನೊಬ್ಬ ಹೇಡಿಯಾಗಿದ್ದು ತನ್ನ ಜೀವನವನ್ನೆಲ್ಲ ಪೂಜಾಕೋಣೆಯಲ್ಲಿ ಅಥವಾ ಯುದ್ಧಭೂಮಿಯಲ್ಲಿ ಯಾಂತ್ರಿಕವಾಗಿ ಕಳೆದಿದ್ದೇನೆಂದು ಒಪ್ಪಿಕೊಳ್ಳುತ್ತಾನೆ. ಅದಕ್ಕಾಗಿಯೆ ಜನರು ತನ್ನನ್ನು ಹೇಡಿಯೆಂದು ಕರೆಯುತ್ತಾರೆಂದೂ ಹೇಳುತ್ತಾನೆ. ಅವರಿಬ್ಬರೂ ರುದ್ರಮೂರ್ತಿಗೆ ಸಾಯುವ ಪ್ರಯತ್ನವನ್ನು ಬಿಟ್ಟು, ಚೆನ್ನಾಗಿ ಬಾಳಿ, ಒಳ್ಳೆಯ ಸಾಹಿತ್ಯ ರಚಿಸಲು ಉಪದೇಶಿಸುತ್ತಾರೆ. ಆತನ ತಲೆ ಕೆಟ್ಟಿದೆಯೆಂದು ಆಪಾದಿಸುತ್ತಾರೆ. ಆದರೆ ಕೊನೆಗೆ ರುದ್ರಮೂರ್ತಿ ಸಾಯುತ್ತಾನೆ. ಏಕೆಂದರೆ ಆತ ಕಾಯಿದೆ, ಕಾನೂನು, ಸರಕಾರ, ಹಿರಿಯರು ಮತ್ತು ಮದುವೆ ಮುಂತಾದ ಕಟ್ಟುನಿಟ್ಟುಗಳನ್ನು ಧಿಕ್ಕರಿಸುತ್ತಾನೆ.

ಈ ನಾಟಕದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವ ಕನಸುಗಾರನೊಬ್ಬನ ನಿರಾಶೆ ಮತ್ತು ಭ್ರಮನಿರಸನಗಳನ್ನು ಲಂಕೇಶರು ಅಸಂಗತ ತಂತ್ರದ ಮೂಲಕ ಎಳೆಎಳೆಯಾಗಿ ಬಿಡಿಸಿ ತೋರಿಸಿದ್ದಾರೆ. ಇದನ್ನೊಂದು ಸುಂದರ ಮನೋವೈಜ್ಞಾನಿಕ ಅಸಂಗತ ನಾಟಕವೆಂದು ಕರೆಯಬಹುದು.

ಆಧುನಿಕ ಸಮಾಜದಲ್ಲಿ ಕಂಡುಬರುವ ವೈವಾಹಿಕ ಜೀವನದ ಏರುಪೇರುಗಳನ್ನು ಮತ್ತು ಅವ್ಯವಸ್ಥೆಯನ್ನು 'ಟಿ. ಪ್ರಸನ್ನನ ಗೃಹಸ್ಥಾಶ್ರಮ' ವೆಂಬ ನಾಟಕದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಎರಡು ಕುಟುಂಬಗಳ ಸದಸ್ಯರ ಮಧ್ಯದಲ್ಲಿ ರಹಸ್ಯವಾಗಿ ಏರ್ಪಟ್ಟಿರುವಂತಹ ಪರಿಹಾಸಾತ್ಮಕ ಸಂಬಂಧಗಳನ್ನು ಬಹಿರಂಗಪಡಿಸಲಾಗಿದೆ. ಲಂಕೇಶರ ಅನೇಕ ಕಥೆಗಳಲ್ಲಿ ಕಂಡುಬರುವ 'ಬೇಸರ' ದ ಸ್ಥಾಯಿಭಾವಯೇ ಇಲ್ಲಿಯೂ ಕಂಡು ಬರುತ್ತದೆ. ಟಿ. ಪ್ರಸನ್ನನಿಗೆ ತನ್ನ ಪತ್ನಿ ಲಕ್ಷ್ಮಿ ತನ್ನೊಂದಿಗೆ ಜೀವಿಸುವುದಕ್ಕೆ ಬೇಸರ ಪಟ್ಟುಕೊಂಡು ಅನೇಕ ಪ್ರಿಯತಮರಿಗೆ ರಹಸ್ಯವಾಗಿ ಪ್ರೇಮಪತ್ರಗಳನ್ನು ಬರೆಯುತ್ತಿದ್ದಾಳೆ. ಹಾಗೆಯೆ ಅನೇಕ ಪ್ರಿಯತಮರಿಂದ ಪ್ರೇಮಪತ್ರಗಳನ್ನು ಸ್ವೀಕರಿಸುತ್ತಿದ್ದಾಳೆಂಬುದೂ ತಿಳಿಯುತ್ತದೆ. ಅವಳು ಡಾಕ್ಟರ್ ಶಿವಶಂಕರನ ಬಗೆಗೆ ವಿಶೇಷವಾದ ಪ್ರೀತಿಯನ್ನು ಹೊಂದಿದ್ದಾಳೆಂಬುದು ಆತನ ಗಮನಕ್ಕೆ ಬರುತ್ತದೆ. ಅದಕ್ಕಾಗಿ ಆತ ಜಾಣಾಕ್ಷತನದಿಂದ ಲಕ್ಷ್ಮಿ ಮತ್ತು ಡಾಕ್ಟರ

ಶಿವಶಂಕರ್ ಅವರಿಬ್ಬರೂ ಕೂಡಿ ಮನೆಯಲ್ಲಿ ಚಕ್ಕಂದವಾಡುವಾಗ ಅದು ಶಿವಶಂಕರನ ಪತ್ನಿ ಸುಲೋಚನಳಿಗೆ ತಿಳಿಯುವಂತೆ ವ್ಯವಸ್ಥೆ ಮಾಡುತ್ತಾನೆ. ಪ್ರಸನ್ನನು ತನ್ನ ಹೃದಯವನ್ನು ಅರ್ಥಮಾಡಿಕೊಳ್ಳಲಾರ ಮತ್ತು ತನ್ನನ್ನು ನಿಜವಾಗಿ ಪ್ರೀತಿಸಲಾರನೆಂಬ ಕಾರಣಕ್ಕಾಗಿ ಲಕ್ಷ್ಮಿಯು ಆತನನ್ನು ದ್ವೇಷಿಸುತ್ತಾಳೆ. ಆದರೆ ಪ್ರಸನ್ನನು ವಿಶಾಲ ಮುಕ್ತಹೃದಯಿಯಾಗಿದ್ದಾನೆಂದರೆ ಆತನಿಗೆ ತನ್ನ ಪತ್ನಿಯ ರಹಸ್ಯ ಅಥವಾ ಬಹಿರಂಗ ಪ್ರೇಮಪ್ರಕರಣಗಳು ಗೊತ್ತಿದ್ದರೂ ಅವಕ್ಕೆ ಯಾವ ಆಕ್ಷೇಪವೆತ್ತುವದಿಲ್ಲ. ಲಕ್ಷ್ಮಿಗೆ ತನ್ನ ಪತಿಯೊಡನೆ ಬಾಳುವೆ ಮಾಡಲು ವಿಪರೀತ ಬೇಸರವಾಗಿರುವುದರಿಂದ ಅವಳು ಆತನನ್ನು ಬಹಿರಂಗವಾಗಿ ಧಿಕ್ಕರಿಸುತ್ತಾಳೆ. ಈ ನಾಟಕದ ಮೂಲಕ ಲಂಕೇಶರು ಕರ್ನಾಟಕದ ಮಧ್ಯಮವರ್ಗದ ಜನರ ಜೀವನದ ಸಮಸ್ಯೆಗಳನ್ನು ತೋರಿಸಿದ್ದಾರೆ. ಮಧ್ಯಮವರ್ಗದ ಪತಿಪತ್ನಿಯರು ಅತ್ತ ಅನ್ಯೋನ್ಯವಾಗಿದ್ದು ಸುಮಧುರ ದಾಂಪತ್ಯವನ್ನು ಸಾಗಿಸಲೂ ಆಗದೆ, ಇತ್ತ ಧೈರ್ಯದಿಂದ ವಿವಾಹ ವಿಚ್ಛೇದನವನ್ನು ಪಡೆದು ಬೇರ್ಪಡಲೂ ಆಗದೆ, ರಹಸ್ಯವಾಗಿ ತಮ್ಮ ಸುಖಸಂತೋಷಗಳ ಹಾದಿ ಕಂಡುಕೊಳ್ಳಲು ಇಲ್ಲದೆ ನಾಯಿಪಾಡಿನಂತೆ ಜೀವನ ಸಾಗಿಸುವಂಥ ಅತೃಪ್ತದಾಂಪತ್ಯ ಸಮಸ್ಯೆಯನ್ನು ಲಂಕೇಶರು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ.

'ತೆರೆಗಳು' ನಾಟಕದಲ್ಲಿ ಅಪರಾಧ ಮತ್ತು ಶಿಕ್ಷೆಯ ನೈತಿಕ ವಿಧಾನವನ್ನು ಅಸಂಗತ ತಂತ್ರದ ಮೂಲಕ ಚಿತ್ರಿಸಲಾಗಿದೆ. ಇದರಲ್ಲಿ ವ್ಯಕ್ತಿ, ಕಂಬಿ, ಕಟ್ಟು ಮತ್ತು ಮಿಟ್ಟು ಎಂಬ ಕಿಟ್ಟು ನಾಲ್ಕು ಪಾತ್ರಗಳಿವೆ. ವ್ಯಕ್ತಿಯು ಒಂದು ಮನೆಯಲ್ಲಿ ವಾಸವಾಗಿದ್ದಾನೆ. ಆದರೆ ಆ ಮನೆ ನ್ಯಾಯವಾಗಿ ಆತನದಾಗಿರದೆ ಮತ್ತೊಬ್ಬನಿಗೆ ಸೇರಿದ್ದು. ಮೊದಲು ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದ ಈತ ಅದನ್ನು ಬಿಟ್ಟುಕೊಟ್ಟು ರಾಜಕೀಯದಲ್ಲಿ ಧುಮುಕಿದ್ದಾನೆ. ಇದಕ್ಕೆಲ್ಲ ಕಾರಣ ಈತನ ಮಹತ್ವಾಕಾಂಕ್ಷೆ ಮತ್ತು ದುರಾಸೆ. ಈತ ತನ್ನ ಮನೆಯ ಮಾಲಿಕನನ್ನು ಕೊಲೆಮಾಡಿ ಆತನ ಮನೆಯನ್ನು ತಾನು ಆಕ್ರಮಿಸಿಕೊಂಡಿದ್ದಾನೆ. ಅಲ್ಲದೆ ಸಾಕಷ್ಟು ಸಂಪತ್ತನ್ನು ಸಂಪಾದಿಸಿದ್ದಾನೆ. ಒಂದು ದಿನ ಕಂಬಿ, ಕಟ್ಟು ಮತ್ತು ಮಿಟ್ಟು ಎಂಬ ಮೂವರು ಈತನ ಮನೆಗೆ ಬಂದು ಮನೆಯೊಡೆಯ ಎಲ್ಲಿದ್ದಾನೆಂದು ಕೇಳುತ್ತಾರೆ. ಕೊನೆಗೆ ಮನೆಯೊಡೆಯನನ್ನು ಕೊಂದ ಅಪರಾಧಕ್ಕಾಗಿ ಆತನನ್ನು ಗಲ್ಲಿಗೇರಿಸುತ್ತಾರೆ. ಈ ನಾಟಕವು ಮೂಲತಃ ಒಂದು ರಾಜಕೀಯ ವಿಡಂಬನೆಯಾಗಿದ್ದು, ಇದರಲ್ಲಿ ಉಪಯೋಗಿಸಿದ ತಂತ್ರ ಮತ್ತು ಭಾಷೆ ಅಸಂಗತವಾಗಿದೆ. ಮನೆಯೊಡೆಯನಿಲ್ಲದ ಮನೆ ಬಸವಣ್ಣನವರ ವಚನದಿಂದ ಪಡೆದ ಪ್ರತಿಮೆಯಾಗಿದ್ದು ಅದು ಈ ನಾಟಕದಲ್ಲಿ ಸಾಂಕೇತಿಕ

ಆಯಾಮವನ್ನು ಪಡೆಯುತ್ತದೆ. ಅಪರಾಧ ಮಾಡಿದವನಿಗೆ ಕೊನೆಗೆ ಶಿಕ್ಷೆಯಾಗುವುದರಿಂದ ಓದುಗನಿಗೆ ಒಂದು ತರಹದ ನೈತಿಕ ಸಮಾಧಾನವಾಗುತ್ತದೆ.

ಸಮಾಜದಲ್ಲಿ ತಾಂಡವವಾಡುವ ಭ್ರಷ್ಟತನದ ವಿರುದ್ಧ ಸಿಡಿದೆದ್ದರೂ ಅದನ್ನು ಸಂಪೂರ್ಣವಾಗಿ ಎದುರಿಸಲಾಗದಂಥ ಅಸಹಾಯಕತೆಯನ್ನು 'ನನ್ನ ತಂಗಿಗೊಂದು ಗಂಡುಕೊಡಿ' ಎಂಬ ನಾಟಕದಲ್ಲಿ ಚಿತ್ರಿಸಲಾಗಿದೆ. ಇಲ್ಲಿ ಮದುವೆ ಸಾಮಾಜಿಕ ಬಂಡಾಯಕ್ಕೆ ಒಂದು ನೆಪವಾಗಿ ಬಂದಿದೆ. ಮಂತ್ರಿಯ ಮಕ್ಕಳಾದ ಜಗನ್ನಾಥ ಮತ್ತು ಕಮಲೆ ತಮ್ಮ ತಾಯಿ ಸರಸ್ವತಮ್ಮನೊಂದಿಗೆ ಬೆಂಗಳೂರಿನಲ್ಲಿರುವದು ಬಿಟ್ಟು ಶಿವಮೊಗ್ಗೆಯಲ್ಲಿಯೆ ವಾಸಿಸುತ್ತಾರೆ. ಇದಕ್ಕೆ ಮುಖ್ಯ ಕಾರಣ ತಮ್ಮ ಮನೆಯೊಂದಿಗಿದ್ದ ಆಳವಾದ ಸಂಬಂಧ. ಮಂತ್ರಿಯು ಬೆಂಗಳೂರಿನಲ್ಲಿರುವುದರಿಂದ ಮಂತ್ರಿಯ ಅತ್ಯಂತ ನಂಬಿಗಸ್ತ ಸ್ನೇಹಿತನಾದ ರಾಮಣ್ಣ ಅವರ ಶಿವಮೊಗ್ಗೆಯ ಮನೆಯಲ್ಲಿ ಅತ್ಯಂತ ಸಲಿಗೆಯಿಂದ ಓಡಾಡುತ್ತಿರುತ್ತಾನೆ. ಸರಸ್ವತಮ್ಮನೊಂದಿಗೂ ಆತನಿಗೆ ವಿಶೇಷ ಸ್ನೇಹವಿದೆ. ಮಂತ್ರಿಯ ಮಗಳು ಕಮಲಳಿಗೆ ರಾಮಣ್ಣ ಒಳ್ಳೆಯ ವರಗಳನ್ನು ಹುಡುಕಿ ತರುವ ಪ್ರಯತ್ನದಲ್ಲಿರುತ್ತಾನೆ. ಏಕೆಂದರೆ ಆತನ ಅಭಿಪ್ರಾಯದಲ್ಲಿ ತನ್ನ ತಂಗಿಯನ್ನು ಮದುವೆಯಾಗಲು ಮುಂದೆ ಬರುವ ಗಂಡುಗಳೆಲ್ಲ ಮಂತ್ರಿಯಾದ ತನ್ನ ತಂದೆಯ ಅಧಿಕಾರ, ಸಂಪತ್ತು ಮತ್ತು ವರ್ಚಸ್ಸುಗಳಿಗೆ ಮರುಳಾಗಿರುತ್ತಾರೆಯೆ ಹೊರತು ತನ್ನ ತಂಗಿಯ ಮೇಲಿನ ನಿಜವಾದ ಪ್ರೀತಿಯಿಂದಲ್ಲ. ಆದ್ದರಿಂದ ಆತ ತನ್ನ ತಂಗಿಯನ್ನು ತನ್ನ ತಂದೆಯಿಂದಲೇ ನೌಕರಿಯಿಂದ ತೆಗೆದು ಹಾಕಲ್ಪಟ್ಟ ರಂಗಣ್ಣನೆಂಬ ಬಡಯುವಕನಿಗೆ ಕೊಟ್ಟು ಮದುವೆ ಮಾಡಬೇಕೆಂದು ನಿರ್ಧರಿಸುತ್ತಾನೆ. ತಂದೆ ಬೆಂಗಳೂರಿನಿಂದ ಬಂದು ಈ ಮದುವೆಯ ಮಾತುಕತೆ ಮುಗಿಸಬೇಕೆಂದು ಅವರೆಲ್ಲ ಕಾಯುತ್ತಿದ್ದಾರೆ. ಆದರೆ ಅನಿರೀಕ್ಷಿತವಾಗಿ ಮಂತ್ರಿಯ ಸಾವಿನ ಸುದ್ದಿ ಬಂದು ಅವರನ್ನೆಲ್ಲ ತಲ್ಲಣಗೊಳಿಸುತ್ತದೆ. ಅಲ್ಲದೆ ಜಗನ್ನಾಥನಿಗೆ ತಾನಿರುವ ಮನೆಯನ್ನು ರಂಗಣ್ಣನು ಕೊಂಡುಕೊಂಡಿರುವುದರಿಂದ ಅದನ್ನು ರಾತ್ರೋರಾತ್ರಿ ಖಾಲಿಮಾಡಬೇಕಾದ ತುರ್ತು ಪ್ರಸಂಗ ಬರುತ್ತದೆ. ಹೀಗಾಗಿ ಭ್ರಷ್ಟಾಚಾರದ ವಿರುದ್ಧ ಹೋರಾಡಲೆಳಸುವ ಆದರ್ಶವಾಗಿ ಜಗನ್ನಾಥ ದೈವದ ವಿಚಿತ್ರ ಆಟದಿಂದ ನಿಸ್ಸಹಾಯಕನಾಗುವ ಪರಿಸ್ಥಿತಿ ಬರುತ್ತದೆ. ಈ ನಾಟಕದ ಕ್ರಿಯೆ ಮತ್ತು ಶೀರ್ಷಿಕೆ ವ್ಯಂಗ್ಯಾತ್ಮಕವಾಗಿದೆ. ಜಗನ್ನಾಥನ ಹೆಸರಿನಲ್ಲಿಯೂ ವ್ಯಂಗ್ಯ ಅಡಕವಾಗಿದೆ. ಜಗದೀಶ್ವರನನ್ನು ಸೂಚಿಸುವ 'ಜಗನ್ನಾಥ' ಎಂಬ ಹೆಸರನ್ನು ಧರಿಸಿದ ವ್ಯಕ್ತಿ ಕೊನೆಗೆ ಬೀದಿಪಾಲಾಗುವ ಭಿಕ್ಷುಕನ ಮಟ್ಟಕ್ಕಿಳಿಯುವದು ವ್ಯಂಗ್ಯಪೂರ್ಣವಾಗಿದೆ. ಬಂಡಾಯಗಾರನೇ ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕು ಷಂಡನಾಗುವದು ಭಾರತೀಯ ಸಮಾಜದಲ್ಲಿ ಅತ್ಯಂತ ಸಾಮಾನ್ಯವಾದುದೆಂಬ ಅಂಶವನ್ನು ಲಂಕೇಶರು ಕಲಾತ್ಮಕವಾಗಿ

ಎತ್ತಿತೋರಿಸಿದ್ದಾರೆ.

ಇದೇ ವಸ್ತು 'ಕ್ರಾಂತಿ ಬಂತು ಕ್ರಾಂತಿ' ನಾಟಕದಲ್ಲಿ ಇನ್ನಷ್ಟು ವಿಸ್ತೃತವಾಗಿ ಚಿತ್ರಿಸಲ್ಪಟ್ಟಿದೆ. ಭಾರತದಲ್ಲಿ ಯಾವ ತರಹದ ನಿಜವಾದ ಕ್ರಾಂತಿಯೂ ಸಾಧ್ಯವಿಲ್ಲವೆನ್ನುವದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಈ ಮಾತು ಕರ್ನಾಟಕದ ವಿಷಯದಲ್ಲಿ ಇನ್ನೂ ಸತ್ಯವಾದದ್ದು. ನಮ್ಮ ಜನರು ಮಾತಿನಲ್ಲಿ ಮಾತ್ರ ಪರಮವೀರರು, ಆದರೆ ಕೃತಿಯಲ್ಲಿ ಪರಮಹೇಡಿಗಳೆಂಬ ಕಟುಸತ್ಯವನ್ನು ಲಂಕೇಶರು ಈ ನಾಟಕದ ಮೂಲಕ ವಿಡಂಬಿಸಿದ್ದಾರೆ. ಈ ನಾಟಕದ ಕಥಾನಾಯಕನಾದ ಭಗವಾನ್‌ನು ಕಾಲೇಜು ಅಧ್ಯಾಪಕನಾಗಿದ್ದು ಕ್ರಾಂತಿ ಕುರಿತು ಅಸಂಖ್ಯಾತ ಸಾರ್ವಜನಿಕ ಭಾಷಣಗಳನ್ನು ಬಿಗಿಯುವ ಚಟವುಳ್ಳವನಾಗಿದ್ದಾನೆ. ಸಾರ್ವಜನಿಕರು ಆತನ ಭಾಷಣ ಕೇಳಿ ಚಪ್ಪಾಳೆ ತಟ್ಟಿದಾಗ ಆತ ಸಂತೋಷದಿಂದ ಬೀಗುತ್ತಾನೆ. ಆತನ ವಿದ್ಯಾರ್ಥಿನಿಯರಾದ ಲಲಿತ ಮತ್ತು ಮಾಲತಿ ಆತನನ್ನು ಹೊಗಳಿ ಹೊಗಳಿ ಆತನ ಅಹಂವನ್ನು ಹಿಗ್ಗಿಸುತ್ತಲಿರುತ್ತಾರೆ. ಆತನ ಸಹೋದ್ಯೋಗಿಗಳಾದ ಶಂಕರ ಮತ್ತು ರಾಮದಾಸ ಆತ ವಿದ್ಯಾರ್ಥಿಗಳನ್ನು ಕ್ರಾಂತಿಯಲ್ಲಿ ಪಾಲ್ಗೊಳ್ಳುವಂತೆ ಹುರಿದುಂಬಿಸುವುದರ ಬಗೆಗೆ ತಮಾಷೆ ಮಾಡುತ್ತಾರೆ. ಪೋಲಿಸರು ಭಗವಾನ್‌ನ ವಿದ್ಯಾರ್ಥಿಯೂ, ನಕ್ಸಲೈಟನೂ ಆಗಿದ್ದ ದಿನಕರನ ಚಲನವಲನಗಳ ಮೇಲೆ ಕಣ್ಣಿಟ್ಟಿರುತ್ತಾರೆ. ಭಗವಾನನ ಹೆಂಡತಿಯಾದ ಸುಧಾ ವ್ಯವಹಾರ ಚತುರಳಾಗಿದ್ದು ತನ್ನ ಗಂಡನ ಕ್ರಾಂತಿಕಾರಕ ವಿಚಾರಗಳ ಬಗೆಗೆ ಅನಾಸಕ್ತಳಾಗಿರುತ್ತಾಳೆ. ಒಂದು ದಿನ ಭಗವಾನ್‌ನು ಕ್ರಾಂತಿಯ ಬಗೆಗೆ ಭಯಂಕರ ಭಾಷಣ ಬಿಗಿದು ಮನೆಗೆ ಮರಳುತ್ತಾನೆ. ಆಗ ದಾರಿಯಲ್ಲಿ ನಕ್ಸಲೈಟ್ ದಿನಕರ ಭೇಟಿಯಾಗಿ ತನಗೆ ಪೋಲೀಸರು ಬೆನ್ನತ್ತಿದ್ದಾರೆಂದೂ, ತನಗೆ ಒಂದು ರಾತ್ರಿ ಮನೆಯಲ್ಲಿ ಆಶ್ರಯ ಕೊಡಬೇಕೆಂದೂ ಯಾಚಿಸುತ್ತಾನೆ. ಭಗವಾನ್‌ನ ಹೆಂಡತಿಯು ಅದಕ್ಕೆ ಒಪ್ಪದಿದ್ದರೂ, ಆತ ದಿನಕರ ಆ ರಾತ್ರಿ ತನ್ನ ಮನೆಯಲ್ಲಿ ಆಶ್ರಯ ಪಡೆಯಲು ಅನುಮತಿಕೊಡುತ್ತಾನೆ. ಆದರೆ ಆತನಿಗೆ ಪೋಲಿಸರನ್ನೆದುರಿಸುವ ಧೈರ್ಯವಿಲ್ಲ. ಆದ್ದರಿಂದ ಆತ ಒಂದು ಉಪಾಯ ಹುಡುಕುತ್ತಾನೆ. ಆತ ನಕ್ಸಲೈಟ್ ದಿನಕರನನ್ನು ತನ್ನ ಮನೆಯೊಳಗಿರಿಸಿ ಹೊರಗಿನಿಂದ ಬೀಗಹಾಕಿ ತನ್ನ ಪತ್ನಿಯೊಂದಿಗೆ ಚಿತ್ರಮಂದಿರಕ್ಕೆ ಹೋಗುತ್ತಾನೆ. ದಿನಕರ ಮನೆಯಲ್ಲಿ ಒಬ್ಬನೇ ಆಶ್ರಯ ಪಡೆದಾಗ ಕಳ್ಳನೊಬ್ಬ ಕಿಡಕಿಯ ಸರಳುಗಳನ್ನು ಬಾಗಿಸಿ ಮನೆಯೊಳಗೆ ಪ್ರವೇಶಿಸುತ್ತಾನೆ. ಆಗ ಕಳ್ಳ ಮತ್ತು ನಕ್ಸಲೈಟ್‌ರಿಬ್ಬರ ಮಧ್ಯದಲ್ಲಿ ಮಾತಿನ ಚಕಮಕಿ ನಡೆಯುತ್ತದೆ. ಕಳ್ಳನು ದಿನಕರನ ಕಮ್ಯುನಿಜಂನ ಬಗ್ಗೆ ಗೇಲಿಮಾಡಿ, ಮನೆಯಲ್ಲಿದ್ದ ವಸ್ತುಗಳನ್ನೆಲ್ಲ ಸಂಗ್ರಹಿಸಿಕೊಳ್ಳುತ್ತಾನೆ. ಅದರಲ್ಲಿ ಅರ್ಧಪಾಲು ದಿನಕರನಿಗೆ ಕೊಡಲು ಮುಂದೆ ಬಂದರೂ, ದಿನಕರ ಅದನ್ನು ನಿರಾಕರಿಸುತ್ತಾನೆ. ಆದ್ದರಿಂದ ಕಳ್ಳ ತಾನು

ಸಂಗ್ರಹಿಸಿದ ವಸ್ತುಗಳನ್ನೆಲ್ಲ ತೆಗೆದುಕೊಂಡು ಹೋಗಲು ಪ್ರಯತ್ನಿಸುತ್ತಾನೆ. ದಿನಕರನು ಅದಕ್ಕೆ ಅಡ್ಡಿಬರುತ್ತಾನೆ. ಕೊನೆಗೆ ಹೊರಗಿನಿಂದ ಹೆಜ್ಜೆಗಳ ಸಪ್ಪಳ ಕೇಳಿಸಿದಾಗ ಕಳ್ಳ ಅಲ್ಲಿಂದ ಲಗುಬಗೆಯಿಂದ ಪಾರಾಗಿಬಿಡುತ್ತಾನೆ. ಪ್ರೊಫೆಸರ್ ಭಗವಾನ್ ಮತ್ತು ಸುಧಾ ಅವರಿಗೆ ಅಲ್ಲಿಯ ಪರಿಸ್ಥಿತಿ ನೋಡಿ ಆಶ್ಚರ್ಯವಾಗುತ್ತದೆ. ನಿಜವಾಗಿ ನಡೆದ ಸಂಗತಿ ಏನೆಂಬುದನ್ನು ದಿನಕರ ತಿಳಿಸಿಹೇಳಲು ಪ್ರಯತ್ನಿಸುತ್ತಾನೆ. ಕಳ್ಳ ಬಂದುದನ್ನು, ವಸ್ತುಗಳನ್ನು ದೋಚಿಕೊಂಡು ಹೋದುದನ್ನು ವಿವರಿಸುತ್ತಾನೆ. ಆದರೆ ಅದನ್ನು ಅವರು ನಂಬುವದಿಲ್ಲ. ಸಿಟ್ಟಿನಲ್ಲಿ ಸುಧಾ ಅವನಿಗೆ ಮನೆ ಬಿಟ್ಟು ಹೋಗಲು ಅಜ್ಞಾಪಿಸುತ್ತಾಳೆ. ಆದರೆ ಆತ ಹೊರಗೆ ಹೋಗಲು ನಿರಾಕರಿಸಿದಾಗ ಅವಳು ಆತನನ್ನು ಗುಂಡಿಕ್ಕಿ ಕೊಲ್ಲುತ್ತಾಳೆ. ಈ ವಿಷಯವನ್ನು ಶಂಕರ ಮತ್ತು ರಾಮದಾಸ ಅವರುಗಳು ಪೋಲೀಸ್ ಇನ್‌ಸ್ಪೆಕ್ಟರ್‌ನಿಗೆ ತಿಳಿಸಿದಾಗ ಆತ ಅಲ್ಲಿ ಒಂದು ಸುಳ್ಳು ಹೇಳಿಕೆಯನ್ನು ಕೊಡಲು ಪುಸಲಾಯಿಸುತ್ತಾನೆ. ಅನಂತರ ಭಗವಾನನು ಕ್ರಾಂತಿಯ ಬಗೆಗೆ ಒಂದು ದೊಡ್ಡ ಸಾರ್ವಜನಿಕ ಭಾಷಣವನ್ನು ಬಿಗಿದು, ನಕ್ಸಲೈಟ್‌ನೊಬ್ಬನನ್ನು 'ಕೊಲೆ' ಮಾಡಿರುವದಕ್ಕಾಗಿ ವೀರಪುರುಷನೆಂಬ ಖ್ಯಾತಿ ಪಡೆಯುತ್ತಾನೆ. ನೆರೆದ ಜನರೆಲ್ಲ ಆತನನ್ನು ತಮ್ಮ ಕೈಗಳ ಮೇಲೆತ್ತಿ ಮೆರೆಸಿ ಜಯಕಾರ ಹಾಕುತ್ತಾರೆ.

ಈ ನಾಟಕದ ಶಿಲ್ಪವು ವ್ಯಂಗ್ಯಪೂರ್ಣವಾಗಿದೆ. ಭಾರತದಲ್ಲಿ ಮಾತಿನ ಉದ್ಯಮವು ಅತಿವೇಗದಿಂದ ಬೆಳೆಯುತ್ತಿದೆ. ಮಾತಿನಲ್ಲಿ ಎಲ್ಲರೂ ವೀರರು, ಮಾತನಾಡುವುದರಲ್ಲಿ ಭಾರತೀಯರನ್ನು ಮೀರಿಸುವವರಿಲ್ಲವೆಂದು ಸುಪ್ರಸಿದ್ಧ ಬಂಗಾಲಿ ಲೇಖಕರಾದ ನಿರಧ್ ಚೌಧರಿಯವರು ಹೇಳಿದ ಕಟುಸತ್ಯವನ್ನೇ ಲಂಕೇಶರು ಈ ನಾಟಕದ ಮೂಲಕ ವಿಡಂಬಿಸಿದ್ದಾರೆ. ಈ ಮಾತು ಕರ್ನಾಟಕದ ಬಂಡಾಯ ನಾಟಕಗಳಿಗೂ ಅನ್ವಯವಾಗುತ್ತದೆ.

ಹನ್ನೆರಡನೆಯ ಶತಮಾನದಲ್ಲಿ ಬಸವಣ್ಣನವರು ಕಲ್ಯಾಣದಲ್ಲಿ ನಡೆಸಿದ ಸಮಾಜೋಧಾರ್ಮಿಕ ಕ್ರಾಂತಿಯನ್ನು ವೈರಿಗಳು ಹೇಗೆ ವಿಫಲಗೊಳಿಸಲು ಪ್ರಯತ್ನಿಸಿದರೆಂಬುದನ್ನು ಲಂಕೇಶರು 'ಸಂಕ್ರಾಂತಿ' ನಾಟಕದಲ್ಲಿ ಸೂಕ್ಷ್ಮವಾಗಿ ತೋರಿಸಿದ್ದಾರೆ. ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿದ್ದ ಬಸವಣ್ಣನವರು ಜಾತಿಯಿಂದ ಬ್ರಾಹ್ಮಣರಾಗಿದ್ದರೂ ಬ್ರಾಹ್ಮಣ ಸಂಪ್ರದಾಯದ ಮೂಢನಂಬುಗೆಗಳ ವಿರುದ್ಧ ಬಂಡೆದ್ದು ನವಸಮಾಜವನ್ನು ನಿರ್ಮಿಸಿ ಶರಣಧರ್ಮವನ್ನು ಪ್ರಚಾರಗೊಳಿಸಬಯಸಿದರು. ಅವರ ಕ್ರಾಂತಿಯ ಅಂಗವಾಗಿ ಸಮಾಜದಲ್ಲಿ ನಡೆದ ಬದಲಾವಣೆಗಳ ಪರಿಣಾಮವನ್ನು ಲಂಕೇಶರು ಈ ನಾಟಕದಲ್ಲಿ ಚಿತ್ರಿಸಿದ್ದಾರೆ. [illegible] ಕೆಳವರ್ಗದ ವ್ಯಕ್ತಿಯ ಮಗನಾದ [illegible] ಬಸವಣ್ಣನವರ ಪ್ರಭಾವಕ್ಕೆ ಒಳಗಾಗಿ [illegible] ಜಾತಿಯ ಜನರ ಹುಡುಗಿ, ...

ಮತ್ತು ಸೂಳೆಗಾರಿಕೆ ಮುಂತಾದ ಕೆಟ್ಟ ಚಟಗಳನ್ನು ಬಿಡಿಸಬೇಕೆಂದು ಮನಸಾರೆ ಪ್ರಯತ್ನಿಸುತ್ತಾನೆ. ಆತ ಬ್ರಾಹ್ಮಣ ಜಾತಿಯ ತರುಣಿ ಉಷಾಳನ್ನು ಪ್ರೀತಿಸುತ್ತಿದ್ದಾನೆ. ಅವರಿಬ್ಬರೂ ಮದುವೆಯಾಗುವ ಸಿದ್ಧತೆಯಲ್ಲಿದ್ದಾರೆ. ಈ ಸುದ್ದಿ ತಿಳಿದ ಬ್ರಾಹ್ಮಣರಿಗೆ ಆಘಾತವಾಗಿ ಅವರು ಇದಕ್ಕೆಲ್ಲ ಮೂಲಕಾರಣ ಬಸವಣ್ಣನೇ ಆಗಿದ್ದಾನೆಂದೂ, ಆತನನ್ನು ಚೆನ್ನಾಗಿ ಶಿಕ್ಷಿಸಬೇಕೆಂದೂ ಬಿಜ್ಜಳನಿಗೆ ಪದೇ ಪದೇ ದೂರು ಸಲ್ಲಿಸುತ್ತಾರೆ. ಬಿಜ್ಜಳ ಧರ್ಮಸಂಕಟದಲ್ಲಿ ಸಿಲುಕುತ್ತಾನೆ. ಬಸವಣ್ಣನ ಘನವ್ಯಕ್ತಿತ್ವದ ಪರಿಚಯವಿದ್ದ ಆತನಿಗೆ ಬಸವಣ್ಣನನ್ನು ಹೇಗೆ ಶಿಕ್ಷಿಸಬೇಕೆಂಬುದು ತಿಳಿಯುವುದಿಲ್ಲ. ಆದ್ದರಿಂದ ಆತ ಒಂದು ಹಂಚಿಕೆ ಹಾಕುತ್ತಾನೆ. ಆತ ರುದ್ರನ ಹಳ್ಳಿಗೆ ಪ್ರಯಾಣ ಕೈಕೊಂಡು ಬ್ರಾಹ್ಮಣ ತರುಣಿ ಉಷೆಯನ್ನು ನೀನು ರುದ್ರನನ್ನು ಮನಸಾರೆ ಪ್ರೀತಿಸಿದೆಯೋ ಅಥವಾ ಬಲವಂತದಿಂದ ಒಪ್ಪಿದೆಯೋ ಎಂದು ಪ್ರಶ್ನಿಸುತ್ತಾನೆ. ಅದಕ್ಕೆ ಅವಳು 'ಬಲವಂತ'ದಿಂದ ಎಂದು ಉತ್ತರಿಸುತ್ತಾಳೆ. ಅದು ಹೇಗೆಂದು ಕೇಳಿದಾಗ ಅವಳು ಅದನ್ನು ವಿವರಿಸುತ್ತಾಳೆ. ಅವಳು ರುದ್ರನು ಅಸ್ಪೃಶ್ಯನಾಗಿದ್ದಾಗ ಅವನನ್ನು ಪ್ರೀತಿಸಿದ್ದೆನೆಂದೂ. ಆದರೆ ಈಗ ಅವನಿಗೆ ಗೊತ್ತಿಲ್ಲದಂತೆ ಶರಣನಾಗಿ ಬಿಟ್ಟ. ಹೀಗಾಗಿ ಅವನ 'ಪ್ರೀತಿ' ಈಗ 'ಪ್ರೀತಿ'ಯಾಗಿರದೆ 'ಅತ್ಯಾಚಾರ'ವಾಗಿದೆಯೆಂದು ಆಪಾದಿಸುತ್ತಾಳೆ. ಆಗ ಬಿಜ್ಜಳ ಅದೇ ನೆಪವನ್ನು ಮುಂದೆಮಾಡಿ ಶರಣನಾದ ರುದ್ರನನ್ನು ಗಲ್ಲಿಗೇರಿಸುವಂತೆ ಆಜ್ಞಾಪಿಸುತ್ತಾನೆ. ಹೀಗಾಗಿ ಕೊನೆಗೆ ಕ್ರಾಂತಿಕಾರಕನಾದ ರುದ್ರ ನಿಸ್ಸಹಾಯಕನಾಗುತ್ತಾನೆ. ಬಸವಣ್ಣನ ಕ್ರಾಂತಿಯನ್ನು ಬಿಜ್ಜಳ ಹೀಗೆ ಚಾಣಾಕ್ಷತನದಿಂದ ವಿಫಲಗೊಳಿಸಲು ಪ್ರಯತ್ನಿಸುತ್ತಾನೆ. ಭಾರತೀಯ ಪರಿಸರದಲ್ಲಿ ಕ್ರಾಂತಿಗೆ ಒದಗುವ ವಿರೋಧವನ್ನು ಲಂಕೇಶರು ಈ ನಾಟಕದಲ್ಲಿ ತೋರಿಸುತ್ತಾರೆ. ಬಿಜ್ಜಳನನ್ನು ಆಧುನಿಕ ಡಿಪ್ಲೊಮ್ಯಾಟನಂತೆ ಚಿತ್ರಿಸಿದ್ದಾರೆ. ಉಷೆಯು ಕೊಡುವ ಉತ್ತರ ಅತಿ ಜಾಣತನದ್ದಾಗಿದ್ದು ಆ ವಯಸ್ಸಿನ ಹುಡುಗಿಯ ಮಾನಸಿಕ ಮಟ್ಟಕ್ಕೆ ಮೀರಿದ್ದಾಗಿದೆ. ಆದರೂ ಕೂಡ ಕ್ರಾಂತಿಯ ವಿಫಲತೆಯನ್ನು ತೋರಿಸುವ ಲಂಕೇಶರ ಪ್ರಯತ್ನ ಸಫಲವಾಗಿದೆ. ಈ ನಾಟಕದಲ್ಲಿ ಉಪಯೋಗಿಸಿದ ಭಾಷೆ ಹಳೆಯ ಮೈಸೂರು ಪ್ರದೇಶದ್ದಾಗಿದ್ದು, ಉತ್ತರ ಕರ್ನಾಟಕದ ವಾತಾವರಣವನ್ನು ಚಿತ್ರಿಸುವಲ್ಲಿ ಅಷ್ಟೊಂದು ಔಚಿತ್ಯಪೂರ್ಣವಾಗಿ ತೋರುವುದಿಲ್ಲ.

ಲಂಕೇಶರ ಈ ಎಲ್ಲ ನಾಟಕಗಳಿಂದ ತಿಳಿದುಬರುವ ಅಂಶವೇನೆಂದರೆ, ಅವುಗಳಲ್ಲಿ ಅನ್ಯತೆ, ಬೇಸರ, ಏಕಾಕಿತನ, ಭಗ್ನತೆ, ಭಯ, ರಾಜಕೀಯ ಮಹತ್ವಾಕಾಂಕ್ಷೆ, ಮತ್ತು ಬಂಡಾಯಗಾರರ ಹಂಬಲ ಮುಂತಾದ ಕಥಾವಸ್ತುಗಳು ಚಿತ್ರಿಸಲ್ಪಟ್ಟಿವೆ. ಆದರೆ ನಾಟಕಕಾರರ ಸಮಕಾಲೀನ ಪ್ರಜ್ಞೆ, ಮಾನವ ಸ್ವಭಾವದ ಸೂಕ್ಷ್ಮ ತಿಳಿವಳಿಕೆ, ಇಂಗ್ಲಿಷ ಸಾಹಿತ್ಯದಿಂದ ಪ್ರೇರಿತರಾಗಿದ್ದರೂ ಸ್ವದೇಶಿ ಸಂಸ್ಕೃತಿಯನ್ನು ಮರೆಯದಂಥ ಎಚ್ಚರ ಮುಂತಾದ ಅಂಶಗಳನ್ನು ಗಮನಿಸಬಹುದಾಗಿದೆ. ಅನೇಕ ನವ್ಯಸಾಹಿತಿಗಳ ಕೃತಿಗಳಲ್ಲಿ

ಕಂಡುಬರುವ ದ್ವಂದ್ವಗಳು ಮತ್ತು ವ್ಯಂಗ್ಯಗಳು ಅವರ ನಾಟಕಗಳಲ್ಲಿ ಹಾಸುಹೊಕ್ಕಾಗಿವೆ. ಲಂಕೇಶರು ಮೂಲತಃ ಕವಿಹೃದಯಿಗಳಾಗಿದ್ದರಿಂದ, ರವೀಂದ್ರನಾಥ ಠಾಕೂರರ ನಾಟಕದಲ್ಲಿದ್ದ ಹಾಗೆ, ತಮ್ಮ ನಾಟಕಗಳಲ್ಲಿ ವಿಸ್ತೃತ ಪ್ರತಿಮೆಗಳನ್ನು (ಉದಾ : ಮನೆಯೊಡೆಯನಿಲ್ಲದ ಮನೆ; ಗಿಳಿ ಮತ್ತು ಪಂಜರ) ಬಳಸುತ್ತಾರೆ.

ಲಂಕೇಶರು ಬಳಸಿದ ಭಾಷೆ ಹಳೆಯ ಮೈಸೂರಿನ ಆಡುಭಾಷೆಯಾಗಿದ್ದು ತನ್ನದೇ ಆದ ಕಾವ್ಯಮಯತೆಯನ್ನು ಪಡೆದಿದೆ. ಅವರು ಬಳಸಿದ ಭಾಷೆಯ ವಿಪುಲತೆಯನ್ನು ನೋಡಿದರೆ ನಮಗೆ ತಟ್ಟನೆ ಶ್ರೀರಂಗರ ಅಥವಾ ಟಿ.ಪಿ.ಕೈಲಾಸಂ ಅವರ ವಾಚಾಳಿತನದ ನೆನಪಾಗುತ್ತದೆ. ಒಟ್ಟಾರೆ ಅವರ ನಾಟಕಗಳನ್ನು ನವ್ಯನಾಟಕಗಳೆಂದು ಕರೆಯಬಹುದು. ಅವುಗಳಲ್ಲಿ ಬೌದ್ಧಿಕಾಂಶವೇ ಹೆಚ್ಚಾಗಿ, ವಿಚಾರಗಳೇ ಪ್ರಧಾನವಾಗಿರುವುದರಿಂದ, ಹಾಡು, ಸಂಗೀತ, ಕುಣಿತಗಳಿಗೆ ಅಲ್ಲಿ ಸ್ಥಾನವಿಲ್ಲ. ಹೀಗಾಗಿ ಅವು ಜನಸಾಮಾನ್ಯರಿಗೆ ಹಿಡಿಸದೆ, ಬುದ್ಧಿಜೀವಿಗಳಿಗೆ ಮಾತ್ರ ಸೀಮಿತವಾಗಿವೆ. ಅವರ ನಾಟಕಗಳನ್ನು ಭಾರತದ ಇತರ ನಾಟಕಕಾರರಾದ ತೆಂಡುಲ್ಕರ್ ಮತ್ತು ಮೋಹನ್‌ರಾಕೇಶ್ ಮುಂತಾದವರ ಕೃತಿಗಳೊಂದಿಗೆ ಹೋಲಿಸಿ ಭಾರತೀಯ ರಂಗಸಾಹಿತ್ಯದ ಫಲಪ್ರದ ಅಧ್ಯಯನ ಕೈಕೊಳ್ಳಬಹುದು.

ಜಗನ್ನಾಥದಾಸರ ಹರಿಕಥಾಮೃತಸಾರ

★ ವೀರಣ್ಣ ರಾಜೂರ

ಜಗನ್ನಾಥದಾಸರು :

ರಾಯಚೂರು ಜಿಲ್ಲೆ ಹರಿದಾಸ ಸಾಹಿತ್ಯಕ್ಕೆ ಕೊಟ್ಟ ಕೊಡುಗೆ ಅನನ್ಯ. ಪುರಂದರ, ಕನಕದಾಸರ ಕಾಲದಲ್ಲಿ ಉತ್ತುಂಗ ಶಿಖರಕ್ಕೇರಿದ ಈ ಸಾಹಿತ್ಯ ಮುಂದೆ ಸು.೧೫೦ ವರ್ಷ ಕಾಲ ಅಜ್ಞಾತವಾಸವನ್ನು ಅನುಭವಿಸಬೇಕಾಯಿತು. ಅದಕ್ಕೆ ಹೊಸ ಹುಟ್ಟು ಕೊಟ್ಟು ಪುನರುಜ್ಜೀವನಗೊಳಿಸಿ, ಆ ಪರಂಪರೆಯನ್ನು ಮುಂದುವರಿಸಿಕೊಂಡು ನಡೆದುದು, ಅದಕ್ಕೆ ಮತ್ತೆ ಹಿಂದಿನ ಘನತೆ, ಗೌರವ ವೈಭವಗಳನ್ನು ತಂದು ಕೊಟ್ಟುದು ಈ ಜಿಲ್ಲೆಯ ಹೆಮ್ಮೆಯ ಕಾರ್ಯವೆನಿಸಿದೆ. ವಿಜಯದಾಸ, ಗೋಪಾಲದಾಸ, ಜಗನ್ನಾಥದಾಸರಂಥ ಪ್ರಸಿದ್ಧ ಹರಿದಾಸರು ಈ ಜಿಲ್ಲೆಯಲ್ಲಿ ಜನಿಸಿ ದಾಸಸಾಹಿತ್ಯಕ್ಕೆ ಜೀವಕಳೆ ತುಂಬಿ, ಪುಷ್ಟಿಗೊಳಿಸಿ ಅದು ಇಂದಿನವರೆಗೂ ಸಾಗಿ ಬರಲು ಕಾರಣರಾದುದು ಅಭಿಮಾನದ ಸಂಗತಿಯಾಗಿದೆ.

ಜಗನ್ನಾಥದಾಸರು 'ದಾಸಚತುಷ್ಟಯ'[1] ರಲ್ಲಿ ಒಬ್ಬರು. ದಾಸಸಾಹಿತ್ಯದ ಪುನರುಜ್ಜೀವನ ಕಾಲವೆನಿಸಿದ ದ್ವಿತೀಯ ಘಟ್ಟದ ಗಣ್ಯರು. ಅವರು ತಮ್ಮ [illegible] ಪ್ರತಿಭೆ, ಪಾಂಡಿತ್ಯ, ಲೋಕಾನುಭವ, ಭಕ್ತಿ, ಜ್ಞಾನ, ವೈರಾಗ್ಯ, ಅಪರೋಕ್ಷ ಜ್ಞಾನ, ಔದಾರ್ಯಗಳಿಂದ ಅಪಾರ ಕೀರ್ತಿ ಗೌರವಗಳಿಗೆ ಪಾತ್ರರಾಗಿದ್ದಾರೆ.

ಜಗನ್ನಾಥದಾಸರು ಅರ್ವಾಚೀನರಾದ ಕಾರಣ ಅವರ ಜೀವನಚರಿತ್ರೆ ಹಾಗೂ ವ್ಯಕ್ತಿತ್ವಗಳಿಗೆ ಸಂಬಂಧಿಸಿದಂತೆ ವಿಪುಲ ಸಾಮಗ್ರಿ ಲಭ್ಯವಿದೆ. ಚಾರಿತ್ರಿಕ ಸಂಗತಿಗಳನ್ನು ತಿಳಿಸುವ ಅವರ ಸಮಕಾಲೀನ ಗುರುಗಳು, ಶಿಷ್ಯ, ಪ್ರಶಿಷ್ಯ ಹಾಗೂ ಅವರ ಅಭಿಮಾನಿಗಳ ಕೃತಿಗಳು, ಅವರ ಮಹಿಮಾನ್ವಿತ ವ್ಯಕ್ತಿತ್ವವನ್ನು ಉತ್ಪ್ರೇಕ್ಷಿಸುವ ದಂತಕಥೆ, ಪವಾಡ, ಪ್ರತೀತಿಗಳು ಅಧಿಕ ಸಂಖ್ಯೆಯಲ್ಲಿ ಸೃಷ್ಟಿಗೊಂಡಿವೆ. ಸ್ವತಃ ಜಗನ್ನಾಥದಾಸರೇ ರಚಿಸಿದ ಕೃತಿಗಳಲ್ಲಿ ಕೆಲವು ಚಾರಿತ್ರಿಕ ಸಂಗತಿಗಳು ಅಡಕವಾಗಿವೆ. ಇವುಗಳ ಆಧಾರದಿಂದ ಅವರ ಜೀವನಚರಿತ್ರೆ ಹಾಗೂ ವ್ಯಕ್ತಿ ವೈಶಿಷ್ಟ್ಯಗಳನ್ನು ಸ್ಥೂಲವಾಗಿ ಕೆಳಗಿನಂತೆ ರೂಪಿಸಬಹುದು.

ಜಗನ್ನಾಥದಾಸರ ಹುಟ್ಟೂರು ರಾಯಚೂರ ಜಿಲ್ಲೆ ಮಾನವಿ ತಾಲೂಕಿಗೆ ಸೇರಿದ ಬ್ಯಾಗವಟ್ಟಿ ಎಂಬ ಗ್ರಾಮ. ಅವರ ತಂದೆ ನರಸಪ್ಪ, ತಾಯಿ ಲಕ್ಷ್ಮೀಬಾಯಿ. ಮನೆತನದ ವೃತ್ತಿ ಶಾನುಭೋಗಿಕೆ. ಕ್ರಿ.ಶ.೧೭೨೮ ಜುಲೈ ೨೭ ಜಗನ್ನಾಥದಾಸರು ಜನಿಸಿದ ದಿನ. ತಂದೆ-ತಾಯಿಗಳು ಆಗ ಅವರಿಗೆ ಇಟ್ಟ ಹೆಸರು ಶ್ರೀನಿವಾಸ. ಶ್ರೀನಿವಾಸನ ಬಾಲ್ಯದ ವಿದ್ಯಾಭ್ಯಾಸ ಮನೆಯಲ್ಲಿಯೇ ತಂದೆಯವರಿಂದ ಆರಂಭವಾಗಿ, ಗ್ರಂಥ ಅಧ್ಯಯನ

---

೧. ಪುರಂದರದಾಸ, ವಿಜಯದಾಸ, [illegible]

ಮಂತ್ರಾಲಯದ ವರದೇಂದ್ರತೀರ್ಥರ ಸನ್ನಿಧಿಯಲ್ಲಿ ಮುಂದುವರಿಯಿತು. ವರಕವಿತಾ ಶಕ್ತಿಯನ್ನು ಪಡೆದ ಶ್ರೀನಿವಾಸ ಹದಿವಯದಲ್ಲಿಯೇ ಗುರುಗಳನ್ನು ಕುರಿತು 'ವರದೇಂದ್ರ ಪಂಚರತ್ನ' ಎಂಬ ಕೃತಿ ರಚಿಸಿ, ಅವರ ವಿಶೇಷ ಪ್ರೀತಿಗೆ ಪಾತ್ರನಾದ. ಸತತ ಪ್ರಯತ್ನ, ಗುರುಕೃಪೆ, ಉತ್ತಮ ಪರಿಸರ-ಸಂಸ್ಕಾರ ಬಲದಿಂದ ವೇದ ಉಪನಿಷತ್ತು, ಪುರಾಣ, ಕಾವ್ಯ, ಶಾಸ್ತ್ರಗಳಲ್ಲಿ ಹೆಚ್ಚಿನ ಪ್ರಾವೀಣ್ಯ ಪಡೆದ. ಸಂಸ್ಕೃತ-ಕನ್ನಡ ಭಾಷೆಗಳಲ್ಲಿ ಅದ್ವಿತೀಯ ಪ್ರಭುತ್ವಗಳಿಸಿದ. ಅವನ ಪ್ರತಿಭೆ, ಪಾಂಡಿತ್ಯ, ಆಶುಕವಿತ್ವ ಕಂಡು ಗುರುಗಳು ಮೆಚ್ಚಿದರು. 'ಆಚಾರ್ಯ' ಎಂಬ ಬಿರುದು ನೀಡಿ ಗೌರವಿಸಿದರು. ಶ್ರೀನಿವಾಸ ಈಗ ಶ್ರೀನಿವಾಸಾಚಾರ್ಯನಾದ.

ಅಧ್ಯಯನ ಮುಗಿದೊಡನೆ ಶ್ರೀನಿವಾಸಾಚಾರ್ಯ ಹಿರಿಯರು ಗಳಿಸಿದ ಆಸ್ತಿಯಲ್ಲಿ ಜೀವನಸಾಗಿಸಲೆಂದು ಮಾನವಿಗೆ ಮರಳಿದ. ಪಾಠ ಪ್ರವಚನ ಮಾಡುತ್ತ ಮುನ್ನಡೆದ. ಅವನ ವಿದ್ವತ್ಪ್ರಭೆ, ಕವಿತ್ವಶಕ್ತಿಯ ಕೀರ್ತಿ ದಿಗ್ದೆಸೆಗೆ ಹಬ್ಬಿತು. ಅನೇಕ ಜನ ಅವನ ವ್ಯಕ್ತಿತ್ವಕ್ಕೆ ಮಾರುಹೋದರು; ಬಳಿಗೆ ಬಂದು ಶಿಷ್ಯತ್ವ ವಹಿಸಿದರು. ಲೌಕಿಕ ಗೌರವಾದರಗಳು ಹೆಚ್ಚಿದವು. ಪ್ರತಿಷ್ಠೆ ಬೆಳೆಯಿತು. ಸಹಜವಾಗಿ ವಿದ್ಯಾಮದ, ಕೀರ್ತಿಮದ ಅವನಲ್ಲಿ ಉದ್ಭವಿಸಿದವು. ಪಾಂಡಿತ್ಯದ ಗರ್ವ ಗರಿಗೆದರಿತು. ಸಂಸ್ಕೃತ ಭಾಷೆಯ ವ್ಯಾಮೋಹ ಹೆಚ್ಚಾಗಿ ಮಾತೃಭಾಷೆಯ ಬಗೆಗೆ ತಿರಸ್ಕಾರ ತಲೆಯೆತ್ತಿತ್ತು. ಅದು ಕನ್ನಡದಲ್ಲಿ ಕೃತಿರಚಿಸುವ ಹರಿದಾಸರನ್ನು ಹೀಗಳೆಯುವ ಮಟ್ಟಕ್ಕೂ ಏರಿತು. ಒಮ್ಮೆ ವಿಜಯದಾಸರು ಮಾನ್ವಿಗೆ ಬಂದಾಗ ಅವರನ್ನೂ ಅವಮಾನಗೊಳಿಸಿದ. ಹರಿಶರಣರನ್ನು ಹೀಗಳೆದ ಕಾರಣ ಅವನಿಗೆ ಅಕಾಲ ಅಪಮೃತ್ಯು ಸ್ವರೂಪದ ಕ್ಷಯರೋಗ ಅಂಟಿಕೊಂಡಿತು. ದಿನದಿಂದ ದಿನಕ್ಕೆ ವ್ಯಾಧಿ ಉಲ್ಬಣಿಸಿತು. ಯಾವ ವೈದ್ಯನಿಂದಲೂ ಗುಣಪಡಿಸಲು ಸಾಧ್ಯವಾಗಲಿಲ್ಲ. ಆಗ ಶ್ರೀನಿವಾಸಾಚಾರ್ಯನಿಗೆ ಭಗವಂತನ ಮೊರೆ ಹೋಗುವುದೊಂದೆ ಉಳಿದ ಮಾರ್ಗವೆಂಬ ಅರಿವು ಮೂಡಿತು. ಭಕ್ತಿಯಿಂದ ವಾಯುದೇವನನ್ನು ಪೂಜಿಸಿ ಕಾಯಿಲೆಗೆ ಕಾರಣವನ್ನು ತಿಳಿದುಕೊಂಡ. ತಾನು ಅವಮಾನಗೊಳಿಸಿದ ವಿಜಯದಾಸರಲ್ಲಿಗೆ ಹೋಗಿ, ತನ್ನ ಅಪರಾಧವನ್ನು ಮನ್ನಿಸಿ ರಕ್ಷಿಸಬೇಕೆಂದು ಬೇಡಿಕೊಂಡ. ಅವರ ಕರುಣೆಯ ಅಪ್ಪಣೆಯ ಮೇರೆಗೆ ಗೋಪಾಲದಾಸರಲ್ಲಿಗೆ ಹೋಗಿ, ಧನ್ವಂತರಿಯ ಕೃಪೆಯಿಂದ ರೋಗಮುಕ್ತನಾದ. ಅಲ್ಪಾಯುಷಿಯಾಗಿದ್ದ ಅವನಿಗೆ ಗೋಪಾಲದಾಸರು ಗುರುವಿನ ಆಜ್ಞೆಯಂತೆ ತಮ್ಮ ಅರ್ಧ ಆಯುಷ್ಯವನ್ನು ಧಾರೆಯೆರೆದರು. ಅವರ ಕೃಪೆ-ಮಹಿಮೆಗಳಿಗೆ ಮಾರುಹೋಗಿ, ಶ್ರೀನಿವಾಸಾಚಾರ್ಯನಿಗೆ ಅವರಂತೆ ತಾನೂ ದಾಸನಾಗಬೇಕೆಂಬ ಆಸೆ ಅಂಕುರಿಸಿತು. ತನಗೆ ಅಂಕಿತೋಪದೇಶ ಮಾಡಿ ದಾಸದೀಕ್ಷೆ ನೀಡಬೇಕೆಂದು ಅವರಲ್ಲಿ ಬಿನ್ನವಿಸಿದ. ಅವರು

ನಿನಗೆ ಅಂಕಿತ ಪಂಢರಪುರದ ವಿಠ್ಠಲನಿಂದ ಪ್ರಾಪ್ತವಾಗುತ್ತದೆ ಎಂದು ತಿಳಿಸಿದರು. ಶ್ರೀನಿವಾಸಾಚಾರ್ಯ ಪಂಢರಪುರಕ್ಕೆ ಪ್ರಯಾಣಬೆಳೆಸಿದ. ಚಂದ್ರಭಾಗಾ ನದಿಯಲ್ಲಿ ಸ್ನಾನ ಮಾಡುತ್ತಿದ್ದಾಗ ಅವನ ತಲೆಗೊಂದು ಶಿಲೆ ತಾಗಿತು. ತೆಗೆದು ನೋಡಲು ಶುಭ್ರವಾದ ಆ ಶ್ವೇತ ಶಿಲೆಯ ಮೇಲೆ 'ಜಗನ್ನಾಥವಿಠಲ' ಎಂದು ಬರೆಯಲಾಗಿತ್ತು. ಅದನ್ನು ಕಂಡು ಶ್ರೀನಿವಾಸ ಹರ್ಷಪುಲಕಿತನಾದ. ಅದೇ ತನಗೆ ವಿಠ್ಠಲ ಕರುಣಿಸಿದ ಅಂಕಿತವೆಂದು ಸ್ವೀಕರಿಸಿ "ತಟತ್ಕೋಟಿನಿಭಕಾಯ ಜಗನ್ನಾಥ ವಿಠಲಯ್ಯ ವಿಠಲಯ್ಯ" ಎಂದು ಸ್ತುತಿಸಿದ. ಅದು ಅವನ ಪ್ರಥಮ ಕೀರ್ತನವಾಗಿ ಪರಿಣಮಿಸಿತು. ಅಂದಿನಿಂದ ಶ್ರೀನಿವಾಸಾಚಾರ್ಯ ಜಗನ್ನಾಥದಾಸನಾಗಿ ಪರಿವರ್ತನ ಹೊಂದಿದ.

ದಾಸದೀಕ್ಷೆ ಪಡೆದು ಹರಿದಾಸರಾದ ಮೇಲೆ ಜಗನ್ನಾಥದಾಸರಲ್ಲಿ ಅದ್ಭುತ ಬದಲಾವಣೆಯುಂಟಾಯಿತು. ಗರ್ವದ ಮಂಜುಗಿರಿ ಕರಗಿ, ದಾಸೋಹಭಾವದ ಸೆಲೆಯೊಡೆಯಿತು. ವಿದ್ಯೆಯೊಂದಿಗೆ ವಿನಯ ಅನುಗೂಡಿತು. ಗೀರ್ವಾಣ ಭಾಷೆಯ ಮೇಲಿನ ವ್ಯಾಮೋಹ ಕಡಿಮೆಯಾಗಿ, ಮಾತೃಭಾಷೆಯ ಬಗೆಗೆ ಪ್ರೀತಿ, ಅಭಿಮಾನ, ನಿಷ್ಠೆ ನೆಲೆಗೊಂಡವು. ಶ್ರೀವಿಜಯದಾಸರನ್ನು ಪರಮಗುರುವೆಂದೂ, ಗೋಪಾಲದಾಸರನ್ನು ಸ್ವಗುರುವೆಂದೂ ಸ್ವೀಕರಿಸಿ ಗುರುಭಕ್ತಿಯನ್ನು ಶಿರದಲ್ಲಿ ಧರಿಸಿ, ಅವರ ದಿವ್ಯ ಮಾರ್ಗದರ್ಶನದಂತೆ ತಮ್ಮ ಮುಂದಿನ ಆಯುಷ್ಯವನ್ನೆಲ್ಲ ಹರಿಸೇವೆ, ದ್ವೈತಸಿದ್ಧಾಂತ ಪ್ರಚಾರ, ದೇಶಸಂಚಾರ, ಕೃತಿರಚನೆಗಳಲ್ಲಿ ಕಳೆದರು. ದಾಸಕೂಟದ ಪ್ರಮುಖ ಸದಸ್ಯರಾಗಿ ಅದರ ಉಜ್ವಲತೆಯನ್ನು ಹೆಚ್ಚಿಸಿದರು.

ಜಗನ್ನಾಥದಾಸರು ಹರಿದಾಸರಾದ ಮೇಲೆ ಮೊದಲು ದೇಶಸಂಚಾರ ಕೈಕೊಂಡರು. ತಂಬೂರಿ, ತಾಳ ಹಿಡಿದು, ಹರಿನಾಮ ಸ್ತುತಿಸುತ್ತ ಪಂಢರಪುರ, ಉಡುಪಿ, ತಿರುಪತಿ, ಶ್ರೀರಂಗಪಟ್ಟಣ, ಬೇಲೂರು, ಹಳೆಬೀಡು, ಹಂಪೆ ಮೊದಲಾದ ಸ್ಥಳಗಳಿಗೆ ಭೇಟಿಯಿತ್ತು, ತೀರ್ಥಕ್ಷೇತ್ರ ಸಂದರ್ಶನ ಫಲ, ಜೊತೆಗೆ ಲೋಕಸಂಗ್ರಹ ಲಾಭವನ್ನು ಪಡೆದರು. ಪೇಶ್ವೆ, ಸುರಪುರ, ಗದ್ವಾಲ, ಮೈಸೂರು ಮೊದಲಾದ ಅರಸರ ಆಹ್ವಾನದ ಮೇರೆಗೆ ವಿದ್ವತ್ಸಭೆಗಳಲ್ಲಿ ಭಾಗವಹಿಸಿ ತಮ್ಮ ಅಪೂರ್ವ ಪಾಂಡಿತ್ಯವನ್ನು ಮೆರೆದು ರಾಜಮನ್ನಣೆಯನ್ನು ಗಳಿಸಿದರು. ಅನೇಕ ಜನರಿಗೆ ದೀಕ್ಷೆಯಿತ್ತು ಶಿಷ್ಯರನ್ನಾಗಿ ಮಾಡಿಕೊಂಡರು. ಅನೇಕ ಕೀರ್ತನೆಗಳನ್ನು ರಚಿಸಿ, ಹಾಡುತ್ತ ಜನತೆಯಲ್ಲಿ ಧರ್ಮ, ನೀತಿ, ವಿವೇಕಗಳನ್ನು ಜಾಗೃತಗೊಳಿಸಿದರು. ಹೀಗೆ ಧರ್ಮಮನ್ನಣೆ, ಪಂಡಿತಮನ್ನಣೆ, ರಾಜಮನ್ನಣೆ, ಜನಮನ್ನಣೆಗಳಿಗೆ ಪಾತ್ರರಾಗಿ ೮೦ ವರ್ಷಗಳ ವರೆಗೆ ಹರಿಸೇವೆ ಮಾಡಿ,

೧೮೪೯ರಲ್ಲಿ ಮಾನ್ವಿಯಲ್ಲಿ ನಿರ್ಯಾಣವನ್ನು ಹೊಂದಿದರು. ಅವರು ವಾಸವಾಗಿದ್ದ ಮನೆ ಇಂದು ಸ್ಮಾರಕಮಂದಿರವಾಗಿದೆ. ಅದರ ಮಧ್ಯದ ಕಂಬ ದಾಸರ ಪ್ರತೀಕವಾಗಿ ನಿತ್ಯ ಪೂಜೆಗೊಳ್ಳುತ್ತಿದೆ. ವರ್ಷಕ್ಕೊಮ್ಮೆ ಅಲ್ಲಿ ಉತ್ಸವ ನೆರವೇರುತ್ತದೆ. ದಾಸರು ಪೂಜಿಸಿದ ಸಾಲಿಗ್ರಾಮ, ದೇವತಾ ಪ್ರತಿಮೆ, ಅವರ ತಂಬೂರಿ, ತಾಳ, ಪಾದುಕೆಗಳು ಇಂದಿಗೂ ಅಲ್ಲಿದ್ದು ಅವರ ನೆನಹನ್ನು ಚಿರವಾಗಿ ಉಳಿಸಿವೆ. ಅವರ ವಂಶಜರು ಇಂದಿಗೂ ಮಾನ್ವಿಯಲ್ಲಿದ್ದಾರೆ. ಧಾರವಾಡ ಜಿಲ್ಲೆಯ ಹೊಸರಿತ್ತಿಯಲ್ಲಿ ಅವರಿಗೆ ದತ್ತಿಯಾಗಿ ಬಂದ ಆಸ್ತಿಯಿದೆ.

ಜಗನ್ನಾಥದಾಸರ ವ್ಯಕ್ತಿತ್ವ ದೈವೀಶಕ್ತಿಯಿಂದ ಕೂಡಿದುದಾಗಿದೆ. ಅವರು ಪ್ರಹ್ಲಾದನ ತಮ್ಮ ಸಹ್ಲಾದನ ಅವತಾರವೆಂದೂ, ಶ್ರೀನಿವಾಸನ ವರದಿಂದ ಹುಟ್ಟಿದವರೆಂದೂ ಅದಕ್ಕಾಗಿಯೇ ಪಂಡರಪುರದ ವಿಠಲನಿಂದಲೇ ಅವರಿಗೆ ಅಂಕಿತ ದೊರಕಿತೆಂದೂ ಭಾವುಕರು ಭಾವಿಸುತ್ತಾರೆ. ವರಕವಿತ್ವ , ಆಶುಕವಿತ್ವ ಪ್ರಾಪ್ತವಾದುದೂ ಈ ದೈವೀಕೃಪೆಯಿಂದಲೇ ಎಂದು ನಂಬಲಾಗಿದೆ. ಅವರು ಈ ದೈವಶಕ್ತಿಯಿಂದ ಅನೇಕ ಪವಾಡಗಳನ್ನು ಮೆರೆದರೆಂದೂ ಹೇಳಲಾಗುತ್ತದೆ. ಏನಿದ್ದರೂ ಅವರೊಬ್ಬ ಚಾರಿತ್ರಿಕ ವ್ಯಕ್ತಿಯಾಗಿ, ಸಂಪ್ರದಾಯದಲ್ಲಿ ಶ್ರದ್ಧೆಯಿಟ್ಟು ಹರಿಸೇವೆ, ಸಾಹಿತ್ಯಸೇವೆ ಮಾಡಿ ಆ ಮೂಲಕ ಲೋಕಕಲ್ಯಾಣ ಕಾರ್ಯಕ್ಕಾಗಿ ತಮ್ಮನ್ನು ಅರ್ಪಿಸಿಕೊಂಡರೆಂಬುದು ಸತ್ಯಸಂಗತಿ. ಅವರ ಶಿಷ್ಯರು ವ್ಯಕ್ತಪಡಿಸಿದ ಈ ನುಡಿಗಳು ಅವರ ವ್ಯಕ್ತಿತ್ವ ಶ್ರೀಮಂತಿಕೆ ಹಿಡಿದ ಕನ್ನಡಿಯಂತಿವೆ :

'' ಅತಿಪ್ರೇಮಿಗಳು ಹಸನ್ಮುಖರು ದಯಬೀರುವರು
ಖತಿದೂರರಿವರು ಜಗದಿ
ಮೀತಿಮೀರಿ ಶ್ರೀಹರಿಯ ಕಥೆಯ ನಾನಾಪರಿಯ
ಅತಿಶಯದಿ ಹೇಳಿ ಇಹಕೆ
ಸತತವೂ ಶರಣರಿಗೆ ಗತಿಯಾಗುವಂತೆ ಸತ್
ಪಥವಿಡಿಸಿ ಕರುಣದಿಂದ
ಹಿತವಂತರೆನಿಸಿ ಸಮ್ಮತವಾಗಿ ಸರ್ವರಿಗೆ
ಮತಿದೋರಿಕೊಟ್ಟು ಸದ್ಗತಿಗಾಗಿ ತೆರಳಿದರು''

''ಆಚರಣೆಗಳಲಿ ಒಂದರಗಳಿಗೆ ಬಿಡದೆ ಬಲು
ಖೇಚರಾರೂಢ ಹರಿಯ
ಸ್ವೋಚಿತಾರಾಧನೆಯ ಮಾಡಿ ಮರೆಯದೆ ಮಹಾ
ವೈಚಿತ್ರಗಳನು ತೋರಿ
ಈ ಚರಾಚರದಿ ಸಂಗೀತ ಸಾಹಿತ್ಯದಲ್ಲಿ

ಪ್ರಾಚುರ್ಯವಂತರೆನಿಸಿ ...." (ಕರ್ಜಗಿ ಶ್ರೀ ವಿಠಲದಾಸರು)

"ದೇಶ ದೇಶವ ಚರಿಸಿ ದಾಸಕೂಟವ ಮೆರೆಸಿ
ಭೂಸುರರನು ಉಪಚರಿಸಿ ಕ್ಲೇಶ ಮೋದವ ಸಹಿಸಿ
ದೂಷಿತರನುದ್ಧರಿಸಿ ಶ್ರೀಶರಂಗನ ಒಲಿಸಿ
ಭಾಸುರಸುಕೀರ್ತಿವರಿಸಿ ಈರಾಂತರೆಂದರುಪಲ್ಲೊಂದಂತ-
ಸ್ತಂಭದೊಳಿರಿಸಿ........... " -(ತಂದೆವೆಂಕಟೇಶ ವಿಠಲರು)

"ಆಶುಕವಿ ಕುಲಕಲ್ಪತರು ದಿ-
ಗ್ದೇಶವರಿಯಲು ರಂಗನೊಲುಮೆಯದಾಸ"
-(ಹರಿಕಥಾಮೃತಸಾರ)

೨

ಹರಿಕಥಾಮೃತಸಾರ :

ಜಗನ್ನಾಥದಾಸರು 'ಜಗನ್ನಾಥವಿಠಲ' ಎಂಬ ಅಂಕಿತದಲ್ಲಿ ಕೀರ್ತನೆ, ಸುಳಾದಿ, ಉಗಾಭೋಗ, ತತ್ತ್ವ ಸುವ್ವಾಲಿ ಮತ್ತು ಹರಿಕಥಾಮೃತಸಾರ ಎಂಬ ಕೃತಿಗಳನ್ನು ರಚಿಸಿದ್ದಾರೆ. ಅವರು ಬರೆದ ಕೀರ್ತನೆಗಳ ಸಂಖ್ಯೆ ಎಷ್ಟೆಂಬುದು ಇನ್ನೂ ಖಚಿತವಾಗಿಲ್ಲ. ಸದ್ಯ ಸು.೨೦೦ ದೊರೆತಿವೆ. ಅವು ದೇವತಾಸ್ತುತಿ, ಹರಿಭಕ್ತಿ-ಹರಿಮಹಿಮೆಯ ವರ್ಣನೆ, ಅಂತರಂಗ ನಿವೇದನೆ, ಹರಿದಾಸರ ಸ್ಮರಣೆ, ಅವರ ವ್ಯಕ್ತಿವೈಶಿಷ್ಟ್ಯ ಹಾಗೂ ಲೋಕನೀತಿಯನ್ನು ಒಳಗೊಂಡಿವೆ. ಸುಳಾದಿ ಮತ್ತು ಉಗಾಭೋಗಗಳು ಕಡಿಮೆ ಸಂಖ್ಯೆಯಲ್ಲಿ ದೊರೆತಿದ್ದು, ಅವುಗಳಲ್ಲಿಯೂ ಹರಿಸ್ತುತಿ ಮುಖ್ಯ ವಿಷಯವಾಗಿದೆ. ತತ್ತ್ವ ಸುವ್ವಾಲಿ ತ್ರಿಪದಿ ಛಂದಸ್ಸಿನಲ್ಲಿ ರಚಿತವಾದ ಒಂದು ಅಪೂರ್ವಕೃತಿ. ಸಾವಿರದ ಇನ್ನೂರು ಪದ್ಯಗಳಲ್ಲಿ ವಿಸ್ತೃತಗೊಂಡಿದೆ ಎಂದು ತಿಳಿದು ಬರುವ ಇದರ ೬೦೦ ತ್ರಿಪದಿಗಳು ಮಾತ್ರ ಇಂದು ಲಭ್ಯವಾಗಿವೆ. ಶ್ರೀಹರಿಯನ್ನು ಮೊದಲ್ಗೊಂಡು ಅನೇಕ ದೇವತೆಗಳ ಸ್ತುತಿ, ಮಾಯಾವಾದ ಖಂಡನೆ, ರುಕ್ಮಿಣಿ, ಶ್ರೀನಿವಾಸ, ಶ್ರೀಕೃಷ್ಣರ ಚರಿತ್ರೆ, ದ್ವೈತ ತತ್ತ್ವ ವಿವರಣೆ ಇತ್ಯಾದಿ ವಿಷಯಗಳು ಇವುಗಳಲ್ಲಿ ಅತ್ಯಂತ ಸುಲಭವಾಗಿ ನಿರೂಪಿತವಾಗಿವೆ.

'ಹರಿಕಥಾಮೃತಸಾರ' ಜಗನ್ನಾಥದಾಸರ ಪ್ರತಿಭೆ, ಪಾಂಡಿತ್ಯ, ತತ್ತ್ವನಿಷ್ಠೆ, ಶಾಸ್ತ್ರಜ್ಞಾನ, ಲೋಕಾನುಭವಗಳನ್ನು ಬಿತ್ತಿತೋರುವ ವಿಶಿಷ್ಟ ಕೃತಿ. ಇದರಲ್ಲಿ ೩೨ ಸಂಧಿ,

೯೮೮ ಭಾಮಿನಿ ಷಟ್ಪದಿಗಳಿವೆ. ಪ್ರತಿಸಂಧಿಯ ಆದಿಯಲ್ಲಿ "ಹರಿಕಥಾಮೃತಸಾರ ಗುರುಗಳ ಕರುಣದಿಂದಾಪನಿತು ಪೇಳುವೆ, ಪರಮಭಗವದ್ಭಕ್ತರಿದನಾದರದಿ ಕೇಳುವುದು ಎಂಬ ಪಲ್ಲವಿ ನಿಯತವಾಗಿ ಬಂದರೆ, ಏಳು ಸಂಧಿಗಳಾದಿಯಲ್ಲಿ ಈ ಪಲ್ಲವಿಯ ತರುವಾಯ 'ಸಂಧಿ ಸೂಚನೆ' ಎಂಬ ಅರ್ಧ ಷಟ್ಪದಿ ಬರುತ್ತದೆ. ಗ್ರಂಥಾಂತ್ಯದಲ್ಲಿ ಜಗನ್ನಾಥದಾಸರ ಶಿಷ್ಯರಲ್ಲಿ ಒಬ್ಬನಾದ ಶ್ರೀದವಿಠಲಾಂಕಿತ ಕರ್ಜಗಿದಾಸರಾಯರಿಂದ ರಚಿತವಾದ 'ಫಲಸ್ತುತಿಸಂಧಿ' ಎಂಬುದೊಂದು ೩೩ನೆಯದಾಗಿ ಸೇರಿಕೊಂಡಿದ್ದು, ಅದರಲ್ಲಿ ಈ ಕೃತಿಯ ವೈಶಿಷ್ಟ್ಯ ಹಾಗೂ ಫಲಗಳನ್ನು ತಿಳಿಸಲಾಗಿದೆ.

'ಹರಿಕಥಾಮೃತಸಾರ' ಎಂಬ ಹೆಸರಿಗೆ ಅನ್ವರ್ಥಕವಾಗಿ ಈ ಕೃತಿಯಲ್ಲಿ ಯಾವುದೇ ಕಥೆಯಿಲ್ಲ. ಆದರೆ ಹರಿಯಮಹಾತ್ಮೆಯಿದೆ; ದ್ವೈತಮತತತ್ತ್ವಗಳ ಪ್ರತಿಪಾದನೆ ಇದೆ. ತತ್ವಸ್ವರೂಪನಾದ, ಸಕಲವಸ್ತುಭರಿತನಾದ ಶ್ರೀಹರಿಯ ಅನಂತರೂಪ, ಕ್ರಿಯೆ, ಮಹಿಮೆಗಳ ರಸಾಮೃತ ಇಲ್ಲಿ ಮಡುಗಟ್ಟಿದೆ. ವೇದ, ಉಪನಿಷತ್ತು, ಪುರಾಣ, ಪಂಚರತ್ನ, ರಾಮಾಯಣ, ಮಹಾಭಾರತ, ಭಾಗವತ, ಭಗವದ್ಗೀತೆ ಮೊದಲಾದ ಕೃತಿಗಳಲ್ಲಿ ಹೇಳಿದ ಭಗವತ್ತತ್ವಸಾರ ಇಲ್ಲಿ ಭಟ್ಟಿಯಿಳಿದಿದೆ. ಅದಕ್ಕೆ ಪೂರಕವಾದ ಅನೇಕ ವಿಷಯಗಳು ಇಲ್ಲಿ ಕ್ರೋಢೀಕರಣಗೊಂಡಿವೆ. ಈ ಕೃತಿಯ ಸಂಧಿಗಳಿಗೆ ಕೊಟ್ಟ ಹೆಸರುಗಳನ್ನು ಗಮನಿಸಿದರೆ ಸಾಕು ಇಲ್ಲಿನ ವಸ್ತು ವೈವಿಧ್ಯ, ವಿಷಯಗಾಂಭೀರ್ಯ ಒಡೆದುತೋರುತ್ತದೆ.

ದೇವದೇವತೆಗಳ ಮಂಗಳಸ್ತವನ, ಹರಿಯ ಕರುಣಾಶಾಲಿತ್ವ, ಸರ್ವವ್ಯಾಪಕತ್ವ, ಸರ್ವಪದಾರ್ಥಗಳಲ್ಲಿ ಅಡಕವಾದ ಅವನ ರೂಪ, ವಿಭೂತಿಸ್ವರೂಪ, ಪಂಚಾಗ್ನಿಗಳ ಮೂಲಕ ಜೀವರ ಸ್ಥೂಲಸೃಷ್ಟಿಕ್ರಮ, ಆ ಸ್ಥೂಲ ಸೃಷ್ಟಿಗೆ ಕಾರಣವಾದ ಪಂಚಭೂತಗಳು, ದೇಹದ ನಾನಾ ಅವಯವಗಳಲ್ಲಿರುವ ತತ್ವಾಭಿಮಾನಿ ದೇವತೆಗಳು, ಅವರನ್ನು ಚಿಂತನೆ ಮಾಡುವ ವಿಧಾನ ಮತ್ತು ವರ್ಣಗಳಲ್ಲಿರುವ ಭಗವದ್ರೂಪ, ಜೀವರ ಸ್ಥೂಲದೇಹದಲ್ಲಿದ್ದು ಪರಮಾತ್ಮ ಮಾಡುವ ಕಾರ್ಯ, ಸರ್ವವ್ಯಾಪಿಯಾದ ಪರಮಾತ್ಮನನ್ನು ಬೇರೆ ಬೇರೆ ಪ್ರತೀಕಗಳಲ್ಲಿ ಚಿಂತಿಸಿ ಪೂಜಿಸುವ ವಿಧಾನ, ಅವನ ಧ್ಯಾನಾಸಂಧಾನಕ್ಕೆ ಅನುಸರಿಸಬೇಕಾದ ಕ್ರಮ, ನಿಷ್ಕಾಮಕರ್ಮ ಮಾಡುವ ರೀತಿ, ಪ್ರತಿಮಾಪೂಜೆ, ಮಾನವದೇಹರಚನೆ, ದೇಹಗತ ನಾಡಿಗಳಲ್ಲಿರುವ ಪರಮಾತ್ಮನ ವ್ಯಾಪ್ತಿಕ್ರಿಯೆ, ಪಿತೃಗಳ ಅಂತರಂಗದಲ್ಲಿ ಅಡಗಿರುವ ಭಗವದುಪಾಸನೆಯ ವಿಚಾರ, ಸರ್ವಜೀವ ಪ್ರಾಣರಕ್ಷಕನಾದ ವಾಯುದೇವರ ವ್ಯಾಪಾರ, ಕರ್ಮವಿಮೋಚನೆ, ದೇವತಾ ತಾರತಮ್ಯ, ಗುಣತಾರತಮ್ಯ, ಬೃಹತ್ತಾರತಮ್ಯ, ಅಣು ತಾರತಮ್ಯ, ದೈತ್ಯ ತಾರತಮ್ಯ, ಪರಮಾತ್ಮನ ಭಕ್ತಪರಾಧೀನವಿಷ್ಣುತೆ, ಬಿಂಬ-ಪ್ರತಿಬಿಂಬ

ಸ್ವರೂಪ, ನೈವೇದ್ಯ ಸಮರ್ಪಣೆ- ಇವೇ ಮೊದಲಾದ ವಿಷಯಗಳು ಇಲ್ಲಿ ವರ್ಣಿತವಾಗಿವೆ.

ಮೇಲುನೋಟಕ್ಕೆ ಈ ಕೃತಿಯ ಸಂಧಿಗಳ ಹೆಸರುಗಳನ್ನು ಗಮನಿಸಿ 'ಇಲ್ಲಿ ಒಂದು ಕ್ರಮ ಕಂಡುಬರುವುದಿಲ್ಲ, ಎಲ್ಲ ಪ್ರಕರಣಗಳು ಹರಿಮಹಾತ್ಮೆಗೆ ಮೀಸಲಾಗಿಲ್ಲ' ಎಂದು ಕೆಲವು ವಿಮರ್ಶಕರು ಟೀಕಿಸಿದುದುಂಟು. ಆದರೆ ಸೂಕ್ಷ್ಮವಾಗಿ ಪರಿಶೀಲಿಸಿದಾಗ ಒಂದೊಂದು ಪ್ರಕರಣಕ್ಕೂ ಪೂರಕ ಸಂಬಂಧವಿರುವುದನ್ನು, ಎಲ್ಲ ಪ್ರಕರಣಗಳಲ್ಲಿಯೂ ಹರಿಭಕ್ತಿ, ಹರಿಮಹಿಮೆ, ಜೀವವಾಹಿನಿಯಾಗಿ ಪ್ರವಹಿಸುತ್ತಿರುವುದನ್ನು ಮನಗಾಣಬಹುದು. ಸ್ಥೂಲವಾಗಿ, ಮೊದಲ ಹನ್ನೊಂದು ಸಂಧಿಗಳಲ್ಲಿ ಬಹಿರಂಗದ ಕ್ರಿಯೆಗಳಿಗೆ ಸಂಬಂಧಿಸಿದ ವಿಷಯಗಳಿದ್ದರೆ, ೧೨ರಿಂದ ಮುಂದಿನ ಸಂಧಿಗಳಲ್ಲಿ ಅಂತರಂಗದ ಅರಿವಿಗೆ ಸಂಬಂಧಿಸಿದ ವಿಷಯಗಳು ಬಂದಿವೆ. ಮೊದಲ ಹತ್ತು ಸಂಧಿಗಳು ಜ್ಞಾನೋಪಾಯವನ್ನು ಬೋಧಿಸಿದರೆ, ೧೧ರಿಂದ ೧೭ರವರೆಗಿನ ಸಂಧಿಗಳು ಸಾಧನೋಪಾಯವನ್ನು, ಉಳಿದ ಸಂಧಿಗಳು ಸಿದ್ಧಿಯನ್ನು ಸೂಚಿಸುತ್ತವೆ. ಗ್ರಂಥದ ಬಹುಭಾಗ ಪಂಚತಾರತಮ್ಯಗಳಿಗೆ ಮೀಸಲಾಗಿದೆ. ಸುಮಾರು ೧೦ ಸಂಧಿಗಳಲ್ಲಿ ಈ ಒಂದೇ ವಿಷಯವನ್ನು ಬೇರೆ ಬೇರೆ ರೀತಿಯಲ್ಲಿ ವಿವರಿಸಲಾಗಿದೆ. ದ್ವೈತಮತದಲ್ಲಿ ತಾರತಮ್ಯ ಚಿಂತನೆಗೆ ಅತ್ಯಂತ ಮಹತ್ವದ ಸ್ಥಾನವನ್ನು ಕಲ್ಪಿಸಿರುವುದೇ ಇಲ್ಲಿ ಇಷ್ಟು ದೀರ್ಘವಾಗಿ ಈ ವಿಷಯವನ್ನು ಹೇಳಲು ಕಾರಣವಾಗಿರಬೇಕು. ಇದರ ತರುವಾಯ ಹೆಚ್ಚು ವಿಸ್ತಾರವಾದ ಪ್ರತಿಪಾ[illegible]ದ ವಿಷಯಗಳೆಂದರೆ ಹರಿಯ ವ್ಯಾಪ್ತಿಸ್ವರೂಪ ಹಾಗೂ ಶ್ರೀಹರಿ-ವಾಯು[illegible]ನುಸಂಧಾನ ವಿವರ.

ಹರಿಯ ಮಹಿಮೆಯನ್ನು ಜಗನ್ನಾಥದಾಸರು ತುಂಬ ಭಕ್ತಿಯಿಂದ ಕೊಂಡಾಡಿದ್ದಾರೆ. ಅವನ ಸರ್ವವ್ಯಾಪಕತ್ವವನ್ನು ಹೆಮ್ಮೆಯಿಂದ ಬಣ್ಣಿಸಿದ್ದಾರೆ. ಪರಮಾತ್ಮ ಸರ್ವಾತ್ಮ; ಅವನು ಎಲ್ಲರೊಳಗೆ ತಾನಿದ್ದು ತನ್ನೊಳಗೆ ಜಗತ್ತನ್ನೆಲ್ಲ ಧರಿಸಿಕೊಂಡಿರುವವನು:

" ಎಲ್ಲಿ ಕೇಳಿದರಲ್ಲಿ ನೋಡಿದ । ರಲ್ಲಿ ಬೇಡಿದರಲ್ಲಿ ನೀಡಿದ
ರಲ್ಲಿ ಒಲಿದರಲ್ಲಿಯಾಡಿದರಲ್ಲಿ ಇರುತಿಹನು ।
ಬಲ್ಲಿದರಿಗತಿಬಲ್ಲಿದನು ಸರಿಯಿಲ್ಲ ಇವಗಾವಲ್ಲಿ ನೋಡಲು
ಖುಲ್ಲಮಾನವರನೊಲ್ಲನಪ್ರತಿಮಲ್ಲ ಜಗಕೆಲ್ಲ (೩-೨೮)

"ಒಬ್ಬನಲಿ ನಿಂತಾಡುವನು ಮತ್ತೊಬ್ಬನಲಿ ನೋಡುವನು ಬೇಡುವ
ನೊಬ್ಬನಲಿ ನೀಡುವನು ಮಾತಾಡುವನು ಬೆರಗಾಗಿ ।
ಉಬ್ಬಸವ ಪಡುವವ ಮತ್ತೊಬ್ಬನು ಠಕ್ಕನು ಬೇಕೆಂದೂ

ಳೊಬ್ಬನೆ ತಾ ಬಾಧ್ಯ ಬಾಧಕನಾಹ ನಿರ್ಭೀತ" (೨-೯)

ಹೀಗೆ ಹರಿಯ ಅನಂತತೆಯನ್ನು ಈ ಗ್ರಂಥದ ತುಂಬೆಲ್ಲ ಸೂರೆಗೈಯಲಾಗಿದೆ.

ಹರಿಕಥಾಮೃತಸಾರ ಒಂದು ತಾತ್ವಿಕ ಕಾವ್ಯ. ಜಗನ್ನಾಥದಾಸರು 'ಮಥಿಸಿ ಮಧ್ವಾಗಮ ಪಯೋಬ್ಧಿಯ ಕ್ಷಿತಿಗೆ ತೋರಿದ' ದ್ವೈತ ಸಿದ್ಧಾಂತ ಪ್ರತಿಪಾದಕ ಶಾಸ್ತ್ರಕೃತಿ. ಕೃತಿ ಕರ್ತರೇ ಹೇಳಿದ 'ಲೋಕ ವಾರ್ತೆಯಿಲ್ಲದ ಪರಲೋಕೈಕನಾಥನವಾರ್ತೆ' ಯಿದು. 'ಪರಮತತ್ವ ರಹಸ್ಯವಿದು' ಎಂಬ ಮಾತುಗಳಲ್ಲಿ ಅದು ಸ್ಪಷ್ಟವಾಗಿದೆ. ಪರಲೋಕೈಕನಾಥನಾದ ಶ್ರೀ ಹರಿಯ ಸರ್ವೋತ್ತಮತೆಯನ್ನು ತಿಳಿಸುವುದೇ ಇಲ್ಲಿ ಅಡಕವಾದ ತತ್ವದ ಪರಮೋದ್ದೇಶ.

ಶ್ರೀ ಹರಿಯು ಸರ್ವೋತ್ತಮ. ಅವನೇ ಪರಮಾತ್ಮ. ಅವನು ಸ್ವತಂತ್ರ; ದೇವಮಾನವರೆಲ್ಲ ಅಸ್ವತಂತ್ರರು. ಅವನು ಸರ್ವಶಕ್ತ; ಸರ್ವವ್ಯಾಪ್ತ. ಅವನು ನಿಯಾಮಕ; ಜೀವರು ನಿಯಮ್ಯರು. ಅವನು ಈಶ, ಜೀವರು ದಾಸರು. ಅವನ ಕರುಣೆ ಸಹಾಯಗಳಿಲ್ಲದೆ ಯಾರೂ ಉದ್ಧಾರವಾಗಲಾರರು; ಏನೂ ನಡೆಯಲಾರದು. 'ತೇನ ವಿನಾ ತೃಣಮಪಿ ನಚಲತಿ'. ತನ್ನನ್ನು ನಂಬಿದವರನ್ನು ಅವನೆಂದಿಗೂ ಕೈ ಬಿಡಲಾರ. ಪ್ರಪಂಚ ಸತ್ಯವಾದುದು. ಅದರ ಸೃಷ್ಟಿ ಸ್ಥಿತಿ ಲಯಗಳು ಶ್ರೀಹರಿಯ ಅಧೀನ. ಪರಮಾತ್ಮನ ಮಹಿಮೆ ಅಸಾಧಾರಣ. ಅದನ್ನು ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಚತುರ್ವಿಧ ಪುರುಷಾರ್ಥಗಳನ್ನು ಕೊಡುವ ದಯಾಳು ಆ ಪರಮಾತ್ಮನೇ. ಅವನಿಂದ ಹಿಡಿದು ಸಾಮಾನ್ಯ ಜೀವನವರೆಗೂ ಪರಸ್ಪರ ತಾರತಮ್ಯವುಂಟು. ಭಕ್ತಿ ಜ್ಞಾನ ವೈರಾಗ್ಯಗಳನ್ನು ಗುರಿಯಾಗಿಟ್ಟುಕೊಂಡು ಅಂತಃಕರಣಶುದ್ಧಿಯಿಂದ ಇಂಥ ಭಗವಂತನನ್ನು ಒಲಿಸಿಕೊಳ್ಳಲು ತನ್ನ ಯೋಗ್ಯತಾನುಸಾರ ಮಾನವ ಪ್ರಯತ್ನ ಮಾಡಬೇಕು-ಇದು ದ್ವೈತಮತ ಸಿದ್ಧಾಂತದ ತಿರುಳು; ಹರಿಕಥಾಮೃತಸಾರದ ಪುಟ ಪುಟಗಳಲ್ಲಿಯೂ ಅನೇಕ ಪೌರಾಣಿಕ, ಲೌಕಿಕ ದೃಷ್ಟಾಂತಗಳ ಮೂಲಕ ನಿರೂಪಿತವಾದ ವಿಷಯ.

ಆಧ್ಯಾತ್ಮ ತತ್ವವನ್ನು ಹೇಳುವುದು ಈ ಕೃತಿಯ ಮುಖ್ಯ ಗುರಿಯಾಗಿರುವುದರಿಂದ ಇಲ್ಲಿ ಕಾವ್ಯಾಂಶ ಕಡಿಮೆ. ಆದರೂ ಹರಿಯ ಮಹಿಮೆಯನ್ನು ವರ್ಣಿಸುವಲ್ಲಿ ಕವಿಯ ಪ್ರತಿಭೆ ಕಣ್ತೆರೆದಿದೆ. ಸರಳ ಕನ್ನಡ ಪದಗಳು ಸಾಲುಗಟ್ಟುತ್ತವೆ. ಭಾಮಿನಿ ಷಟ್ಪದಿ ಆಗ ತನ್ನ ಸಹಜ ಸಡಗರದ ನಡಿಗೆಯ ಸೊಬಗನ್ನು ಬೀರುತ್ತದೆ:

ಮಲಗಿ ಪರಮಾದರದಿ ಪಾಡಲು
ಕುಳಿತು ಕೇಳುವ, ಕುಳಿತು ಪಾಡಲು

ನಿಲುವ, ನಿಂತರೆ ನಲಿವ, ನಲಿಹರೆ ಒಲಿವೆ ನಿಮಗೆಂಬ ।
ಸುಲಭನೋ ಹರಿ ತನ್ನವರನರ
ಘಳಿಗೆ ಬಿಟ್ಟಗಲನೊ ರಮಾಧವ
ನೊಲಿಸಲರಿಯದೆ ಬಳಲುವರು ಪಾಮರರು ಭವದೊಳಗ (೨-೫)

ಮನವಿಟ್ಟು ನೆನೆವರಿಗೆ ಬಲುಸುಲಭವಾಗಿ ಒಲಿವ ಹರಿಯ ಕರುಣೆಯನ್ನು ಇದಕ್ಕಿಂತ ಸುಲಭವಾದ ನುಡಿಗಳಲ್ಲಿ ಹೇಳುವುದು ಅಸಾಧ್ಯ. ಇಲ್ಲಿ ಜಗನ್ನಾಥದಾಸರ ಸಂಸ್ಕೃತಪಾಂಡಿತ್ಯರಹಿತ ಸಹಜಕನ್ನಡಶೈಲಿ ಕಣ್ಣಿಗೆ ಕಟ್ಟುತ್ತದೆ.

ಅದೇ ತಾತ್ವಿಕ ವಿಷಯ ಪ್ರತಿಪಾದನೆಗೆ ತೊಡಗಿದರೆ ಪಾರಿಭಾಷಿಕತೆ ಹೆಚ್ಚಾಗಿ ಭಾಷೆ ಗಡುಚಾಗುತ್ತದೆ. ಸಂಸ್ಕೃತ ಪದಗಳ ಬಳಕೆ ಹೆಚ್ಚಾಗಿ ಪದ್ಯದ ಓಟಕ್ಕೆ ತಡೆಯುಂಟಾಗುತ್ತದೆ:

ಚತುರ ವಿಂಶತ್ಯಬ್ದವಸುದೇ
ವತೆಗಳೊಳು ಪ್ರದ್ಯುಮ್ನನಿಪ್ಪನು
ಚತುರ ಚತ್ವಾರಿಂಶತಿಗಳಲಿ ಸಂಕರುಷಣಾಖ್ಯ
ಹುತವಹಾಕ್ಷನೊಳಿಹನು ಮಾಯಾ
ಪತಿಯು ಹದಿನಾರಧಿಕದ್ವಾತ್ರಿಂ
ಶತಿ ವರುಷಗಳಲಿಪ್ಪನಾದಿತ್ಯನೊಳು ಸಿತಕಾಯ (೧೨-೩೫)

ಹೀಗೆ ಎರಡೂ ವಿಧದ ಶೈಲಿಯ ಮಾದರಿಗಳನ್ನು ನಾವು ಹರಿಕಥಾಮೃತಸಾರದಲ್ಲಿ ಕಾಣುತ್ತೇವೆ. ಕವಿಗೆ ಸಂಸ್ಕೃತ-ಕನ್ನಡ ಎರಡೂ ಭಾಷೆಗಳ ಮೇಲೆ ಅಪೂರ್ವ ಪ್ರಭುತ್ವ ಇರುವುದರಿಂದಲೇ ವಸ್ತು-ಭಾವಗಳಿಗೆ ತಕ್ಕ ಇಂಥ ಭಾಷೆಯನ್ನು ಬಳಸುವ ಕಲೆ ಸಾಧ್ಯವಾಗಿದೆ.

'ಧನವ ಸಂರಕ್ಷಿಸುವ ಫಣಿ ತಾನುಣದೆ ಮತ್ತೊಬ್ಬರಿಗೆ
ಕೊಡದನುದಿನದಿ ನೋಡುತ ಸುಖಿಸುವಂದದಿ'
'ತನುವಿನೊಳು ಮಮತೆಯ ಬಿಟ್ಟಹನವನೆ ಮಹಯೋಗಿ'
'ನದಿಯ ಜಲ ನದಿಗೆರೆವ ತೆರದಂದಲಿ'
'ಕಾಗೆ ಗುಬ್ಬಿಗಳರಿಯಬಲ್ಲವೆ ನದಿಯ ಜಲಸ್ಥಿತಿಯ'
'ತೂಲರಾಶಿಯೊಳನಲ ಪೊಕ್ಕಂತೆ'
'ಸೂಜಿಯ ಕರದಲಿ ಪಿಡಿದು ಸಮರವ ನಾ ಜಯಿಸುವೆನೆಂಬ ನರನಂತೆ'
'ದೀಪ ಕರದಲಿ ಪಿಡಿದು ಕಾಣದೆ ಕೂಪದೊಳು ಬಿದ್ದಂತೆ'

'ಆಸೆಗೊಳಗಾದವನು ಜನರಿಗೆ ದಾಸನೆನಿಸುವನು'
'ಸಾಲಮಾಡಿ ಸಕ್ಕರೆಯ ಮೆದ್ದ ತೆರನಂತೆ'
'ಕ್ಷೋಣಿಪತಿ ಸುತನೆನಿಸಿ ಕೈ ದುಗ್ಗಾಣಿಗೊಡ್ಡುವ ತೆರದಿ'

ಎಂಬಂಥ ಅನೇಕ ಜಾಣ್ನುಡಿಗಳು ಈ ಕೃತಿಯ ತುಂಬೆಲ್ಲ ಚೆಲ್ಲವರಿದು ಕವಿಯ ಲೋಕಾನುಭವವನ್ನು ಪ್ರಕಟಪಡಿಸುತ್ತವೆ; ಪದ್ಯಕ್ಕೆ ಹೊಸ ಸತ್ವ-ಸೌಂದರ್ಯಗಳನ್ನು ತಂದುಕೊಟ್ಟಿವೆ. ಹೀಗಿದ್ದೂ ಸಾಹಿತ್ಯಿಕ ಮೌಲ್ಯ ಈ ಕೃತಿಗೆ ಅಷ್ಟಾಗಿ ಇಲ್ಲ; ಆದರೆ ತಾತ್ವಿಕ ಮೌಲ್ಯಕ್ಕೇನೂ ಕೊರತೆಯಿಲ್ಲ.

ಹರಿಕಥಾಮೃತಸಾರವನ್ನು ಕುರಿತು ಜಗನ್ನಾಥದಾಸರ ಶಿಷ್ಯರು-'ಸಾರವೆಂದರೆ ಹರಿಕಥಾಮೃತಸಾರ' 'ಹರಿಕಥಾಮೃತಸಾರ ನವರಸಭರಿತ ಗುಣಗಂಭೀರ ರತ್ನಾಕರ, ರುಚಿರ ಶೃಂಗಾರ ಸಾಲಂಕಾರ ವಿಸ್ತಾರ, ಸರಸ ನರ ಕಂಠೀರವಾಚಾರ್ಯರ ಜನಿತ ಸುಕುಮಾರ, ಸಾತ್ವಿಕರಿಗೆ ಪರಮೋದಾರ' (ಶ್ರೀದವಿಠಲಾಂಕಿತರು); 'ಮಹಾದ್ಭುತ ಕಾವ್ಯ' 'ಪರಮ ತತ್ವಸಾರ, ಯೋಗೀಶ್ವರರ ಮನಕೆ ವಿಹಾರ, ಸಜ್ಜನ ನೆರವಿಗಳ ಪ್ರೀತಿಗೊಪ್ಪಿತಿಪ ಶೃಂಗಾರಲಂಕಾರ, ಶರಣಜನ ಮಂದಾರ' (ಮನೋಹರವಿಠಲದಾಸರು)-ಎಂದು ಬಣ್ಣಿಸಿದ್ದಾರೆ. ವಿಮರ್ಶಕರು ಇದನ್ನು 'ಮುಕ್ತಿ ಮಾರ್ಗದರ್ಶಿನಿ' 'ಮೋಕ್ಷಶಾಸ್ತ್ರ' 'ದ್ವೈತಮತ ತತ್ವ ಕೈಪಿಡಿ' 'ದ್ವೈತ ಮತತತ್ವ ವಿಶ್ವಕೋಶ' ಎಂದು ಮುಂತಾಗಿ ಪ್ರಶಂಸಿದ್ದಾರೆ. ಆದರೆ ಇಲ್ಲಿ ನವರಸಗಳಿಲ್ಲ. ಭಕ್ತಿರಸಕ್ಕೆ ಮಾತ್ರ ಪ್ರಾಧಾನ್ಯ. ಅಲಂಕಾರಗಳಿದ್ದರೂ ಕಡಿಮೆ. 'ಮಹಾದ್ಭುತ ಕಾವ್ಯ' ಎಂಬುದು ಅತಿಶಯೋಕ್ತಿಯ ನುಡಿ. ಕವಿಯೇ ಹೇಳಿಕೊಂಡಂತೆ 'ಶುದ್ಧಕಾವ್ಯವಿದಲ್ಲ'. ಆದರೆ 'ತ್ರಿಗುಣವರ್ಜಿತನಮಲ ಗುಣಗಳ ಪೊಗಳಿ ಹಿಗ್ಗುವ ಭಾಗವತರಿಗೆ ಮಿಗೆ ಭಕುತಿ ಸುಜ್ಞಾನ ಸುಖವಿತ್ತಪರ ರಕ್ಷಿಸುವ' ಮತತತ್ವ ಕಾವ್ಯ. ಇದು ದ್ವೈತತತ್ವನಿಷ್ಠ ವೈಷ್ಣವರಿಗೆ ಅತ್ಯಂತ ಪೂಜ್ಯ ಹಾಗೂ ಪವಿತ್ರ ಗ್ರಂಥವೆನಿಸಿದ್ದರೂ ಸರ್ವರಿಗೂ ಸುಲಭವೇದ್ಯವಲ್ಲ. ಇಲ್ಲಿ ಹೇಳಿದ ತತ್ವಗಳ ಇಂಗಿತವನ್ನು ಅರಿಯಲು ತರ್ಕ, ವೇದಾಂತ, ಸಾಂಖ್ಯ, ಯೋಗ, ಮೀಮಾಂಸೆ ಮೊದಲಾದ ತತ್ವ ಶಾಸ್ತ್ರಗಳ ಅಧ್ಯಯನ ಬೇಕಾಗುತ್ತದೆ. ಅದನ್ನರಿತು ಸರ್ವರಿಗೂ ಇದರ ತತ್ವ-ಮಹತ್ವಗಳು ತಿಳಿಯಲೆಂದು ಅನೇಕ ಜನ ವಿದ್ವಾಂಸರು ಇದಕ್ಕೆ ಟೀಕೆ, ಟಿಪ್ಪಣಿ, ವ್ಯಾಖ್ಯಾನಗಳನ್ನು ಬರೆದಿದ್ದಾರೆ. ತಾಮ್ರಪರ್ಣಿ ಮತ್ತು ಜಂಬುಕಂಡಿ ಆಚಾರ್ಯರು ಇದಕ್ಕೆ ಸಂಸ್ಕೃತದಲ್ಲಿ ವಿಸ್ತಾರವಾದ ವ್ಯಾಖ್ಯಾನ ರಚಿಸಿ, ಕನ್ನಡೇತರ ಸಂಸ್ಕೃತ ಪಂಡಿತರಿಗೆ ಇದರ ವೈಶಿಷ್ಟ್ಯ ವೇದ್ಯವಾಗುವಂತೆ ಮಾಡಿದ್ದಾರೆ. ತೆಲುಗು, ತಮಿಳು, ಮರಾಠಿ ಭಾಷೆಗಳಲ್ಲಿ ಅನುವಾದವಾಗಿರುವುದು ಈ ಕೃತಿಯ ಜನಪ್ರಿಯತೆಗೆ ಸಾಕ್ಷಿಯೆನಿಸಿದೆ.

ಒಟ್ಟಿನಲ್ಲಿ ಜಗನ್ನಾಥದಾಸರು 'ಸಂಪ್ರದಾಯನಿಷ್ಠೆಯೊಡನೆ ವಿಶಾಲ ಮನೋಭಾವ, ಸಂಸ್ಕೃತ ಪಾಂಡಿತ್ಯದೊಡನೆ ಕನ್ನಡ ಶ್ರದ್ಧೆ, ಅಪರೋಕ್ಷಜ್ಞಾನದೊಡನೆ ಭಗವದ್ಭಕ್ತಿಯನ್ನು ಮೈಗೂಡಿಸಿಕೊಂಡು, ಮತತತ್ತ್ವಗಳನ್ನು ಸಮಗ್ರವಾಗಿ ತಿಳಿದುಕೊಂಡು, ಅವನ್ನು ಆಚರಣೆಯಲ್ಲಿಯೂ ತಂದ ಒಬ್ಬ ವಿಶಾಲಪ್ರದಾಯದ ಉಪಯೋಗಿಗಳಾಗಿದ್ದಾರೆ. ಹರಿಕಥಾಮೃತಸಾರ ಅವರ ಸತ್ಯಾನುಭವವನ್ನು ಪ್ರಕಟಿಸುವ ಒಂದು ಸತ್ಕೃತಿಯೆನಿಸಿದೆ.

ಭೂ ಶಾಖ ವಿದ್ಯುತ್‌ಶಕ್ತಿ

★ ಶ್ರೀ ಎಂ. ಮುನಿಸ್ವಾಮಯ್ಯ

ಹಿಂದಿನಿಂದಲೂ ಭೂಮಿಯ ಒಡಲಾಳದಲ್ಲಿ ಅಡಕವಾಗಿರುವ ಶಾಖಶಕ್ತಿಯಿಂದ ಜನ್ಮಿಸಿದ ಬಿಸಿ ನೀರಿನ ಚಿಲುಮೆಗಳಲ್ಲಿ ದಟ್ಟವಾಗಿ ಮೋಡದಂತೇಳುವ ಬಿಸಿ ಉಗಿ ಮತ್ತು ಕೊತಕೊತನೆ ಕುದಿಯುವ ಕೆಸರಿನ ಹೊಂಡಗಳು ಪ್ರವಾಸಿಗರನ್ನು ವಿಚಿತ್ರ ರೀತಿಯಲ್ಲಿ ಆಕರ್ಷಿಸುತ್ತ ಬಂದಿವೆ. ಆದರೆ ಮನುಷ್ಯನಿಗೆ ಅವಶ್ಯಕತೆಗಳು ಹೆಚ್ಚಾದಾಗ, ಈ ಭೂ ಶಾಖ ವಿದ್ಯುತ್ ಶಕ್ತಿಯನ್ನು ಹೇಗೆ ಉತ್ಪಾದಿಸಬೇಕು? ಯಾವ ಪ್ರದೇಶದಲ್ಲಿ ಇದರ ಬಳಕೆ ಹೆಚ್ಚಾಗಿದೆ? ಇದರ ಉಪಯೋಗವನ್ನು ಹೇಗೆ ಪಡೆಯಬೇಕು ಎಂಬ ಅರಿವು ಬಂದಿದ್ದು ಹಲವು ದಶಕಗಳಿಂದೀಚೆಗೆ. ಪ್ರಥಮದಲ್ಲಿ ಹಂಗೇರಿ ದೇಶದ ವಿಜ್ಞಾನಿಯಾದ "ಜಸಲಾರ್ಡ ಜೈಲ್ಕಿಸ್ಕಿಯು" ಬಿಸಿ ನೀರಿನ ಬುಗ್ಗೆಗಳ ಸ್ಥಳಗಳಲ್ಲಿ ಕೊಳವೆ ಭಾವಿಗಳನ್ನು ಕೊರೆದು ಬಿಸಿ ನೀರನ್ನು ಸಂಪಾದಿಸಿ ಇಡೀ ನಗರವನ್ನು ಬೆಚ್ಚಗಿರಿಸಿ ಕಲ್ಲಿದ್ದಲಿನ ಉಳಿತಾಯವನ್ನು ಮಾಡಬಹುದೆಂದು ೧೯೧೬ ರಲ್ಲಿ ತಿಳಿಸಿದ. ಆದರೆ ಆಗ ಅವನ ಮಾತು ಯಾರೂ ಕೇಳಲಿಲ್ಲ. ಅನಂತರ ೨೦ ವರ್ಷಗಳು ಕಳೆದ ಬಳಿಕ ಐಸಲ್ಯಾಂಡ್ ದೇಶದವರು ಅವನು ಹೇಳಿದ ಪ್ರಯೋಗವನ್ನು ಮಾಡಿ ಅದರ ಲಾಭವನ್ನು ಪಡೆಯತೊಡಗಿದರು.

ಎಲ್ಲರಿಗೂ ತಿಳಿದಿರುವ ಹಾಗೆ, ಸಾಮಾನ್ಯವಾಗಿ ಭೂಮಿಯ ತೊಗಟೆಯ ಮೇಲ್ಭಾಗದಿಂದ ೧೦೦ ಅಡಿ ಆಳಕ್ಕೆ ಇಳಿದಾಗ ಉಷ್ಣತೆಯು ೧ ಡಿಗ್ರಿ ಸೆಂಟಿಗ್ರೇಡ್ ಏರುತ್ತಾಹೋಗುತ್ತದೆ. ಕೆಲವು ಪ್ರದೇಶದಲ್ಲಿ ಸಾಮಾನ್ಯವಾಗಿರುವ ಉಷ್ಣತೆಗಿಂತ ೧೦೦ ಪಟ್ಟು ಹೆಚ್ಚಿರುವುದುಂಟು. ಅಂತಹ ಭೂ ಶಾಖ ವಿದ್ಯುತ್ ಪ್ರದೇಶವು ಶೇಕಡಾ ೯೦ ರಷ್ಟು ಭಾಗ ಪ್ರಪಂಚದಲ್ಲಿರುವ ಜ್ವಾಲಾಮುಖಿ ಮತ್ತು ಭೂಕಂಪ ವಲಯದ ಪ್ರದೇಶಗಳಲ್ಲಿ ಹೆಚ್ಚಾಗಿದೆಯೆಂದು ಭೂ ಶಾಖ ವಿದ್ಯುತ್ ಅನ್ವೇಷಣಾ ಸಮೀಕ್ಷೆಯಿಂದ ಕಂಡುಬಂದಿದೆ. ಈ ವಲಯಗಳಿಗೆ "ಅಗ್ನಿವಲಯವೆಂದು ಕರೆಯುತ್ತಾರೆ. ಇಂತಹ ಅಗ್ನಿ ವಲಯಗಳು ಫೆಸಿಫಿಕ್ ಸಾಗರದ ತೀರಪ್ರದೇಶ ಮತ್ತು ಅಟ್ಲಾಂಟಿಕ್ ಸಾಗರದ ಮಧ್ಯಭಾಗದಲ್ಲಿ ಹೆಚ್ಚಾಗಿ ಕಂಡುಬಂದಿವೆ. ಅಲ್ಲದೆ ಅಟ್ಲಾಂಟಿಕ್ ಸಾಗರದ ಬೆಂಕಿವಲಯದ ಕವಲೊಂದು ಮೆಡಿಟರೆನಿಯನ್ ಸಮುದ್ರದ ಮುಖಾಂತರ ಟಿಬೇಟಿನ ಮಧ್ಯ ಪೂರ್ವದವರೆಗೂ ನುಗ್ಗಿದೆ. ಇದಲ್ಲದೆ ಮತ್ತೊಂದು ಅಗ್ನಿ ವಲಯವು ಗ್ರೇಟ್ ಆಫ್ರಿಕಾನ್ ಪರ್ವತಶ್ರೇಣಿ ಮತ್ತು ಕೆಂಪು ಸಮುದ್ರದ ದಿಕ್ಕಿನ ಕಡೆಗೆ ಹಿಂಬಾಲಿಸಿದೆ. ಹವಾಯ್ ದ್ವೀಪದಲ್ಲಿ ಕಂಡು ಬರುವ ಒಂಟಿ ಅಗ್ನಿ ವಲಯವನ್ನು ಬಿಟ್ಟರೆ, ಇನ್ನುಳಿದ ಅಗ್ನಿ ವಲಯಗಳು ಚಿತ್ರದಲ್ಲಿ ತೋರಿಸಿದಂತೆ ಒಂದಕ್ಕೊಂದು ಪರಸ್ಪರ ಸಂಬಂಧ ಹೊಂದಿವೆ.


ಅಗ್ನಿವಲಯ:
ಜ್ವಾಲಾಮುಖಿಗಳು ಮತ್ತು ಭೂ ಕಂಪದ ವಲಯಗಳು ಒಂದಕ್ಕೊಂದು ಹೊಂದಿಕೊಂಡಿರುವುದು

ಕೆಲವು ಭೂ ಶಾಖ ವಿದ್ಯುತ್ ಪ್ರದೇಶಗಳು ಜ್ವಾಲಾಮುಖಿ ಮತ್ತು ಭೂ ಕಂಪನ ಪ್ರದೇಶಗಳ ವಲಯದಿಂದ ದೂರದಲ್ಲಿರುವುದು ಕಂಡುಬಂದಿದೆ. ಉದಾ : ಇಟಲಿ ದೇಶದ ಲಾರ್ಡ್‌ರೆಲ್ಲೋ ಮತ್ತು ಕ್ಯಾಲಿಫೋರ್ನಿಯಾದ ಬಿಸಿ ನೀರಿನ ಬುಗ್ಗೆಗಳು ಸಾಕಷ್ಟು ಅಗ್ನಿ ಪರ್ವತ ವಲಯದಿಂದ ದೂರದಲ್ಲಿವೆ. ಅಲ್ಲದೆ ಬಿಸಿ ನೀರಿನ ಬುಗ್ಗೆಗಳು ಭೂ ಕಂಪನ ಪ್ರದೇಶದ ವಲಯದಿಂದ ದೂರವಿರುವ ಕೀನ್ಯಾ, ಹಂಗೇರಿ ಮತ್ತು ಹಿಂದಿನ ಸೋವಿಯತ್ ಒಕ್ಕೂಟ ರಾಜ್ಯಗಳಲ್ಲಿ ಹಾಗೂ ಭಾರತದ ಹಿಮಾಲಯ ಪರ್ವತ ಶ್ರೇಣಿಯಲ್ಲಿ ಕಂಡುಬಂದಿವೆ.

ಭೂಮಿಯಲ್ಲಿರುವ ಉಷ್ಣತೆ (ಶಾಖವು) ಹೇಗೆ ಉತ್ಪತ್ತಿಯಾಗುತ್ತದೆಂಬುದಕ್ಕೆ ತತ್ವಾಧಾರಿತ ಸಿದ್ಧಾಂತಗಳು ಮತ್ತು ಆಕೃತಿಗಳು ರೂಪಿತಗೊಂಡಿದ್ದರೂ, ಭೂ ಗರ್ಭದಿಂದ ಉಷ್ಣತೆಯನ್ನು ಹೊರದಬ್ಬುವಿಕೆಯ ಅಗೋಚರ ಶಕ್ತಿಯ ಬಗ್ಗೆ ಇನ್ನೂ ಸಿದ್ಧಾಂತಗಳು ಒಗಟಾಗಿಯೇ ಉಳಿದಿವೆ. ಆದರೂ ಭೂ ವಿಜ್ಞಾನಿಗಳ ನಂಬಿಕೆಯ ಪ್ರಕಾರ ಭೂಶಾಖವು ಭೂಕವಚದ ಒಳಸ್ಥರಗಳಲ್ಲಿರುವ **''ವಿದ್ಯುತ್ ವಿಕರಣ ಕ್ರಿಯಾಶಕ್ತಿಯ''** ಮೂಲದಿಂದ ಉಂಟಾಗುತ್ತದೆಂದು ಹೇಳಬಹುದು. ಇದಕ್ಕೆ ಸಾಕ್ಷ್ಯಾಧಾರವಾಗಿ ಭೂ ಕಂಪನದಿಂದ **''ಚಲಿಸುವ ಭೂ ಖಂಡಗಳ''** ಸಿದ್ಧಾಂತವು ತೀರಾ ಸಮೀಪವಾಗಿದೆ. ಭೂಮಿಯು ನಿರಂತರವಾಗಿ ಕ್ರಿಯಾಶೀಲವಾಗಿದ್ದರೂ ನಮಗೆ ಅದರ ಒಡಲಾಳದಲ್ಲಿ ನಡೆಯುವ ಕಾರ್ಯ ಚಟುವಟಿಕೆಗಳು ನೇರವಾಗಿ ಕಾಣುವುದಿಲ್ಲ. ಭೂಮಿಯ ಒಡಲಾಳದಲ್ಲಿ ವಿದ್ಯುತ್ ವಿಕಿರಣ ಕ್ರಿಯಾ ಶಕ್ತಿಯಿಂದ ಉತ್ಪತ್ತಿಯಾದ ಆಂತರಿಕ ಉಷ್ಣತೆ ಮತ್ತು ಒತ್ತಡವು ಭೂಮಿಯ ಹೊರ ತೊಗಟೆಯ ಶಿಲಾಸ್ತರಗಳಲ್ಲಿ ಬಿರುಕುಗಳನ್ನುಂಟುಮಾಡಿ ಅವುಗಳ ಮೂಲಕ ಶಾಖವನ್ನು ಹೊರಚಿಮ್ಮಿಸಿ ಬಿಸಿ ನೀರಿನ ಬುಗ್ಗೆ, ಜ್ವಾಲಾಮುಖಿ, ಗೈಸರುಗಳನ್ನುಂಟುಮಾಡುತ್ತದೆ. ಸಾಗರಗಳಡಿಯಲ್ಲಿ ಈ ಶಿಲಾಸ್ತರಗಳ ಬಿರುಕುಗಳ ಮೂಲಕ ಸಾಗರದ ನೀರು ಜಿನುಗಿ ಕೆಳಕ್ಕೆ ಸರಿದಾಗ ಭೂಮಿಯ ಅಂತರಾಳದಲ್ಲಿ ತುಂಬಿರುವ ಮ್ಯಾಗ್ಮಾ ಮತ್ತು ಲಾವಾರಸಗಳ ಶಾಖದಿಂದ ಒಳಗಿನ ಒತ್ತಡ ಹೆಚ್ಚಾದಾಗ ಭೂಮಿಯ ಹೊರ ತೊಗಟೆಯ ಶಿಲಾಸ್ತರಗಳ ಬಿರುಕುಗಳ ಮೂಲಕ ಶಿಲಾಪಾಕವು ಉಕ್ಕಿ ಬರುತ್ತದೆ. ಜ್ವಾಲಾಮುಖಿಗಳಲ್ಲಿ ಶಿಲಾಪಾಕದ ಜೊತೆಗೆ ತಪ್ಪಿಸ್ಥಿಯಂತೆ ಉಗುಳುವ ಬೆಂಕಿಯ ಜ್ವಾಲೆಗಳು, ದ್ರವಪದಾರ್ಥಗಳು ಮತ್ತು ಬಿಸಿ ಉಗಿಯು ವಿಶೇಷವಾಗಿರುತ್ತದೆ. ಭೂಗರ್ಭದಿಂದ ಕೆಲವು ಬುಗ್ಗೆಗಳ ಬಿಸಿ ನೀರು ಮತ್ತು ಬಿಸಿ ಉಗಿಯನ್ನು ಹೊರ ಸೂಸಿದರೆ, ಕೆಲವು ಬುಗ್ಗೆಗಳಲ್ಲಿ ಬೆಲ್ಲದ ಪಾಕದಂತಿರುವ ಕೆಸರಿನ ಬಗ್ಗದವನ್ನು ಕುಕ್ಕುತ್ತಿವೆ. ಹೀಗೆ ಹೊರ ಬರುವ ಬಿಸಿ ನೀರಿನಲ್ಲಿ ಆಸಿಡ್ ಹೊಂದಿದ್ದರೆ ಹರಿದು ಬರುವ ದಾರಿಯಲ್ಲಿ ಸುಣ್ಣದ ಶಿಲೆ ಸಿಕ್ಕಿದರೆ ಅದನ್ನು ಕರಗಿಸಿ ಹತ್ತಾರು ವರ್ಣಗಳಲ್ಲಿ ಬರುವಂತೆ

ಮಾರ್ಪಡಿಸುತ್ತದೆ. ಗ್ರಾನೈಟ್ ಶಿಲೆಯು ಸಿಕ್ಕರೆ ಶುಭ್ರ ಸ್ಫಟಿಕ ಜಲ ಸೂಸುವಂತೆ ಮಾಡುತ್ತದೆ. ಅಲ್ಲದಿದ್ದರೆ ಪ್ರೆಷರ್ ಕುಕ್ಕರಲ್ಲಿ ಉಗಿ ಬಂದ ಹಾಗೆ ಬಿಸಿ ಉಗಿಯನ್ನು ಚಿಮ್ಮುತ್ತದೆ.

ಭೂ ಶಾಖ ಅನ್ವೇಷಣೆಯಲ್ಲಿ ಭೂ ವಿಜ್ಞಾನಿಯ ಪಾತ್ರ ಬಹಳ ಮುಖ್ಯ ವಾದುದು. ಏಕೆಂದರೆ ಇವರಿಗೆ ಭೂ ಭೌತಶಾಸ್ತ್ರ ಭೂ ರಸಾಯನಿಕ ಶಾಸ್ತ್ರ ಮತ್ತು ಜಲ ವಿಜ್ಞಾನ ಶಾಸ್ತ್ರಗಳ. ಜ್ಞಾನದಲ್ಲಿ ಅಪಾರ ಅನುಭವ ಇರುವುದರಿಂದ ಇವರ ನಿರ್ದಿಷ್ಟವಾದ ತೀರ್ಮಾನವೇ ಅಂತಿಮವಾಗುತ್ತದೆ. ಆದ್ದರಿಂದ ಭೂ ಶಾಖಾನ್ವೇಷಣಾ ಕಾರ್ಯದಲ್ಲಿ ಭೂ ವೈಜ್ಞಾನಿಕ ಸಮೀಕ್ಷೆಯ ನಕಾಶೆ ತಯಾರಿಸುವ ಕಲೆ ಅತಿ ಮುಖ್ಯವಾದುದು. ಏಕೆಂದರೆ ಅವರು ಭೂ ಶಾಖ ವಿದ್ಯುತ್ ನಿಕ್ಷೇಪಗಳನ್ನು ಗುರುತಿಸಿ ಅದನ್ನು ಲಾಭದಾಯಕವಗಿ ಉತ್ಪನ್ನಮಾಡಬೇಕು. ಇಂತಹ ನಿಕ್ಷೇಪಗಳನ್ನು ಸಮೀಕ್ಷೆ ಮಾಡುವಾಗ ಭೂ ವಿಜ್ಞಾನಿಗಳು ಈ ಕೆಳಗಿನ ಅಂಶಗಳನ್ನು ಮುಖ್ಯವಾಗಿ ಗಮನದಲ್ಲಿಡಬೇಕು.

೧. ಪ್ರಾಥಮಿಕ ಸ್ಥಳ ಸಮೀಕ್ಷೆಯಿಂದ ಭೂ ಶಾಖ ವಿದ್ಯುತ್ ಸಂಪತ್ತಿನ ನಿಕ್ಷೇಪವನ್ನು ಆಯ್ಕೆ ಮಾಡುವಾಗ ಸವಿಸ್ತಾರವಾದ ಅನ್ವೇಷಣೆಗೆ ಉತ್ತಮವಾದ ಭವಿಷ್ಯವಿರಬೇಕು.

೨. ಉಗಿಯ ಕೊಳವೆ ಭಾವಿಗಳನ್ನು ತೋಡು ಬೇಕಾದರೆ ಯೋಗ್ಯವಾದ ಸ್ಥಳಾಯ್ಕೆ ಮಾಡಲು ಇದಕ್ಕೆ ಸಂಬಂಧವಾದ ಭೂ ವಿಜ್ಞಾನ ಅಂತರ್ಜಲ ವಿಜ್ಞಾನ ಭೂ ರಸಾಯನ ವಿಜ್ಞಾನ ಆಧಾರದ ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಬೇಕು.

೩. ಭೂ ಶಾಖ ನಿಕ್ಷೇಪಗಳಿರುವ ಸ್ಥಳಗಳಲ್ಲಿ ಕೊಳವೆ ಭಾವಿಗಳನ್ನು ೧೦೦ ಮೀ ನಿಂದ ೩೦೦ ಮೀ ಆಳದವರೆಗೆ ಕೊರೆಯಬೇಕು. ಕೆಲವು ಕಡೆ ೯೦೦೦ ಮೀ. ಆಳದವರೆಗೆ ಕೊರೆಯಬೇಕಾಗುತ್ತದೆ.

೪. ಉಗಿಯ ಕೊಳವೆ ಭಾವಿಗಳಲ್ಲಿ ಸಂಬಂಧಪಟ್ಟ ಆಧಾರಿತ ಮಾದರಿಗಳನ್ನು ಸಂಗ್ರಹಿಸಿ, ವಿಶ್ಲೇಷಿಸಿ, ನಿಕ್ಷೇಪದ ಗುಣಮಟ್ಟ ಮತ್ತು ಅದರ ಪ್ರಮಾಣವನ್ನು ನಿರ್ಧರಿಸಬೇಕು.

ಭೂಶಾಖ ನಿಕ್ಷೇಪಗಳ ವಿವಿಧ ರೂಪಗಳು

ಪೃಥ್ವಿಯಲ್ಲಿ ಭೂ ಶಾಖ ನಿಕ್ಷೇಪಗಳನ್ನು ಅವುಗಳ ಲಕ್ಷಣ ಮತ್ತು ಕಾರ್ಯ ವರ್ತನೆ ಮೇರೆಗೆ ಮೂರು ಗುಂಪಾಗಿ ವಿಂಗಡಿಸಿದ್ದಾರೆ.

ಅ) ಬಿಸಿ ನೀರಿನ ಬುಗ್ಗೆ ಪ್ರದೇಶಗಳು

ಬಿಸಿ ನೀರಿನ ಬುಗ್ಗೆಗಳಲ್ಲಿ ಸಾಮಾನ್ಯವಾಗಿ ನೀರಿನ ಉಷ್ಣತೆಯು ೫೦ ಡಿಗ್ರಿಯಿಂದ ೧೦೦

ಡಿಗ್ರಿ ಸೆಂಟಿಗ್ರೇಡವರೆಗೆ ಇರುತ್ತದೆ. ಇದರ ಆಳ ೧೮೦೦ ಮೀಟರಿನಿಂದ ೩,೦೦೦ ಮೀಟರ್ ಆಳದವರೆವಿಗೂ ಇದ್ದರೆ, ಕೆಲವು ಪ್ರದೇಶಗಳಲ್ಲಿ ಅದರ ಎರಡರಷ್ಟು ಆಳ ಇರಬಹುದು. ಈ ಬಿಸಿ ನೀರಿನ ಬುಗ್ಗೆಗಳು ಹಂಗೇರಿಯ ತಗ್ಗಾದ ಪ್ರದೇಶ, ಹಿಂದಿನ ಸೋವಿಯತ್ ರಾಜ್ಯಗಳ ಒಕ್ಕೂಟ ಮತ್ತು ಫ್ರಾನ್ಸ್ ದೇಶದ ದಕ್ಷಿಣದ ಪ್ರದೇಶಗಳಲ್ಲಿ ಈ ಬುಗ್ಗೆಗಳಿಂದ ಶಾಖ ವಿದ್ಯುತ್‌ನ್ನು ಸಂಪಾದಿಸಿ ಮನೆಗಳನ್ನು ಬೆಚ್ಚಗಿಡಲು ವ್ಯವಸಾಯಕ್ಕೆ ಮತ್ತು ಅನೇಕ ವಿಧವಾದ ಕೈಗಾರಿಕೆಗಳಿಗೆ ಉಪಯೋಗಿಸಿಕೊಂಡಿದ್ದಾರೆ.

ಆ) ತೇವದ ಉಗಿ ಬುಗ್ಗೆ ಪ್ರದೇಶಗಳು

ತೇವದ ಉಗಿ ಬುಗ್ಗೆ ಪ್ರದೇಶಗಳಲ್ಲಿ ಉಗಿಯ ಉಷ್ಣತೆಯ ೧೦೦ ಡಿಗ್ರಿ ಸೆಂಟಿಗ್ರೇಡಗಿಂತಾ ಹೆಚ್ಚಾಗಿರುತ್ತದೆ. ಬಿಸಿ ನೀರು ಬಾವಿಯ ಮೇಲಕ್ಕೆ ಬರುತ್ತಲೇ ಒತ್ತಡವು ಕುಗ್ಗಿ ನೀರಿನ ಸ್ವಲ್ಪ ಭಾಗ ಹಬೆಯಾಗಿ ಮಾರ್ಪಾಡಾಗುತ್ತದೆ. ನೀರಿನ ಅಂಶ ಮತ್ತು ಉಗಿಯ ಅಂಶವು ಸಾಮಾನ್ಯವಾಗಿ ೧:೪ ಇರುತ್ತದೆ. ಕೆಲವು ಕಡೆ ೧:೧೦ ಇರುತ್ತದೆ. ಹಾಗೂ ಇದರ ಉಷ್ಣತೆಯು ಬೇರೆ ಬೇರೆಯಾಗಿಯು ಇರುತ್ತದೆ. ಈ ತರಹದ ಉಗಿ ಬುಗ್ಗೆಗಳು ಶಾಖೋತ್ಪತ್ತಿಯನ್ನು ಮಾಡಲು ಹೆಚ್ಚು ಉಪಯುಕ್ತವಾಗಿವೆ. ಈ ರೀತಿಯ ಉಗಿ ಬುಗ್ಗೆಗಳು ಸಾಮಾನ್ಯವಾಗಿ ನ್ಯೂಜಿಲೆಂಡ್, ಮೆಕ್ಸಿಕೋ, ಐಸ್‌ಲ್ಯಾಂಡ್ ಅಮೇರಿಕಾ ಸಂಯುಕ್ತ ಸಂಸ್ಥಾನಗಳು ಮತ್ತು ಜಪಾನ ದೇಶಗಳಲ್ಲಿ ಕಾಣಬಹುದು.

ಇ) ಒಣ ಉಗಿ ಬುಗ್ಗೆ ಪ್ರದೇಶಗಳು

ಭೂ ವಿಜ್ಞಾನದ ಪ್ರಕಾರ ಒಣ ಮತ್ತು ತೇವ ಉಗಿ ಬುಗ್ಗೆಗಳ ಹುಟ್ಟುವಿಕೆಯ ಮೂಲ ಒಂದೇ ಆಗಿರುತ್ತದೆ. ಕೆಲವು ಕೊಳವೆ ಬಾವಿಗಳು ಮೊದಲು ತೇವಾಂಶದ ಉಗಿಯನ್ನು ಚಿಮ್ಮಿದ ನಂತರ ಒಣ ಉಗಿಯನ್ನು ಚಿಮ್ಮುತ್ತವೆ. ಒಣ ಉಗಿಯ ಉಷ್ಣತೆಯು ೫೦ ಡಿಗ್ರಿ ಸೆಂಟಿಗ್ರೇಡನಿಂದ ೧೫೦ ಡಿಗ್ರಿ ಸೆಂಟಿಗ್ರೇಡವರೆವಿಗೂ ಇರುತ್ತದೆ. ಇಂತಹ ಬುಗ್ಗೆಗಳು ಶಾಖೋತ್ಪತ್ತಿಯನ್ನು ಮಾಡಲು ಬಹಳ ಉಪಯುಕ್ತವಾಗಿವೆ. ಈ ರೀತಿಯ ಬುಗ್ಗೆಗಳನ್ನು ಕ್ಯಾಲಿಫೋರ್ನಿಯಾ ಜಪಾನ್ ಮತ್ತು ಇಟಲಿ ದೇಶಗಳಲ್ಲಿ ಕಾಣಬಹುದು.

ಕೊಳವೆ ಬಾವಿಗಳನ್ನು ಕೊರೆದು ಭೂ ಶಾಖ ವಿದ್ಯುತ್ ನಿಕ್ಷೇಪವಗಳ ಪ್ರಮಾಣವನ್ನು ಗುರುತಿಸುವಿಕೆ:

ಪ್ರಥಮ ಮಹಾಯುದ್ಧದ ಬಳಿಕ, ಪ್ರಪಂಚದಲ್ಲಿ ಎಣ್ಣೆಗಾಗಿ ಭೂಮಿಯಲ್ಲಿ ಕೊಳವೆ ಬಾವಿಗಳನ್ನು ಕೊರೆಯಲು ಉತ್ಕೃಷ್ಟ ರಿಗ್‌ಗಳನ್ನು ತಯಾರಿಸಿದ್ದರಿಂದ, ಆಳವಾಗಿ ಉಗಿ ಬಾವಿಗಳನ್ನು ಕೊರೆಯುವುದಕ್ಕೆ ಇದೇ ಸಾಧನಗಳನ್ನು ಬಳಸಲಾಯಿತು. ೧೯೩೧ರಲ್ಲಿ ಪ್ರಥಮ ಬಾರಿಗೆ ೮೭೭ಅಡಿ ಆಳಕ್ಕೊಂದು ಕೊಳವೆಯನ್ನು ಕೊರೆದ ಮರುದಿನವೇ ಅದರಿಂದ ಭಯಂಕರ ಸ್ಫೋಟವುಂಟಾಗಿ ಉಗಿಯು ಆರ್ಭಟಿಸುತ್ತ ಕೊಳವೆ ಬಾವಿಯಿಂದ

ಚಿಮ್ಮಿತು. ಇಂದಿಗೂ ಇದರಿಂದ ಪ್ರತಿ ತಾಸಿಗೆ ೨೩೦ ಟನ್ ಪ್ರಮಾಣದಷ್ಟು ಉಗಿ ಶಾಖೋತ್ಪನ್ನಗಳನ್ನು ಉತ್ಪಾದಿಸುತ್ತಿದ್ದಾರೆ. ಎರಡನೆಯ ಮಹಾಯುದ್ಧದ ಸಮಯದಲ್ಲಿ ಲಾರ್ಡ್‌ರೆಲ್ಲೋ ಪ್ರದೇಶದಲ್ಲಿ ಇಂತಹ ೧೪೦ ಬಾವಿಗಳನ್ನು ಕೊರೆದು ಅವುಗಳಿಂದ ಪ್ರತಿ ತಾಸಿಗೆ ೨೦೦೦ ಟನ್ ಪ್ರಮಾಣದಷ್ಟು ಉಗಿಯನ್ನು ಸಂಪಾದಿಸುತ್ತಿದ್ದರು. ಈ ಉಗಿಯ ಶಕ್ತಿಯಿಂದ ವಿದ್ಯುತ್ತನ್ನು ಉತ್ಪಾದಿಸಿ ಸಮೀಪದ ರೈಲ್ವೇ ಬಂಡಿಗಳನ್ನು ನಡೆಸುತ್ತಿದ್ದರು.

ಲಾರ್ಡ್‌ರೆಲ್ಲೋದಲ್ಲಿ ಆದ ಪ್ರಯೋಗಗಳನ್ನು ನೋಡಿ ಇಂತಹ ನೈಸರ್ಗಿಕ ಸಂಪತ್ತುಗಳನ್ನು ಹೊಂದಿರುವ ಅನ್ಯ ರಾಷ್ಟ್ರಗಳಿಗೆ ಕುತೂಹಲ ಕೆರಳಿತು. ಈ ತರಹದ ಪ್ರಯೋಗಗಳನ್ನು ನ್ಯೂಜಿಲ್ಯಾಂಡಿನ ವೈರಾಕೈ ಕಣಿವೆಯಲ್ಲಿ ಪ್ರಾರಂಭಿಸಿ ೩,೨೦೦ ಅಡಿ ಆಳದವರೆಗೂ ಕೊಳವೆ ಬಾವಿಯನ್ನು ಕೊರೆದು ಚದರ ಇಂಚಿಗೆ ೧೪೬೦ ರಾತ್ಲು ಒತ್ತಡವುಳ್ಳ ಉಗಿಯನ್ನು ಮೇಲಕ್ಕೆ ಚಿಮ್ಮುವಂತೆ ಮಾಡಿದ್ದಾರೆ. ಪಶ್ಚಿಮ ಜರ್ಮನಿಯ ವರ್ಟೆಂಬರ್ಗ್‌ನಲ್ಲಿ ಒಂದು ಬಾವಿಯನ್ನು ಕೊರೆದಾಗ ೧೬.೫ ಅಡಿ ಆಳಕ್ಕೆ ಹೋದಂತೆ ೧ ಡಿಗ್ರಿ (ಫ್ಯಾರನ್ ಹೀಟನಂತೆ) ಉಷ್ಣತೆ ಹೆಚ್ಚಿದ್ದುದು ಕಂಡುಬಂದಿತು.

೧೯೬೦ರಲ್ಲಿ ವೈರಾಕೈ ನಗರದ ಸಮೀಪದಲ್ಲಿ ಕೊರೆದ ಒಂದು ಕೊಳವೆ ಬಾವಿಯಲ್ಲಿ ಪ್ರತಿ ನಿಮಿಷಕ್ಕೆ ೪೫,೦೦೦ ಗ್ಯಾಲನ್ ಬಿಸಿ ನೀರು ಹರಿಯುವಂತೆ ಮಾಡಿದ್ದಾರೆ. ಇದರಿಂದ ಗಡೀ ವೈರಾಕೈ ಆಸ್ಪತ್ರೆ ಮತ್ತು ಖಾಸಗಿ ಮನೆಗಳನ್ನು ಬೆಚ್ಚಗಿಡುವಂತಾಯಿತು.

ಕೊಳವೆ ಬಾವಿಗಳನ್ನು ಕೊರೆಯುವಾಗ ಅನುಸರಿಸಬೇಕಾದ ಸುರಕ್ಷತೆ ಮತ್ತು ಮುನ್ನೆಚ್ಚರಿಕೆ ಕ್ರಮಗಳು :

೧. ಕೊಳವೆ ಬಾವಿಯನ್ನು ಕೊರೆಯುವ ವೇಳೆಯಲ್ಲಿ ತುಂಬಾ ಬಿಸಿಯಾದ ಉಗಿಯು ಮೇಲಕ್ಕೆ ಚಿಮ್ಮಿದಾಗ ಅದನ್ನು ಶಮನಗೊಳಿಸಲು (ತಡೆಯಲು) ಸಾಕಷ್ಟು ತಣ್ಣೀರನ್ನು ಟ್ಯಾಂಕಗಳಲ್ಲಿ ಶೇಖರಿಸಿಕೊಂಡಿರಬೇಕು.

೨. ಕೊಳವೆ ಬಾವಿಗಳನ್ನು ಕೊರೆಯುವಾಗ ಆಗಬಹುದಾದ ಅಪಘಾತ, ತೊಂದರೆಗಳನ್ನು ನಿಯಂತ್ರಿಸಿಕೊಳ್ಳಲು ಸಿಬ್ಬಂದಿಗೆ ಸರಿಯಾದ ತರಬೇತಿ ಕೊಟ್ಟಿರಬೇಕು.

೩. ಬಿಸಿ ಹಬೆಯು ಚಿಮ್ಮಿದಾಗ ಅದನ್ನು ತಡೆಗಟ್ಟಲು ಕೇಸಿಂಗಿನ ಹೊರಗಡೆ ಸಾಕಷ್ಟು ಸಿಮೆಂಟನ್ನು ಶೇಖರಿಸಿಕೊಂಡು ಆ ತೂತುಗಳನ್ನು ತಕ್ಷಣ ಮುಚ್ಚುವ ವ್ಯವಸ್ಥೆ ಮಾಡಬೇಕು.

4. ಕೆಲವು ಬಾವಿ ವಿಷಾನಿಲಗಳಿದ್ದಲ್ಲಿ ಅದನ್ನು ಸೇವಿಸಿದರೆ ತಲೆಸುತ್ತು ಮತ್ತು ಕಣ್ಣಿನ ದೃಷ್ಟಿ ಮಂದವಾಗುವಿಕೆ ಆಗುತ್ತದೆ. ಅವಕ್ಕೋಸ್ಕರ ವಿಷಾನಿಲಗಳಿಂದ ತಡೆದುಕೊಳ್ಳುವ ಉಪಕರಣಗಳು ಮತ್ತು ಮುಖವಾಡಗಳನ್ನು (ಗ್ಯಾಸ್ ಮಾಸ್ಕ್‌ಗಳು) ಪಕ್ಕದಲ್ಲಿ ಇಟ್ಟುಕೊಂಡಿರಬೇಕು.

ಪೃಥ್ವಿಯಲ್ಲಿ ಭೂ ಶಾಖ ಶಕ್ತಿಯ ಉತ್ಪಾದನೆ

ಈ ಶತಮಾನದಿಂದೀಚೆಗೆ ಇಟಲಿಯ ಲಾರ್ಡ್‌ರೆಲ್ಲೋ ಜಿಲ್ಲೆಯವರು ಭೂ ಗರ್ಭದಲ್ಲಿರುವ ಕಚ್ಚಾ ಉಗಿಯಿಂದ ೯೦ ಮೆಗಾವ್ಯಾಟ್ ಭೂ ಶಾಖ ವಿದ್ಯುತ್ ಶಕ್ತಿಯನ್ನು ಉತ್ಪಾದಿಸತ್ತಿರುವದನ್ನು ಕಂಡು ಈ ಬಗೆಯ ಸಂಪತ್ತಿರುವ ಬೇರೆ ದೇಶದವರು ತಮ್ಮ ದೇಶಗಳಲ್ಲಿ ಈ ಶಕ್ತಿಯ ಲಾಭವನ್ನು ಪಡೆದುಕೊಳ್ಳಲು ಮುಂದಾಗಿದ್ದಾರೆ.

ಪ್ರಪಂಚದ ಕೆಲವು ದೇಶಗಳಲ್ಲಿ ಈಗ ೭೫೦ ಮೆಗಾವ್ಯಾಟ್ ಭೂ ಶಾಖ ವಿದ್ಯುತ್ ಶಾಖೋತ್ಪತ್ತಿಯನ್ನು ಉತ್ಪನ್ನ ಮಾಡುತ್ತಿದ್ದಾರೆ. ಸದ್ಯದಲ್ಲೇ ಈ ದೇಶಗಳಲ್ಲಿ ಭೂ ವಿದ್ಯುತ್ ಶಾಖೋತ್ಪತ್ತಿಯನ್ನು ೮೯೦ ಮೆಗಾವ್ಯಾಟ್‌ಗೆ ಹೆಚ್ಚಿಸುವುದರಲ್ಲಿದ್ದಾರೆ.

ಭೂ ಶಾಖ ವಿದ್ಯುತ್ ಶಕ್ತಿ ಉತ್ಪನ್ನ ಮಾಡುವ ದೇಶಗಳು

ದೇಶಗಳು	ಈಗ ಉತ್ಪತ್ತಿಯಾಗುತ್ತಿರುವ ಭೂ ವಿದ್ಯುತ್ ಶಾಖೋತ್ಪನ್ನ	ಸದ್ಯದಲ್ಲಿ ಭೂವಿದ್ಯುತ್ ಶಾಖೋತ್ಪನ್ನವನ್ನು ಹೆಚ್ಚಿಸಬೇಕೆಂದಿರುವ ಅಂದಾಜು
೧. ಇಟಲಿ, ಲಾರ್ಡ್ ರೆಲ್ಲೋ ಪ್ರದೇಶ	೩೯೦ ಮೆ. ವ್ಯಾ	
೨. ನ್ಯೂಜಿಲ್ಯಾಂಡ್ ವೈರಾಕೈ ಕಣಿವೆ ಪ್ರದೇಶ	೧೯೨ ಮೆ. ವ್ಯಾ	
೩. ಕ್ಯಾಲಿಫೋರ್ನಿಯಾ ಬಿಸಿ ನೀರಿನ ಬುಗ್ಗೆ ಪ್ರದೇಶ	೮೨ ಮೆ. ವ್ಯಾ	೧೧೦ ಮೆ.ವ್ಯಾ
೪. ಜಪಾನ್ (ಒಟಕಾ ಮತ್ತು ಮ್ಯಾಟ್ಸುಕಾವ ಗುಂಪು)	೧೩ ಮೆ. ವ್ಯಾ	
೫. ಐಸ್‌ಲ್ಯಾಂಡ್ ನಮೋಫಜಾನ ಪ್ರದೇಶ	೧೨ ಮೆ. ವ್ಯಾ	
೬. ಸೋವಿಯತ್ ದೇಶಗಳ ಒಕ್ಕೂಟ ಪೌಚ್ ಹೆಟಕಾ ಪ್ರದೇಶ	೫ ಮೆ. ವ್ಯಾ	
೭. ಮೆಕ್ಸಿಕೋ ಮೆಕ್ಸಿಕೆಲಿ ಪ್ರದೇಶ		೭೫ ಮೆ. ವ್ಯಾ
ಒಟ್ಟು	೭೦೫ ಮೆ. ವ್ಯಾ	೧೮೫ ಮೆ. ವ್ಯಾ

ಭೂ ಶಾಖ ವಿದ್ಯುತ್ ಶಕ್ತಿಯನ್ನು ಅನೇಕ ದೇಶಗಳು ಉತ್ಪಾದಿಸಿಕೊಳ್ಳಲು ಮುಂದೆ ಬಂದುದರಿಂದ, ಯುನೆಸ್ಕೋವು ೧೯೬೮ ರಲ್ಲಿ ಹಲವು ದೇಶಗಳ ಪ್ರಾವೀಣ್ಯತೆ ಪಡೆದಿದ್ದ ಭೂವಿಜ್ಞಾನಿಗಳನ್ನು, ಭೂ ಭೌತ ವಿಜ್ಞಾನಿಗಳನ್ನು, ಭೂ ರಸಾಯನಿಕ ವಿಜ್ಞಾನಿಗಳನ್ನು ಒಗ್ಗೂಡಿಸಿ ಒಂದು ಸಂಸ್ಥೆಯನ್ನು ಸ್ಥಾಪಿಸಿ ಈ ವಿಷಯದ ಬಗ್ಗೆ ಅನ್ಯದೇಶದವರಿಗೆ ತರಬೇತಿ ಕೊಡಲು ಪ್ರಾರಂಭಿಸಿತು. ಈಗ ಸುಮಾರು ೧೯ ದೇಶದವರಿಗೆ ತರಬೇತಿ

ಕೊಡಲು ಮುಂದಾಗಿದೆ (ಉದಾ : ಕೀನ್ಯಾ, ಇತಿಯೋಪಿಯಾ, ಸಾಲ್ವಡಾರ, ಚಿಲಿ, ಫಿಲಿಪೈನ್ ಮುಂತಾದವುಗಳು).

ಭಾರತದಲ್ಲಿರುವ ಬಿಸಿ ನೀರಿನ ಬುಗ್ಗೆಗಳ ಪ್ರದೇಶಗಳು :

ಭಾರತದಲ್ಲಿ ಬಿಸಿ ನೀರಿನ ಬುಗ್ಗೆಗಳನ್ನು ಅವುಗಳ ಭೂ ವೈಜ್ಞಾನಿಕ ಲಕ್ಷಣಗಳ ಮೇರೆಗೆ ಮುಖ್ಯವಾಗಿ ಮೂರು ವಲಯಗಳನ್ನಾಗಿ ವಿಂಗಡಿಸಬಹುದು.

೧. ಬಿಹಾರ ಬಿಸಿ ನೀರಿನ ಬುಗ್ಗೆಗಳ ವಲಯ :

ಈ ವಲಯದಲ್ಲಿ ಬರುವ ಕಲ್ಲಿದ್ದಲು ನಿಕ್ಷೇಪಗಳ ಅಂಚಿನ ಪ್ರದೇಶ, ರಾಜಗೀರ ಪ್ರದೇಶ ಮತ್ತು ಮೊಂಗೈರ ಪ್ರದೇಶಗಳನ್ನು ಒಳಗೊಂಡಿದ್ದು, ಅವುಗಳಲ್ಲಿ ಸೀತಾಕುಂಡ ಮತ್ತು ಪಶ್ಚಿಮ ಬಂಗಾಲದ ಭರ ಬುಮ ಹತ್ತಿರದ ವಜ್ರೇಶ್ವರಿ ಬಿಸಿ ನೀರ ಬುಗ್ಗೆಗಳು ಮುಖ್ಯವಾದುವುಗಳು.

೨. ಪಶ್ಚಿಮ ಕರಾವಳಿ ಬಿಸಿ ನೀರಿನ ಬುಗ್ಗೆಗಳ ವಲಯ :

ಈ ವಲಯದಲ್ಲಿ ಬರುವ ಮಹಾರಾಷ್ಟ್ರದ ರತ್ನಾಗಿರಿ ಜಿಲ್ಲೆಯಲ್ಲಿ ೯, ರಾಯಘಡ್ ಜಿಲ್ಲೆಯಲ್ಲಿ ೩ ಬಿಸಿ ನೀರಿನ ಬುಗ್ಗೆಗಳಿದ್ದು ಇವುಗಳಲ್ಲಿ ಟೀಹಾ, ಗಣೇಶಪುರಿ, ತುರಾಲ್ ಮತ್ತು ವಜ್ರೇಶ್ವರಿ ಬುಗ್ಗೆಗಳು ಮುಖ್ಯವಾದವುಗಳು, ಕರ್ನಾಟಕದಲ್ಲಿ ಇದುವರೆಗೂ ಗುರುತಿಸಲ್ಪಟ್ಟ ಬಿಸಿ ನೀರಿನ ಬುಗ್ಗೆ ಇರುವುದು ಒಂದೇ. ಅದು ದಕ್ಷಿಣ ಕನ್ನಡಜಿಲ್ಲೆಯ ಪುತ್ತೂರು ಸಮೀಪ ಇರ್ದೆ ಪಂಜ ಗ್ರಾಮದ ಹತ್ತಿರವಿದೆ.

೩. ಹಿಮಾಲಯ ಪರ್ವತ ಶ್ರೇಣಿಯಲ್ಲಿರುವ ಬಿಸಿ ನೀರಿನ ಬುಗ್ಗೆಗಳ ವಲಯ :

ಇದರಲ್ಲಿ ಪಂಜಾಬಿನ ಕುಲು ಪ್ರದೇಶದ ಮಣಿಕರ್ಣ, ಕಾಂಗ್ರಾ ಜಿಲ್ಲೆಯ ತಾತಪಾನಿ ಇವು ಮುಖ್ಯವಾದವುಗಳು.

ಕಾಂಗ್ರಾ ಜಿಲ್ಲೆಯ ಜ್ವಾಲಾಮುಖಿಯ ಬಿಸಿ ನೀರಿನ ಬುಗ್ಗೆಯ ನೀರಿನಲ್ಲಿ ಬ್ರೋಮೈಡ್ ಮತ್ತು ಐಯೋಡೈಡ್ ಲವಣಗಳು, ಪಶ್ಚಿಮ ಬಂಗಾಳದ ವಜ್ರೇಶ್ವರಿ ಬುಗ್ಗೆಯ ನೀರಿನಲ್ಲಿ ಸಹ ಇರುವುದು ಕಂಡುಬಂದಿದೆ. ಯಾತ್ರಿಕರು ಅಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿ ಪಂಜಾಬಿನ ಮಣಿಕರ್ಣ ಬಿಸಿ ನೀರಿನ ಬುಗ್ಗೆಯಲ್ಲಿ ಸ್ವಲ್ಪ ಹೊತ್ತು ಅದ್ದಿ ಹಿಡಿದುಕೊಂಡರೆ ಅದು ಅನ್ನವಾಗುವುದನ್ನು ಈಗಲೂ ಕಾಣಬಹುದು.

ನಮ್ಮ ದೇಶದಲ್ಲಿ ಅರವತ್ತರ ದಶಕದಿಂದಲೇ ಭಾರತ ಭೂ ವೈಜ್ಞಾನಿಕ ಸಮೀಕ್ಷಾ ಇಲಾಖೆಯವರು ಭೂ ಶಾಖ ವಿದ್ಯುತ್ ಶಕ್ತಿಯ ಬಗ್ಗೆ ಸಮೀಕ್ಷೆ ಕೈಗೊಂಡಿದ್ದು ಅನೇಕ ಬಿಸಿ ನೀರಿನ ಬುಗ್ಗೆಗಳನ್ನು ಗುರುತಿಸಿದ್ದಾರೆ. ಇಲ್ಲಿಯ ಭೂ ಶಾಖ ವಿದ್ಯುತ್ ಶಕ್ತಿಯನ್ನು ಬಳಕೆ ಮಾಡಿಕೊಳ್ಳಲು ಭಾರತ ಸರ್ಕಾರ ೧೯೮೦ ರಲ್ಲಿ ಕಾರ್ಯೋತ್ಪನ್ನ ಮಂಡಳಿಯನ್ನು ರಚಿಸಿತು.

ವಿದ್ಯುತ್ ವಿಕಿರಣ ಶಕ್ತಿಯು ಅಗ್ನಿ ಶಿಲೆಗಳಲ್ಲಿ ಕಡಿಮೆ ಇರುವದರಿಂದ ಈ ಪ್ರದೇಶದ ಬಿಸಿ ನೀರಿನ ಬುಗ್ಗೆಗಳ ಉಷ್ಣತೆಯು ೩೦ ಡಿಗ್ರಿಯಿಂದ ೪೦ ಡಿಗ್ರಿ ಸೆಂಟಿಗ್ರೇಡನಷ್ಟು ಕಡಿಮೆ ಇದ್ದು, ಅವು ೧ ಕಿ.ಮೀ ಗಿಂತಾ ಹೆಚ್ಚು ಆಳದಲ್ಲಿ ಕಂಡು ಬಂದಿಲ್ಲದಿರುವದರಿಂದ ಇದರ ಉಪಯೋಗ ಆರ್ಥಿಕವಾಗಿ ಲಾಭದಾಯಕವಾಗಲಿಕ್ಕಿಲ್ಲ. ಆದರೆ ಗೊಂಡವಾನ ಮತ್ತು ಹಿಮಾಲಯ ಪ್ರದೇಶದ ಶಿಲೆಗಳಿಂದ ಚಿಮ್ಮುವ ಬಿಸಿ ನೀರಿನ ಬುಗ್ಗೆಗಳ ಉಷ್ಣತೆಯು ಹೆಚ್ಚಾಗಿದ್ದು, ಕಡಿಮೆ ಆಳದಲ್ಲಿ ಹೆಚ್ಚು ಉಷ್ಣತೆ ಲಭ್ಯವಿರುವದರಿಂದ ಇವುಗಳ ಉಪಯೋಗ ಆರ್ಥಿಕವಾಗಿ ಹೆಚ್ಚು ಲಾಭದಾಯಕವೆಂದು ಸಮೀಕ್ಷೆಯಿಂದ ಕಂಡು ಬಂದಿದೆ.

ಭೂ ಶಾಖ ಶಕ್ತಿಯ ಉಪಯೋಗಗಳು :

ಭೂ ಶಾಖ ವಿದ್ಯುತ್ ಶಕ್ತಿಯನ್ನು ಸಾಮಾನ್ಯವಾಗಿ ಮನೆಯನ್ನು ಬೆಚ್ಚಗಿಡಲು, ಸ್ನಾನಕ್ಕೆ ಅಡಿಗೆಮಾಡಲು, ಗಾಜಿನ ಮನೆಯಲ್ಲಿ ಟೊಮೆಟೊ, ಕುಂಬಳ, ಹೂ ಕೋಸು, ಅಣಬೆ, ಹಣ್ಣು ಹಂಪಲು ಮುಂತಾದ ತರಕಾರಿಗಳನ್ನು ಬೆಳೆಸಲು ಭೂಮಿಯನ್ನು (ಮಣ್ಣನ್ನು) ಬಿಸಿ ಮಾಡಲು, ಆಲ್ಕೋಹಾಲ ತಯಾರಿಸಲು, ಮೀನು ಒಣಗಿಸಲು, ಕೋಳಿ, ರೇಷ್ಮೆ ಸಾಕಣಿಕೆ ಕೇಂದ್ರದಲ್ಲಿ ಮರಿ ಮಾಡಲು, ಹಾಲುಪುಡಿ ತಯಾರಿಸಲು, ಕಾಫಿಪುಡಿ ಮಾಡಲು, ಪಶುಗಳ ಮೇವು ತಯಾರಿಸಲು, ಹಣ್ಣಿನ ರಸ ತಯಾರಿಸಲು, ಚರ್ಮ ಹದ ಮಾಡಲು, ಸಕ್ಕರೆ ಮತ್ತು ಉಪ್ಪು ತಯಾರುಮಾಡಲು, ಬೋರಿಕ್ ಅನಿಲ ತಯಾರು ಮಾಡಲು ಉಪಯೋಗಿಸುತ್ತಾರೆ.

ನಮಗೆ ಬೇಕಾದ ಇಂಧನ ಶಕ್ತಿಯನ್ನು ಜಲ, ಕಟ್ಟಿಗೆ, ಇದ್ದಿಲು, ಕಲ್ಲಿದ್ದಲು, ಕಲ್ಲೆಣ್ಣೆ ಮತ್ತು ನೈಸರ್ಗಿಕ ಅನಿಲಗಳಿಂದ ಜಲ ವಿದ್ಯುತ್ ಅಣು ವಿದ್ಯುತ್ ಥರ್ಮಲ್ ವಿದ್ಯುತ್‌ನ್ನು ಪಡೆಯುತ್ತಿದ್ದು ಇವುಗಳ ಸಂಪತ್ತನ್ನು ನಾವು ಖಾಲಿ ಮಾಡುತ್ತಿರುವವಲ್ಲದೆ ಪರಿಸರದ ಮಾಲಿನ್ಯಕ್ಕೂ ಎಡೆಗೊಡುತ್ತಿದ್ದೇವೆ ಇದರ ಬದಲು ಅಕ್ಷಯವಾದ ಭೂ ಶಾಖ ವಿದ್ಯುತ್ ಶಕ್ತಿಯಿಂದ ಪರಸರಕ್ಕೆ ಧಕ್ಕೆ ಮಾಡದೆ ಹೆಚ್ಚು ಲಾಭ ಪಡೆಯಬಹುದು. ಆದರೆ ಇದರ ಲಾಭವನ್ನು ಪಡೆಯಲು ನುರಿತ ತಜ್ಞರೂ, ಕನಸುಗಾರರೂ, ಸಾಹಸದಿಂದ ಸಾಧನೆ ಮಾಡುವವರೂ, ಸಿಕ್ಕರೆ ಮಾತ್ರ ಇದರ ಉಪಯೋಗವನ್ನು ಪಡೆಯಬಹುದು.

ಶಿ.ಶಿ. ಬಸವನಾಳರ ಮಾಧ್ಯಮಿಕ ಶಿಕ್ಷಣ ಪ್ರಸಾರ

★ ಬಿ. ಆರ್. ಹಿರೇಮಠ

ಶ್ರೀ ಹರ್ಡೇಕರ ಮಂಜಪ್ಪ, ಶ್ರೀ ಚೆನ್ನಮಲ್ಲಿಕಾರ್ಜುನ, ಶ್ರೀ ಫ. ಗು. ಹಳಕಟ್ಟಿ, ಶಿ.ಶಿ. ಬಸವನಾಳ ಮೊದಲಾದ ಪುಣ್ಯಚೇತನಗಳು ಕರ್ನಾಟಕದಲ್ಲಿ ಜನಿಸಿದುದು ಕನ್ನಡಿಗರ ಪುಣ್ಯ ವಿಶೇಷ. ಕರ್ನಾಟಕವನ್ನೇ ತಮ್ಮ ಬಹುಮುಖ ಚಟುವಟಿಕೆಯ ಕರ್ಮಭೂಮಿಯನ್ನಾಗಿಸಿಕೊಂಡು ಇವರು ಕನ್ನಡಿಗರಿಗೆ, ಕರ್ನಾಟಕಕ್ಕೆ ಸಲ್ಲಿಸಿದ ಸೇವೆ ಅನನ್ಯ, ಅನುಪಮ, ಅವಿಸ್ಮರಣೀಯ ಆದುದಾಗಿದೆ. ಈ ಮಹಾವ್ಯಕ್ತಿಗಳಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕಗಳ ಅಪೂರ್ವ ಸಂಗಮವಿರುವುದನ್ನು ಗಮನಿಸಬೇಕು. ಆದುದರಿಂದ ಇಂಥ ವ್ಯಕ್ತಿಗಳ ಹೆಸರಿನಲ್ಲಿ, ವ್ಯಕ್ತಿಗಳನ್ನು ಕುರಿತು ನಡೆಯುವ ಕಾರ್ಯಕ್ರಮವೆಂದರೆ ಕನ್ನಡ-ಕನ್ನಡಿಗ- ಕರ್ನಾಟಕಗಳನ್ನು ಕುರಿತ ಕಾರ್ಯಕ್ರಮ ಎಂದೇ ಅರ್ಥ. ಈ ಪವಿತ್ರ ಚೇತನಗಳು ತಾವು ಪ್ರಕಾಶಮಾನವಾಗಿ ಬೆಳಗುವುದರೊಂದಿಗೆ ನಾಡನ್ನೂ ನಾಡವರನ್ನೂ ಪ್ರಜ್ವಲಗೊಳಿಸಿದವು. ಈ ಶುಭಸಂದರ್ಭದಲ್ಲಿ ಇಂಥ ಪುಣ್ಯ ಜೀವಿಗಳ ಬದುಕು, ಕಾರ್ಯವಿಧಾನಗಳು ಕನ್ನಡಿಗರಿಗೆ ಮಾದರಿಯೆನಿಸುವುದು ತೀರ ಅವಶ್ಯವಿದೆ. ಈ ಹಿರಿಯ ವ್ಯಕ್ತಿಗಳ ಆದರ್ಶದ ಬೆಳಕಿನಲ್ಲಿ ಕನ್ನಡಿಗರು ಮುನ್ನಡೆದದ್ದಾದರೆ ಕರ್ನಾಟಕದ ಸಮಗ್ರ ಅಭ್ಯುದಯ ಸಾಧ್ಯವೆಂಬುದನ್ನು ನಾವು ಮರೆಯುವಂತಿಲ್ಲ.

ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಮೊದಲಾದ ತಮ್ಮ ಬಹುಮುಖ ಸೇವೆಯ ಮೂಲಕ ಕನ್ನಡವನ್ನು, ಕನ್ನಡಿಗರನ್ನು, ಕರ್ನಾಟಕವನ್ನು ಬೆಳೆಸಿದ, ಬೆಳಗಿಸಿದ ಪುಣ್ಯಜೀವಿಗಳ ಪುಣ್ಯಪುರುಷರಲ್ಲಿ ಶಿ. ಶಿ. ಬಸವನಾಳರು ಅಗಗಣ್ಯರೆನಿಸಿದ್ದಾರೆ. ಇಂಥ ಪುಣ್ಯಜೀವಿಗಳು ಭಾವಶುದ್ಧಿಯಿಂದ ಸಮಾಜಕ್ಕಾಗಿ ಸಲ್ಲಿಸಿದ ಸೇವೆಯನ್ನು ನೆನೆಯುವುದೇ ಒಂದು ಭಾಗ್ಯ ವಿಶೇಷ. ಈ ಪುಣ್ಯಪುರುಷರ ಅಧ್ಯಯನವೆಂದರೆ ನಾಡಿನ ಸಾಹಿತ್ಯಿಕ, ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಕ್ಷೇತ್ರಗಳ ಅಧ್ಯಯನವೆಂದೇ ಅರ್ಥ.

ಬಸವನಾಳರು ತಮ್ಮ ಒಂದೇ ಬದುಕಿನಲ್ಲಿ ಹಲವು ಬದುಕನ್ನು ಬಾಳಿದವರು. ಹೀಗಾಗಿ ಬಸವನಾಳರ ಅಧ್ಯಯನವೆಂದರೆ ಅವರ ಹಲವು ಬದುಕಿನ, ಬಹುಮುಖ ತೆರೆಯ ಅಧ್ಯಯನವೆಂದೇ ಹೇಳಬೇಕಾಗುತ್ತದೆ. ಹಲವು ಜೀವಮಾನಗಳಲ್ಲಿ ಸಾಧಿಸಬೇಕಾಗಿದ್ದುದನ್ನು ತಮ್ಮ ಬದುಕಿನ ಒಂದೇ ಅವಧಿಯಲ್ಲಿ ಸಾಧಿಸಿತೋರಿಸಿದ ಅಪ್ರತಿಮ ಸಾಹಸಿಯೆನಿಸಿದ್ದಾರೆ, ಅವರು. ಬಸವನಾಳರದು ಹಲವು ಕ್ಷೇತ್ರಗಳಲ್ಲಿ ಹಂಬಲಿಸಿ ದುಡಿಯುವ ಜಾಯಮಾನವಾದುದರಿಂದ ಅವರ ಆಸಕ್ತಿಯ ಕ್ಷಿತಿಜ ಬಹುಮುಖವಾಗಿ

ವಿಸ್ತರಿಸಿಕೊಂಡಿತು. ಅವರ ಅದಮ್ಯ ಚೈತನ್ಯ, ಕರ್ತವ್ಯನಿಷ್ಠೆಗಳಿಗೆ ಒಂದೇ ಕ್ಷೇತ್ರ ಸಾಲದಾಯಿತು. ಹೀಗಾಗಿ ಅವರು ಶಿಕ್ಷಣದ ಸರ್ವರಂಗಗಳಲ್ಲಿಯೂ ತಮ್ಮನ್ನು ಪ್ರಾಮಾಣಿಕವಾಗಿ ತೊಡಗಿಸಿಕೊಂಡು, ನಾಡಿನ ಶೈಕ್ಷಣಿಕ ಸೇವೆ ಮಾಡಿದರು.

'ಕನ್ನಡ ಜಾಗ್ರತಿ ವರ್ಷ'ವನ್ನು ಆಚರಿಸುತ್ತಿರುವ ಈ ಸಂದರ್ಭದಲ್ಲಿಯೇ ಬಸವನಾಳರ 'ಜನ್ಮಶತಮಾನೋತ್ಸವ ' ಇರುವುದು ಒಂದುಯೋಗಾಯೋಗ. ಯಾಕೆಂದರೆ ಶಿಕ್ಷಣ ಪ್ರಸಾರಗಳ ಮೂಲಕ ೧೯೧೬ ರಷ್ಟು ಹಿಂದೆಯೇ ಕನ್ನಡ-ಕನ್ನಡಿಗ-ಕರ್ನಾಟಕಗಳ ಜಾಗ್ರತಿಗಾಗಿ ಬಸವನಾಳರು ತಮ್ಮ ಬದುಕನ್ನೇ ಮುಡಿಪಾಗಿಟ್ಟು ಪ್ರಾಮಾಣಿಕವಾಗಿ, ಸತ್ಯನಿಷ್ಠೆಯಿಂದ ದುಡಿದಿದ್ದಾರೆ. ಹೀಗಾಗಿ 'ಕನ್ನಡ ಜಾಗ್ರತಿ ವರ್ಷ,ದ ಆಚರಣೆಯ ಪ್ರಸಂಗದಲ್ಲಿ, ಬಸವನಾಳರ ಜನ್ಮ ಶತಮಾನೋತ್ಸವ ' ಜರುಗುತ್ತಿರುವುದು ಅತ್ಯಂತ ಅರ್ಥ ಪೂರ್ಣವೆನಿಸಿದೆ. ಬಸವನಾಳರ ಈ ಜನ್ಮ ಶತಮಾನೋತ್ಸವದ ಆಚರಣೆಯಿಂದ 'ಕನ್ನಡ ಜಾಗ್ರತಿ ವರ್ಷ'ಕ್ಕೆ ಹೆಚ್ಚಿನ ಕಳೆ ಹಾಗೂ ಬೆಲೆ ಬಂದಿದೆಯೆನ್ನಬೇಕು.

ಶಿ.ಶಿ. ಬಸವನಾಳರು ಸಲ್ಲಿಸಿದ ಶೈಕ್ಷಣಿಕ ಸೇವೆ ವೈವಿಧ್ಯಪೂರ್ಣವೂ ಮೌಲಿಕವೂ ಆದುದಾಗಿದೆ. ಇವರು ಮಾಡಿದ ಈ ಶೈಕ್ಷಣಿಕ ಸೇವೆ, ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ, ಶೈಕ್ಷಣಿಕ ಸಂಸ್ಥೆಗಳನ್ನು ನಡೆಸುವವರಿಗೆ ಅನುಕರಣೀಯವೂ ಆದರಣೀಯವೂ ಆದುದಾಗಿದೆ. ಬಸವನಾಳರು ಪ್ರಾಥಮಿಕ ಶಿಕ್ಷಣದಿಂದ ವಿಶ್ವವಿದ್ಯಾಲಯದಂಥ ಉನ್ನತ ಶಿಕ್ಷಣದ ವರೆಗಿನ ಶಿಕ್ಷಣ ಸಂಸ್ಥೆಗಳಿಗಾಗಿ, ಶಿಕ್ಷಣ ಪ್ರಸಾರಕ್ಕಾಗಿ ನಿಷ್ಠೆಯಿಂದ ದುಡಿದಿದ್ದಾರೆ. ಹೀಗಾಗಿ ಬಸವನಾಳರನ್ನು 'ಪರಿಪೂರ್ಣ ಶಿಕ್ಷಕ' 'ಪರಿಪೂರ್ಣ ಶಿಕ್ಷಣತಜ್ಞ' ರೆಂದು ಕರೆಯಬಹುದಾಗಿದೆ. ಶಿಕ್ಷಣದ ಎಲ್ಲ ಹಂತಗಳಲ್ಲಿಯೂ ಲಭಿಸಿದ ದುಡಿಯುವ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಅಪೂರ್ವ ವ್ಯಕ್ತಿ ಬಸವನಾಳರು. ಹೀಗೆ ಬಸವನಾಳರು ಪ್ರಾಥಮಿಕ, ಮಾಧ್ಯಮಿಕ, ಕಾಲೇಜು, ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಶೈಕ್ಷಣಿಕ ಸೇವೆ, ಶಿಕ್ಷಣ ಪ್ರಸಾರ ಕೈಕೊಂಡಿದ್ದರೂ ಈ ಲೇಖನದಲ್ಲಿ ಅವರು ನೆರವೇರಿಸಿದ ಮಾಧ್ಯಮಿಕ ಶಿಕ್ಷಣಪ್ರಸಾರ ಕಾರ್ಯವನ್ನು ಮಾತ್ರ ಸ್ಥೂಲವಾಗಿ ವಿವೇಚಿಸಲಾಗಿದೆ, ವಿವರಿಸಲಾಗಿದೆ.

ಬಸವನಾಳರ ಪ್ರೀತಿಯ ಮತ್ತು ಪ್ರಥಮ ಆದ್ಯತೆಯ ಕ್ಷೇತ್ರವೇ ಶಿಕ್ಷಣ, ಶಿಕ್ಷಕ ವೃತ್ತಿ. ಇವರಿಗೆ ಶೈಕ್ಷಣಿಕ ಸೇವೆ, ಶಿಕ್ಷಣ ಪ್ರಸಾರಗಳೆಂದರೆ ಗುರುಸೇವೆ ಲಿಂಗಪೂಜೆ, ಜಂಗಮ ದಾಸೋಹವೆನಿಸಿದ್ದವು. ಬಸವನಾಳರು ಶಿಕ್ಷಕ ವೃತ್ತಿಯನ್ನು, ಶಿಕ್ಷಣ ಪ್ರಸಾರ ಕಾರ್ಯವನ್ನು ಕಾಯಕದ ಮಟ್ಟಕ್ಕೆ ಏರಿಸಿ ಕೃತಾರ್ಥರಾದರು. ಶಿಕ್ಷಕ ವೃತ್ತಿಗೆ ಅರ್ಥತುಂಬಿ, ಅದರ ಮೌಲ್ಯವನ್ನು ಉಜ್ವಲಗೊಳಿಸಿದ ಶ್ರೇಯಸ್ಸು ಬಸವನಾಳರಿಗೆ ಸಲ್ಲುತ್ತದೆ. ಶಿಕ್ಷಣ ಸಂಸ್ಥೆ-ಶಿಕ್ಷಕವೃತ್ತಿ-ಶಿಕ್ಷಣ ಪ್ರಸಾರಗಳಲ್ಲಿ ಲಿಂಗಾಂಗ ಸಾಮರಸ್ಯದಂಥ ಅವಿನಾಭಾವ ಸಂಬಂಧವನ್ನು ಕಂಡವರು ಶಿ.ಶಿ. ಬಸವನಾಳರು. ಕರ್ನಾಟಕದಲ್ಲಿ ಬಸವನಾಳರು ತಮ್ಮ

ಸ್ನೇಹಿತರೊಂದಿಗೆ ಶಿಕ್ಷಣ ಸಂಸ್ಥೆಯನ್ನು ಆರಂಭಿಸುವ, ಶಿಕ್ಷಕ ವೃತ್ತಿಯನ್ನು ಕೈಕೊಳ್ಳುವ, ಮಾಧ್ಯಮಿಕ ಶಿಕ್ಷಣ ಪ್ರಸಾರ ಕಾರ್ಯ ನಡೆಸುವ ಪೂರ್ವದ ಅವಧಿಯನ್ನು 'ಮಾಧ್ಯಮಿಕ ಶಿಕ್ಷಣ ಪ್ರಸಾರ'ದ ಅಥವಾ 'ಶಿಕ್ಷಣ ಪ್ರಸಾರ'ದ ಪ್ರಥಮ ಘಟ್ಟವೆಂದು ಕರೆಯಬಹುದು. ಇದು ಮಾಧ್ಯಮಿಕ ಶಿಕ್ಷಣ ಪ್ರಸಾರದ ಅರುಣೋದಯಕಾಲ.

ಹದಿನೇಳರಿಂದ ಹತ್ತೊಂಬತ್ತನೆಯ ಶತಮಾನದವರೆಗೆ ಕರ್ನಾಟಕ ಮರಾಠರೊಂದಿಗೆ ಒಂದಿಲ್ಲೊಂದು ರೀತಿಯ ಸಂಬಂಧವನ್ನು ಹೊಂದಿದ್ದಿತು. ಹದಿನೆಂಟು ಹಾಗೂ ಹತ್ತೊಂಬತ್ತನೆಯ ಶತಮಾನಗಳಲ್ಲಿ ಪೇಶ್ವೆಯವರ ಆಡಳಿತದ ಮೂಲಕ ಉತ್ತರ ಕರ್ನಾಟಕ ಮರಾಠಿಮಯವಾಗಿ ಪರಿಣಮಿಸಿತು. ಇದರಿಂದ ಈ ಪ್ರದೇಶವನ್ನು 'ದಕ್ಷಿಣ ಮಹಾರಾಷ್ಟ್ರ'ವೆಂದು ಕರೆಯಲಾಗುತ್ತಿದ್ದಿತು.

ಕರ್ನಾಟಕದಲ್ಲಿ ಬ್ರಿಟಿಶ್ ಸಾರ್ವಭೌಮತ್ವ ಸ್ಥಾಪನೆಯಾದುದು. ಕ್ರಿ.ಶ.೧೮೦೦ ರಲ್ಲಿ. ಬ್ರಿಟಿಷರ ಕಾಲದಲ್ಲಿ ಧಾರವಾಡ, ವಿಜಾಪುರ , ಬೆಳಗಾವಿ, ಕಾರವಾರ, ಜಿಲ್ಲೆಗಳು ಮುಂಬಯಿ ಪ್ರಾಂತದ ಒಂದು ಭಾಗವೆಂದು ಪರಿಗಣಿತವಾಗಿದ್ದವು. ಈ ನಾಲ್ಕು ಜಿಲ್ಲೆಗಳ ಪ್ರದೇಶವನ್ನು 'ಮುಂಬಯಿ ಕರ್ನಾಟಕ'ವೆಂದು ಕರೆಯುತ್ತಿದ್ದರು. ಈ ಪ್ರದೇಶದಲ್ಲಿ ಕ್ರಿ.ಶ. ೧೮೨೯ ಕ್ಕಿಂತ ಪೂರ್ವದಲ್ಲಿಯೇ ಮರಾಠಿ ಶಾಲೆಗಳು ಆರಂಭಗೊಂಡಿದ್ದವು. ಆದರೆ ಕನ್ನಡ ಶಾಲೆಗಳು ಮಾತ್ರ ಕ್ರಿ.ಶ. ೧೮೩೬ ರಿಂದ ಪ್ರಾರಂಭಗೊಂಡವು ಈ ನಾಲ್ಕು ಜಿಲ್ಲೆಗಳಲ್ಲಿ ಆಂಗ್ಲ ವಿದ್ಯಾಭ್ಯಾಸ ಮಾಡಿಸುವವಕ್ಕಾಗಿ ಕ್ರೈಸ್ತ ಮತಪ್ರಚಾರಕ ಮಂಡಲಿಗಳು (Missionaries) ಪ್ರಮುಖ ಪಾತ್ರ ವಹಿಸಿದವು. ಈ ಮಿಷನರಿ ಶಾಲೆಗಳಲ್ಲಿಯೂ ದೇಶಭಾಷೆಗಳಲ್ಲಿ ವಿದ್ಯಾಭ್ಯಾಸ ಮಾಡಿಸಲಾಗುತ್ತಿದ್ದಿತು. ಜೊತೆಗೆ ಆಂಗ್ಲಭಾಷೆಯ ಮೂಲತತ್ವಗಳನ್ನು ಕಲಿಸಲಾಗುತ್ತಿದ್ದಿತು. ಮುಂಬಯಿ ಪ್ರಾಂತದಲ್ಲಿ ೧೮೫೫ ರಿಂದ 'ವಿದ್ಯಾ ಇಲಾಖೆ' ಆರಂಭವಾಯಿತು. ಇದರಿಂದ ಆಂಗ್ಲ ಹಾಗೂ ಪ್ರಾದೇಶಿಕ ಭಾಷೆಗಳನ್ನು ಕಲಿಸುವ ಶಾಲೆಗಳು ಪ್ರಾರಂಭಗೊಂಡವು. ಹತ್ತೊಂಬತ್ತನೆಯ ಶತಮಾನದ ಆರಂಭದಲ್ಲಿ ಕ್ರೈಸ್ತ ಧಾರ್ಮಿಕ ಸಂಸ್ಥೆ, ಸರಕಾರ ಹಾಗೂ ಖಾಸಗಿಯವರಿಂದ 'ಹೊಸ ಮಾದರಿಯ ಇಂಗ್ಲಿಷ್ ಶಾಲೆಗಳು' ತೆರೆಯಲ್ಪಟ್ಟವು. ಆಗ ಮುಂಬಯಿ ಪ್ರಾಂತವನ್ನು ಮೂರು ಭಾಗವಾಗಿ ವಿಂಗಡಿಸಿ, ಅದರಲ್ಲಿ ವಿದ್ಯಾಭ್ಯಾಸದ ಧ್ಯೇಯೋದ್ದೇಶಗಳನ್ನು ಅನುಷ್ಠಾನಗೊಳಿಸಲು ಒಬ್ಬೊಬ್ಬ ಉಪ ತನಿಖಾಧಿಕಾರಿಗಳನ್ನು ನೇಮಿಸಲಾಯಿತು. ದಕ್ಷಿಣವಲಯದಲ್ಲಿ ಕರ್ನಾಟಕದ ನಾಲ್ಕು ಜಿಲ್ಲೆಗಳೊಂದಿಗೆ (ಧಾರವಾಡ, ವಿಜಾಪುರ, ಬೆಳಗಾವಿ, ಕಾರವಾರ) ಕೋಲಾಬಾ, ರತ್ನಾಗಿರಿ ಜಿಲ್ಲೆಗಳನ್ನೂ ಸೇರಿಸಲಾಯಿತು. ಆ ಮೇಲೆ ಕೊಲ್ಲಾಪುರವೂ ಇದರ ವ್ಯಾಪ್ತಿಗೆ ಒಳಪಡುವಂತಾಯಿತು. ೧೮೫೬ ರ ಸುಮಾರಿಗೆ ಧಾರವಾಡ ಜಿಲ್ಲೆಯಲ್ಲಿ ೧೩, ಬೆಳಗಾವಿ ಜಿಲ್ಲೆಯಲ್ಲಿ ೧೩, ವಿಜಾಪುರ ಜಿಲ್ಲೆಯಲ್ಲಿ ೯ ಪ್ರಾಥಮಿಕ ಶಾಲೆಗಳಿದ್ದುವು. ಕರ್ನಾಟಕದಲ್ಲಿ ಈ ನಾಲ್ಕು

ಜಿಲ್ಲೆಸೇರಿ ೫ ಇಂಗ್ಲಿಷ್ ಶಾಲೆಗಳಿದ್ದವು. ೧೮೫೬ ರಲ್ಲಿ ರಸೆಲ್‌ರವರು ಈ ಪ್ರದೇಶದ ಶಿಕ್ಷಣಖಾತೆಯ ಉಪತನಿಖಾಧಿಕಾರಿಗಳಾದರು. ಇದರಿಂದ ಕನ್ನಡಕ್ಕೆ ಪ್ರೋತ್ಸಾಹ ಪ್ರೇರಣೆಗಳು ಉಕ್ಕಿ ಬರುವಂತಾಯಿತು. ರಸೆಲ್‌ವರೇ ೧೮೫೬ರಲ್ಲಿ ಚೆನ್ನಬಸಪ್ಪನವರನ್ನು ಉಪವಿದ್ಯಾಧಿಕಾರಿಯನ್ನಾಗಿ ನೇಮಿಸುವ ಮೂಲಕ ಶಿಕ್ಷಣಪ್ರಸಾರದ ಸಂವರ್ಧನೆಗೆ ಸಂಜೀವಿನಿ ಶಕ್ತಿಯಾಗಿ ಪರಿಣಮಿಸಿದರು. ೧೮೮೧ ವರೆಗೆ ಈ ಕ್ಷೇತ್ರದಲ್ಲಿ ಕಾರ್ಯ ಮಾಡಿದ ಚೆನ್ನಬಸಪ್ಪನವರ ಅವಿರತ ಹಾಗೂ ಅನುಪಮ ಶ್ರಮದ ಫಲವಾಗಿ ೧೮೮೨ ರ ಸುಮಾರಿಗೆ ಧಾರವಾಡ ಜಿಲ್ಲೆಯಲ್ಲಿ ೩೪೧, ಬೆಳಗಾವಿ ಜಿಲ್ಲೆಯಲ್ಲಿ ೧೭೭, ವಿಜಾಪುರ ಜಿಲ್ಲೆಯಲ್ಲಿ ೧೫೦ ಕನ್ನಡ ಪ್ರಾಥಮಿಕ ಶಾಲೆಗಳಿದ್ದವು. ಈಗ ಖಾಸಗಿ ಹಾಗೂ ಸರಕಾರಿ ಪ್ರೌಢ, ಮಾಧ್ಯಮಿಕ ಶಾಲೆಗಳ ಸಂಖ್ಯೆ ಅಧಿಕಗೊಂಡಿತು. ಈ ಶಾಲೆಗಳ ೧ ರಿಂದ ೪ನೇ ಇಯುತ್ತೆವರೆಗಿನ ಬೋಧನೆ ಕನ್ನಡ ಮಾಧ್ಯಮದ್ದಾಗಿದ್ದಿತು. ೫ ರಿಂದ ೭ನೇ ಇಯುತ್ತೆವರೆಗಿನ ಮಾಧ್ಯಮಿಕ ಶಾಲೆಗಳ ಸಂಖ್ಯೆ ಅತ್ಯಂತ ಕಡಿಮೆಯಿದ್ದಿತು. ಈ ಮಾಧ್ಯಮಿಕ ಶಾಲೆಗಳಲ್ಲಿ ಕನ್ನಡ ಅಥವಾ ಇಂಗ್ಲೀಷ್ ಶಿಕ್ಷಣದ ಮಾಧ್ಯಮವಾಯಿತು.

೧೮೫೭ರಲ್ಲಿ ಮುಂಬಯಿ ವಿಶ್ವವಿದ್ಯಾಲಯ ಸ್ಥಾಪನೆಯಾಯಿತು. ಇದರಿಂದ ಮುಂಬಯಿ ಪ್ರಾಂತದ ಶೈಕ್ಷಣಿಕ ಚಟುವಟಿಕೆಗಳು ತೀವ್ರಗೊಳ್ಳಲು ಸಾಧ್ಯವಾಯಿತು. ಜೊತೆಗೆ ಈ ಪ್ರಾಂತದಲ್ಲಿ 'ಶೈಕ್ಷಣಿಕ ವಾತಾವರಣ ನಿರ್ಮಾಣ' ದಟ್ಟೈಸಲು ಅನುಕೂಲವೆನಿಸಿತು. ಆಗ ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯನ್ನು ಮುಂಬಯಿ ವಿಶ್ವವಿದ್ಯಾಲಯದಿಂದಲೇ ಆರಂಭಿಸಲಾಯಿತು. ಇದರಿಂದ ಈ ಪ್ರಾಂತದ ಪ್ರೌಢಶಾಲಾ ವಿದ್ಯಾಭ್ಯಾಸಕ್ಕೆ ಅಧಿಕ ಪ್ರೇರಣೆ, ಪ್ರೋತ್ಸಾಹ, ಪ್ರಯೋಜನಗಳು ಸಂಪ್ರಾಪ್ತವಾದವು. ಮೊದಮೊದಲು ಮುಂಬಯಿ ಕರ್ನಾಟಕದಲ್ಲಿ ಪ್ರಾರಂಭವಾದ ಪ್ರೌಢ, ಮಾಧ್ಯಮಿಕ ಶಾಲೆಗಳು ಹೀಗಿರುತ್ತವೆ :

೧. ಬೆಳಗಾವಿಯ ಬಾಸೆಲ್ ಮಿಷನ್ ಹೈಸ್ಕೂಲು-೧೮೩೨

೨. ಧಾರವಾಡದ ಇಂಗ್ಲೀಷ್ ಸ್ಕೂಲು- ೧೮೪೮

೩. ಧಾರವಾಡದ ಬಾಸೆಲ್ ಮಿಷನ್ ಹೈಸ್ಕೂಲು -೧೮೬೩

೪. ಕಾರವಾರದ ಸರಕಾರಿ ಹೈಸ್ಕೂಲು -೧೮೬೪

೫. ವಿಜಾಪುರದ ಸರಕಾರಿ ವ್ಯವಸಾಯ ಪ್ರೌಢಶಾಲೆ -೧೮೮೫

ಈ ಪ್ರೌಢ , ಮಾಧ್ಯಮಿಕ ಶಾಲೆಗಳಲ್ಲಿ ೧ ರಿಂದ ೭ನೇ ಇಯುತ್ತೆವರೆಗೆ ತರಗತಿಗಳಿದ್ದವು. ಇವುಗಳಲ್ಲಿ ೧ರಿಂದ ೪ನೇ ಇಯುತ್ತೆವರೆಗಿನವು ಪ್ರಾಥಮಿಕ ಶಾಲೆಯೆಂದೂ ೫ರಿಂದ ೭ನೇ ಇಯುತ್ತೆವರೆಗಿನವು ಮಾಧ್ಯಮಿಕಶಾಲೆಯೆಂದೂ ೭ರಿಂದ ೧೧ನೇ ಇಯುತ್ತೆವರೆಗಿನವು ಪ್ರೌಢಶಾಲೆಯೆಂದೂ ಪರಿಗಣಿತವಾಗಿದ್ದವು. ಕೆಲವು ಸ್ಥಳಗಳಲ್ಲಿ ಮಾಧ್ಯಮಿಕಶಾಲೆಗಳನ್ನು ಪ್ರಾಥಮಿಕಶಾಲೆಗಳಲ್ಲಿಯೇ ಸೇರಿಸಲಾಗಿದ್ದಿತು. ೧೯೩೭ ರವರೆಗೆ ಮಾಧ್ಯಮಿಕ, ಪ್ರೌಢಶಾಲೆಗಳ ಶಿಕ್ಷಣ ಮಾಧ್ಯಮ ಇಂಗ್ಲೀಷ ಆಗಿದ್ದಿತು.

೧೯೩೯ ರಿಂದ ಪ್ರಾಂತೀಯ ಭಾಷೆಗಳನ್ನು ಶಿಕ್ಷಣದ ಮಾಧ್ಯಮವಾಗಿ ಬಳಸಲು ಆರಂಭಿಸಲಾಯಿತು. ಬಾಲಕಿಯರು ಬಾಲಕರ ಹೈಸ್ಕೂಲುಗಳಲ್ಲಿ ಸೇರಿದ್ದರೂ ಅವರಿಗಾಗಿಯೇ ಮೀಸಲಾದ ಪ್ರತ್ಯೇಕ ಮಾಧ್ಯಮಿಕ, ಪ್ರೌಢಶಾಲೆಗಳಿದ್ದವು. ೧೯೧೨-೧೩ ರಲ್ಲಿ ಈ ಭಾಗದಲ್ಲಿ ಬಾಲಕಿಯರಿಗಾಗಿಯೇ ೩೦ ಮಾಧ್ಯಮಿಕ ಶಾಲೆಗಳೂ ೯ ಪ್ರೌಢಶಾಲೆಗಳೂ ಇದ್ದವು. ಪ್ರತಿಯೊಂದು ಜಿಲ್ಲೆಯಲ್ಲಿ ಕನಿಷ್ಠ ಒಂದೊಂದು ಹೈಸ್ಕೂಲು ಆರಂಭಿಸುವುದು ; ಈ ಹೈಸ್ಕೂಲು ತೆರೆಯಲು ಜಿಲ್ಲಾ ಸ್ಥಳೀಯಸಂಸ್ಥೆ, ಪುರಸಭೆ, ಖಾಸಗಿಸಂಸ್ಥೆಗಳಿಗೆ ಸಹಾಯಧನ ನೀಡುವುದು, ಮುಂಬಯಿ ಪ್ರಾಂತ ಸರಕಾರದ ಉದ್ದೇಶವಾಯಿತು. ಇದರಿಂದ ಮಾಧ್ಯಮಿಕ ಪ್ರೌಢಶಾಲೆಗಳನ್ನು ತೆರೆಯುವ ಕಾರ್ಯ ತ್ವರಿತಗೊಳ್ಳುವಂತಾಯಿತು.

ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆಯ ಸ್ಥಾಪನೆ (೧೯೧೬) ಹಾಗೂ ಬಸವನಾಳರ ಶಿಕ್ಷಕವೃತ್ತಿಯ ಆರಂಭ(೧೯೧೬)ಗಳ ಮೂಲಕ ಪ್ರಸಾರಗೊಂಡ ಮಾಧ್ಯಮಿಕ ಶಿಕ್ಷಣದ ಅವಧಿಯನ್ನು ಉತ್ತರ ಕರ್ನಾಟಕದ ಶೈಕ್ಷಣಿಕ ಚಟುವಟಿಕೆಯ 'ದ್ವಿತೀಯ ಘಟ್ಟ'ವೆಂದು ಕರೆಯಬಹುದು. ಶೈಕ್ಷಣಿಕ ಕ್ಷೇತ್ರದ ಈ ದ್ವಿತೀಯ ಹಾಗೂ ಅದ್ವಿತೀಯ ಘಟ್ಟವನ್ನು ಅನಾವರಣಗೊಳಿಸಿದ ಪುಣ್ಯಶ್ರೀಯನ್ನು ಶಿವಲಿಂಗಪ್ಪ ಬಸವನಾಳ, ಪಂಡಿತಪ್ಪ ಚಿಕ್ಕೋಡಿ, ಹುಚ್ಚಯ್ಯ ಕಟ್ಟೀಮನಿ, ಮಹಾರುದ್ರಪ್ಪ ಸಾಖರೆ, ಬಸಪ್ಪ ಹಂಚಿನಾಳ, ಬಸವಂತಪ್ಪ ಮುಮದಾಪುರ, ವೀರನಗೌಡ ಪಾಟೀಲ ಅವರದಾಗಿರುತ್ತದೆ. ಡೆಪ್ಯುಟಿ ಚನ್ನಬಸಪ್ಪನವರು ಉತ್ತರಕರ್ನಾಟಕದ ಶೈಕ್ಷಣಿಕ ಚಟುವಟಿಕೆಗಳ ಪ್ರಸಾರದ ಪ್ರಥಮ ಘಟ್ಟದ ನಾಯಕವ್ಯಕ್ತಿಯೆನಿಸಿದರೆ, ಶಿ. ಶಿ. ಬಸವನಾಳರು ಈ ದ್ವಿತೀಯ ಘಟ್ಟದ ನಾಯಕವ್ಯಕ್ತಿಗಳಾಗಿ ನಿಂತರು. ಈ ಇಬ್ಬರು ಪುಣ್ಯವ್ಯಕ್ತಿಗಳ ಪವಿತ್ರಸಂಕಲ್ಪ, ನಿಸ್ವಾರ್ಥ, ತ್ಯಾಗ ಜೀವನನಿಷ್ಠೆ, ಕಾರ್ಯಶ್ರದ್ಧೆ, ಕರ್ತೃತ್ವ ಶಕ್ತಿ, ಪ್ರಾಮಾಣಿಕತೆ, ಸತ್ಯನಿಷ್ಠೆ, ಕರ್ತವ್ಯಪ್ರಜ್ಞೆ, ಯೋಜನಾಬದ್ಧತೆ, ಸಮಯನಿಷ್ಠೆ, ಸಮರ್ಪಣಭಾವಗಳ ಮೂಲಕ ಉತ್ತರ ಕರ್ನಾಟಕದಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ, ಪ್ರೌಢ ಶಿಕ್ಷಣಗಳ ಪ್ರಸಾರ ಕಾರ್ಯ ಹವಾದ ಸದ್ದಿಲ್ಲ, ಪ್ರಮಾಣದಲ್ಲಿ ಜರುಗಿತು. ಈ ಶಿಕ್ಷಣ ಶಿವಯೋಗಿಗಳು ಜನಿಸದೆ ಹೋಗಿದ್ದರೆ, ಶೈಕ್ಷಣಿಕ ಕಾರ್ಯಗಳನ್ನು ಕೈಕೊಳ್ಳದೆ ಹೋಗಿದ್ದರೆ, ಶಿಕ್ಷಣ ಪ್ರಸಾರ ಮಾಡದೆ ಹೋಗಿದ್ದರೆ ಉತ್ತರ ಕರ್ನಾಟಕದ ಜನತೆ ಇನ್ನೂ ಅಜ್ಞಾನದ ಅಂಧಕಾರದಲ್ಲಿಯೇ ಉಳಿಯಬೇಕಾಗುತ್ತಿದ್ದಿತು. ಹೀಗೆ ಡೆಪ್ಯುಟಿ ಚೆನ್ನಬಸಪ್ಪನವರು ಹಾಗೂ ಶಿ.ಶಿ. ಬಸವನಾಳರು ಶಿಕ್ಷಣ ಪ್ರಸಾರದ ಸೂರ್ಯರಾಗಿ ಉತ್ತರ ಕರ್ನಾಟಕವನ್ನು, ಆ ಮೂಲಕ ಕರ್ನಾಟಕವನ್ನು ಬೆಳಗಿದರು. ಶೈಕ್ಷಣಿಕ ಸಂಚಲನಗೊಳಿಸಿದ ಈ ಮಹಾಪುರುಷರು ಉತ್ತರ ಕರ್ನಾಟಕದ ಜನರ ಅಜ್ಞಾನ, ಅಂಧಕಾರಗಳನ್ನೂ ಆರ್ಥಿಕ-ಸಾಮಾಜಿಕ-

ಸಾಂಸ್ಕೃತಿಕ-ಸಾಹಿತ್ಯಿಕ-ಶೈಕ್ಷಣಿಕ ಹಿಂದುಳಿವಿಕೆಯನ್ನೂ ಅಳಿಸಿ ಹಾಕಲು ಅಪರಿಮಿತ ಪ್ರಯತ್ನಿಸಿದರು. ಹೀಗೆ ಇವರು ಕೈಕೊಂಡ ಶೈಕ್ಷಣಿಕ-ತಪಸ್ಸಿನ ಅಮೃತಫಲ ಉತ್ತರ ಕರ್ನಾಟಕದ ಜನರಿಗೆ ಲಭಿಸಿ, ಸಮಾಜ ಪರಿವರ್ತನ-ಸಮಾಜಾಭಿವೃದ್ಧಿ- ನಾಡಿನಾಭಿವೃದ್ಧಿ ಮೊದಲಾದ ಉತ್ಕರ್ಷ ಕಾರ್ಯಗಳು ಅವ್ಯಾಹತವಾಗಿ ನಡೆದು ಬರಲು ಅನುಕೂಲವಾಯಿತು. ಇದರಿಂದ ಸಮಾಜದಲ್ಲಿ ನಾಡಿನಲ್ಲಿ ಹೊಸ ವಾತಾವರಣ, ಹೊಸಜೀವನ ಪ್ರಾರಂಭಗೊಳ್ಳುವಂತಾಯಿತು. ಈ ರೀತಿಯಾಗಿ ಶಿಕ್ಷಣ ಪ್ರಸಾರದ ಮೂಲಕ ಜನರನ್ನು ರೂಪಿಸಿದ, ನಾಡನ್ನು ನವನವೋನ್ಮೇಷಗೊಳಿಸಿದ ಗೌರವ ಡೆಪ್ಯೂಟಿ ಚೆನ್ನಬಸಪ್ಪ ಹಾಗೂ ಶಿ.ಶಿ. ಬಸವನಾಳರಿಗೆ ಸಲ್ಲುತ್ತದೆ. ಇದಕ್ಕಾಗಿ ಈ ಇಬ್ಬರೂ ಶಿಕ್ಷಣಪ್ರೇಮಿಗಳಿಗೆ ನಾಡಿನ ಜನತೆ ಎಷ್ಟು ಕೃತಜ್ಞರಾಗಿದ್ದರೂ ಕಡಿಮೆಯೆಂದೇ ಹೇಳಬೇಕು.

ವೀರಶೈವ ಸಮಾಜದ ಪ್ರಥಮ ಎಂ.ಎ. ಪದವೀಧರರಾದ ಬಸವನಾಳರ ಮುಂದೆ ಅಂದು ಆಕರ್ಷಕವಾದ ಸರಕಾರಿಸೇವೆ, ಉಪೇಕ್ಷಿತವಾದ ಸಮಾಜ ಸೇವೆಗಳೆಂಬ ಎರಡು ಆಯ್ಕೆಗಳಿದ್ದವು. ಸರಕಾರಿ ಸೇವೆಯಲ್ಲಿ ಉನ್ನತ ಹುದ್ದೆಯಲ್ಲಿದ್ದುಕೊಂಡು ಕೈತುಂಬ ಸಂಬಳ ಪಡೆದು ಬಸವನಾಳರು ತಾವೂ ತಮ್ಮ ಕುಟುಂಬದ ಸರ್ವಸದಸ್ಯರೂ ಐಷಾರಾಮವಾಗಿ ಇರಬಹುದಾಗಿದ್ದಿತು. ಆದರೆ ಇವರು ಸರಕಾರಿ ಸೇವೆಯೆಂಬ ಆಮಿಷವನ್ನು, ಹಣದ ವ್ಯಾಮೋಹವನ್ನು ಸಾರಾಸಗಟಾಗಿ ಪರಿತ್ಯಜಿಸಿ, ಸಮಾಜಸೇವೆ-ಶಿಕ್ಷಣಪ್ರಸಾರದಂಥ ಲೋಕಹಿತದ, ಲೋಕಪೂಜ್ಯವೆನಿಸಿದ ಕಾರ್ಯಗಳನ್ನು ಸಂತೋಷದಿಂದ ಸ್ವೀಕರಿಸಿ ಪರಿವ್ರಾಜಕರೆನಿಸಿದರು. ಇದು ಬಸವನಾಳರು ಕೈಕೊಂಡ ಧೀರೋದಾತ್ತ ನಿರ್ಧಾರ; ಸ್ವೀಕರಿಸಿದ ಅಸಿಧಾರಾವ್ರತ. ಇಂಥ ಸ್ವಾರ್ಥತ್ಯಾಗದ ನಿರ್ಧಾರ ಕೈಕೊಳ್ಳುವುದು ಸಾಮಾನ್ಯರಿಂದ ಸಾಧ್ಯವಿಲ್ಲ. ಬಸವನಾಳರಂಥ ಪುಣ್ಯ ಚರಿತರಿಂದ ಮಾತ್ರವೇ ಇಂಥ ವೀರ ನಿರ್ಧಾರ ಸಾಧ್ಯ. ಅಂದಿನಿಂದ ಬಸವನಾಳರು ಸಮಾಜಸೇವೆ, ಶಿಕ್ಷಣ ಪ್ರಸಾರಗಳಿಗಾಗಿಯೇ ತಮ್ಮನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಇದು ನಾಡಿನ ಭಾಗ್ಯೋದಯ, ಶಿಕ್ಷಣ ಪ್ರಸಾರದ ಪುಣ್ಯೋದಯ.

ಬಸವನಾಳರು ಅಂದು ಅನಾಯಾಸವಾಗಿ ತಮ್ಮ ಮನೆಯನ್ನು ಪ್ರವೇಶಿಸಲು ಸಿದ್ಧಳಾಗಿ ತುದಿಗಾಲ ಮೇಲೆ ನಿಂತಿದ್ದ ಧನಲಕ್ಷ್ಮಿಯನ್ನು ಬರಮಾಡಿಕೊಳ್ಳದೆ, ಜ್ಞಾನಲಕ್ಷ್ಮಿಯನ್ನು ಸ್ವಾಗತಿಕೊಂಡರು. 'ಚಿತ್ತ ಶುದ್ಧನಾಗಿ ಕಾಯಕಮಾಡುವಲ್ಲಿ ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ ತಾನಾಗಿಪ್ಪಳು'' ಎಂದು ನಂಬಿದ ಬಸವನಾಳರು ಜ್ಞಾನಲಕ್ಷ್ಮಿಯ ಬಲದಿಂದ ಸಮಾಜದ ಬಡತನ, ಅಜ್ಞಾನ, ಅನಕ್ಷರತೆಗಳನ್ನು ನಿವಾರಣೆ ಮಾಡಲು ಮುಂದಾದರು. ಜ್ಞಾನದಾಸೋಹಿ ಬಸವನಾಳರು ಜ್ಞಾನಲಕ್ಷ್ಮಿಯನ್ನು ಸಮಾಜಕ್ಕೆ ನೀಡಿ, ಸಮಾಜವನ್ನೂ ಶಿಕ್ಷಣವನ್ನೂ ಉದ್ಧರಿಸಿದರು. ಇವರ ಸಮಾಜಸೇವೆ, ಶಿಕ್ಷಣ ಸೇವೆಗಳ ಈ ನಿರ್ಧಾರದಿಂದ

ಉತ್ತರಕರ್ನಾಟಕ, ವೀರಶೈವ ಸಮಾಜ ಬಹುಪಯೋಗಿ ಪ್ರಯೋಜನ ಪಡೆದು ಪುನೀತವಾಯಿತು.

ಸರಕಾರಿ ಸೇವೆಯಿಂದ ವ್ಯಕ್ತಿಕಲ್ಯಾಣ ಮಾತ್ರ ಸಾಧ್ಯ. ಆದರೆ ಸಮಾಜಸೇವೆ, ಶಿಕ್ಷಣಪ್ರಸಾರದಂಥ ಪುಣ್ಯಕಾರ್ಯಗಳಿಂದ ಆತ್ಮಕಲ್ಯಾಣ ಲೋಕಕಲ್ಯಾಣಗಳೆರಡೂ ಸಾಧ್ಯ. ಇದೇ ಮಾನವ ಜೀವನದ ಸಾರ್ಥಕತೆ, ಪರಿಪೂರ್ಣ ವ್ಯಕ್ತಿತ್ವದ ಲಕ್ಷಣವೆಂದು ಬಸವನಾಳರು ಮನಗಂಡಿದ್ದರು. ಜ್ಞಾನ, ಕ್ರಿಯಾತ್ಮಕವಾಗಬೇಕು ಅಂದರೆ ವ್ಯಕ್ತಿ ತಾನು ಕಲಿತ, ಗಳಿಸಿದ ಜ್ಞಾನ ಸಂಪತ್ತನ್ನು ಸಮಾಜದ ಉನ್ನತಿಗಾಗಿ ಮುಕ್ತವಾಗಿ, ವೆಗ್ಗಳವಾಗಿ ಧಾರೆಯೆರೆಯಬೇಕೆಂದು ಅರ್ಥ. ಇದರಿಂದ ಜ್ಞಾನದ ಪ್ರಯೋಜನ ಸಾಧ್ಯವಾಗುತ್ತದೆ. ಆದುದರಿಂದ ಬಸವನಾಳರು ತಾವು ಶ್ರಮವಹಿಸಿ, ಪ್ರಾಮಾಣಿಕವಾಗಿ ಗಳಿಸಿದ ಜ್ಞಾನವನ್ನು ಶಿಕ್ಷಣ ಸಂಸ್ಥೆಗಳ ಸ್ಥಾಪನೆ, ಶಿಕ್ಷಣ ಪ್ರಸಾರದಂಥ ಕಾರ್ಯಗಳನ್ನು ಕೈಕೊಳ್ಳುವುದರ ಮೂಲಕ ಕ್ರಿಯಾತ್ಮಕಗೊಳಿಸಿದರು. ಹೀಗೆ ಬಸವನಾಳರಲ್ಲಿ ಜ್ಞಾನ-ಕ್ರಿಯೆಗಳ ಸಹಜ ಸಂಗಮವಿರುವುದನ್ನು ನಾವು ಗುರುತಿಸುತ್ತೇವೆ. ಇದು ಇಂದಿನ ಪ್ರತಿಯೊಬ್ಬ ವಿದ್ಯಾವಂತನ, ಶಿಕ್ಷಣ ಪ್ರಸಾರಕನ ಆದ್ಯ ಕರ್ತವ್ಯವಾಗಬೇಕಾಗಿದೆ.

ಬಸವನಾಳರು ತಮ್ಮ ತಂದೆಯವರಿಂದಲೇ ಶೈಕ್ಷಣಿಕ ಆಸಕ್ತಿ, ಶೈಕ್ಷಣಿಕ ಮಹತ್ವ, ಶೈಕ್ಷಣಿಕ ಪ್ರೋತ್ಸಾಹಗಳ ಪಾಠವನ್ನು ಕಲಿತುಕೊಂಡವರಾಗಿದ್ದರು. ಶೈಕ್ಷಣಿಕ ಜೀವನದ ದೀಕ್ಷೆಯನ್ನು ತಮ್ಮ ತಂದೆಯವರಿಂದ ಪಡೆದುಕೊಂಡ ಬಸವನಾಳರು ಎಂ. ಎ. ಪದವಿಗಾಗಿ ಮುಂಬಯಿಯಲ್ಲಿ ಅಧ್ಯಯನ ಮಾಡುತ್ತಿರುವಾಗಲೇ 'ಶಿಕ್ಷಣಪ್ರಸಾರ'ದ ಸಂಕಲ್ಪ ಮಾಡಿದರು. ಇವರ ಶಿಕ್ಷಣಪ್ರಸಾರ ಸಂಕಲ್ಪದ ನೀಲಿನಕ್ಷೆ ಸಿದ್ಧಗೊಂಡುದು, ಈ ಪವಿತ್ರ ಸಂಕಲ್ಪದ ರೂಪರೇಷೆ ತಯಾರಾದುದು ಮುಂಬಯಿಯ 'ವೀರಶೈವ ಆಶ್ರಮ'ದಲ್ಲಿ ಎಂಬುದು ಗೊತ್ತಾಗುತ್ತದೆ. ಆದುದರಿಂದ ಮುಂಬಯಿಯ 'ವೀರಶೈವ ಆಶ್ರಮ'ವನ್ನು ಬಸವನಾಳರ 'ಶಿಕ್ಷಣಪ್ರಸಾರದ ಪವಿತ್ರ ಗಂಗೋತ್ರಿ' ಯೆಂದು ಗುರುತಿಸಬಹುದಾಗಿದೆ. ಶಿಕ್ಷಣಪ್ರಸಾರದ ತಮ್ಮ ಪವಿತ್ರ ಸಂಕಲ್ಪವನ್ನು ತಮ್ಮ ಎಲ್ಲ ಸ್ನೇಹಿತರಿಗೂ ತಿಳಿಸಿ ಅವರೆಲ್ಲರೂ ಈ ಕಾರ್ಯದಲ್ಲಿ ತೊಡಗಲು ಪ್ರೇರೇಪಿಸಿದರು. ಹೀಗೆ ಬಸವನಾಳರ ಶಿಕ್ಷಣ ಪ್ರಸಾರದ ಕರಡು ಸಿದ್ಧತಾ ಕಾರ್ಯಗಳಿಗೆ ಪುಣೆ, ಮುಂಬಯಿ ನಗರಗಳು ಸ್ಫೂರ್ತಿಯ ನೆಲೆಗಳಾಗಿ ಪರಿಣಮಿಸಿದವು.

'ಶಿಕ್ಷಣವು ದೇಶೋನ್ನತಿಗೆ ಮೂಲ' 'ಶಿಕ್ಷಣದಿಂದ ವ್ಯಕ್ತಿ ನಿರ್ಮಾಣ, ಸಮಾಜ ನಿರ್ಮಾಣ, ರಾಷ್ಟ್ರ ನಿರ್ಮಾಣ ಸಾಧ್ಯ 'ಲೋಕಹಿತ ಸಾಧಿಸಲು ಶಿಕ್ಷಣ ಸಮರ್ಥ ಮಾಧ್ಯಮ. ದೇಶಸೇವೆ, ಸಮಾಜಸೇವೆಗಳಿಗಾಗಿ ಶಿಕ್ಷಣ ಪ್ರಸಾರ ಪ್ರಮುಖ ಸಾಧನ' - ಇವು ಎಂ. ಎ. ಪದವೀಧರ ಬಸವನಾಳರ ಜೀವನ ಸೂತ್ರವಾಗಿದ್ದುವು. ನಾಡಿನ ಅದರಲ್ಲಿಯೂ

ಉತ್ತರ ಕರ್ನಾಟಕದ ಅಂದಿನ ಸಮಾಜದ ಸಾಮಾಜಿಕ, ಶೈಕ್ಷಣಿಕ , ಆರ್ಥಿಕ ಹೀನಸ್ಥಿತಿ-ಜೀವನ ಪರಿಸ್ಥಿತಿ, ಜನತೆಯ ಅಜ್ಞಾನ, ಅನಕ್ಷರತೆಗಳನ್ನು ಹೋಗಲಾಡಿಸುವುದಕ್ಕಾಗಿ; ತಾವು ಕಂಡ, ಅನುಭವಿಸಿದ ಶೈಕ್ಷಣಿಕ ಅನಾನುಕೂಲ ಪರಿಸ್ಥಿತಿಗಳು ಸಮಾಜದ ಮುಂದಿನ ಜನರಿಗೆ ಒದಗಿಬರಬಾರದೆನ್ನುವುದಕ್ಕಾಗಿ ಬಸವನಾಳರು ಶಿಕ್ಷಣಸಂಸ್ಥೆಗಳನ್ನು ಸ್ಥಾಪಿಸಲು ಮುಂದಾದರು. ಪ್ರವೇಶಪರಿಮಿತಿಯಿಂದ ಅಂದಿನ ಸರಕಾರಿ ಹೈಸ್ಕೂಲುಗಳಲ್ಲಿ ಅಧಿಕ ಸಂಖ್ಯೆಯ ವಿದಾರ್ಥಿಗಳು ಹೈಸ್ಕೂಲು ಶಿಕ್ಷಣದಿಂದ ವಂಚಿತರಾಗುತ್ತಿದ್ದರು. ಇದನ್ನು ನಿವಾರಿಸುವುದಕ್ಕಾಗಿಯೂ ಹೈಸ್ಕೂಲು ಸ್ಥಾಪಿಸಲು ನಿರ್ಧರಿಸಿದರು. ಇದಲ್ಲದೆ ಮಧ್ಯಮವರ್ಗ ಹಾಗೂ ಸಾಮಾನ್ಯವರ್ಗದ ಬಹುಸಂಖ್ಯೆಯ ವಿದ್ಯಾರ್ಥಿಗಳಿಗೆ ಹೈಸ್ಕೂಲು ಶಿಕ್ಷಣ ಲಭ್ಯವಾಗುತ್ತಿರಲಿಲ್ಲ. ಹೀಗಾಗಿ ಅಗ್ರರಿಂದ ಅಂತ್ಯಜವರೆಗೆ ಸಮಾಜದ ಎಲ್ಲ ವರ್ಗ, ವರ್ಣದವರಿಗೂ ಹೈಸ್ಕೂಲು ಶಿಕ್ಷಣ ದೊರಕಬೇಕೆಂದು ಬಯಸಿದ ಬಸವನಾಳರು ಶಿಕ್ಷಣ ಸಂಸ್ಥೆಗಳ ಉಗಮಕ್ಕೆ ಕಾರಣೀಭೂತರೆನಿಸಿದರು. ಹೈಸ್ಕೂಲು ಸ್ಥಾಪನೆಯಂಥ ಕಾರ್ಯ ಕೈಕೊಳ್ಳುವುದರ ಮೂಲಕ ಬಸವನಾಳರು ಸಕಲರಿಗೂ ಲೇಸು ಬಯಸುವ ವ್ರತ ಕೈಕೊಳ್ಳುವಂತಾಯಿತು. ಆ ಮೂಲಕ ಸಮಾಜ ಸೇವೆ , ಶಿಕ್ಷಣ ಸೇವೆಗಳಿಗೆ ತಮ್ಮ ಜೀವನದ ಸರ್ವಸ್ವವನ್ನೇ ಮುಡಿಪಾಗಿಡುವಂತಾಯಿತು. ಬಸವನಾಳರದು ಕ್ರಿಯಾಶೀಲ ಪಾರದರ್ಶಕ ವ್ಯಕ್ತಿತ್ವ. ಚೈತನ್ಯಶೀಲ ಪ್ರವೃತ್ತಿಯ ಬಸವನಾಳರು ತಾವು ಕಂಡ ಪವಿತ್ರ ಸಂಕಲ್ಪದ ಸಾಕಾರಕ್ಕಾಗಿ ಪ್ರತಿದಿನವೂ ಹಂಬಲಿಸುತ್ತಿದ್ದರು. ಈ ಹಂಬಲ ಹಣ್ಣಾಗುವ ದಿನ ಸಮೀಪಿಸಿತು. ಬೆಳಗಾವಿಯಲ್ಲಿ ಪಂಡಿತಪ್ಪ ಚಿಕ್ಕೋಡಿಯವರ ಹಿರಿಯತನದಲ್ಲಿ ಬಸವನಾಳರ ಮಾನವೀಯ ಕಲ್ಯಾಣದ ಸಂಕಲ್ಪವನ್ನು ಕುರಿತು ಚರ್ಚಿಸಲು ಸಮಾಲೋಚನಾಸಭೆ ನಡೆಯಿತು. ಬಸವನಾಳ, ಕಟ್ಟೀಮನಿ, ಸಾಖರೆ, ಮಮದಾಪೂರರ, ಹಂಚಿನಾಳ, ಪಾಟೀಲ ಅವರು ಈ ಸಭೆಯಲ್ಲಿ ಉಪಸ್ಥಿತರಿದ್ದು ಶಿಕ್ಷಣಸಂಸ್ಥೆ ಸ್ಥಾಪಿಸುವ ನಿರ್ಧಾರ ಕೈಕೊಂಡರು.

ಬೆಳಗಾವಿ ಜಿಲ್ಲಾ ಕೇಂದ್ರಸ್ಥಳ. ವೀರಶೈವ ಸಮಾಜದ ಧುರೀಣರೂ ಸಮಾಜ ಸುಧಾರಕರು ಸರಕಾರದ ಉನ್ನತ ಸೇವೆಯಲ್ಲಿದ್ದವರೂ ಆದ ಅರಟಾಳ ರುದ್ರಗೌಡರು, ಗಿಲಗಂಚಿ ಗುರುಸಿದ್ದಪ್ಪನವರು ಇಲ್ಲಿಯೇ ಅಧಿಕಾರಿಗಳಾಗಿದ್ದರು. ಇದಲ್ಲದೆ ಆಗ ಬೆಳಗಾವಿಯಲ್ಲಿ ಕನ್ನಡಿಗರು ಅದರಲ್ಲಿಯೂ ಲಿಂಗಾಯತರ ವರ್ಚಸ್ಸು ಅಷ್ಟಾಗಿ ಇರಲಿಲ್ಲ. ಅಂದು ಬೆಳಗಾವಿಯಲ್ಲಿ ಮರಾಠಿಗರ ಪ್ರಾಬಲ್ಯವೇ ಅಧಿಕವಾಗಿದ್ದಿತು. ಕನ್ನಡಿಗರ ಪ್ರಾಬಲ್ಯವನ್ನು ಬೆಳೆಸುವುದಕ್ಕಾಗಿ, ಕನ್ನಡ ನುಡಿಯ ಪ್ರಸಾರವನ್ನು ಅಧಿಕಗೊಳಿಸುವುದಕ್ಕಾಗಿ ಬೆಳಗಾವಿಯಲ್ಲಿಯೇ 'ಶಿಕ್ಷಣದ ಸಂಸ್ಥೆ' ಸ್ಥಾಪಿಸಲು ಈ ಹಿರಿಯರು ಯೋಚಿಸಿದರು , ಯೋಜಿಸಿದರು. ಅಂದಿನ ಇವರ ದೂರದೃಷ್ಟಿ ಅನನ್ಯ, ಅತ್ಯಪೂರ್ವವಾದುದೆನಿಸಿದೆ.

ಅರಟಾಳ ರುದ್ರಗೌಡರು, ಗಿಲಗಂಚಿ-ಗುರುಸಿದ್ಧಪ್ಪನವರು ಹಾಗೂ ಶಿವಮೂರ್ತಿಸ್ವಾಮಿ ಕಣಬರಗಿಮಠ ಅವರ ಸಹಾಯ, ಉತ್ತೇಜನಗಳಿಂದ ಪುಣೆಯ ಡೆಕ್ಕನ್ ಎಜ್ಯುಕೇಶನ್ ಸೊಸೈಟಿಯ ಮಾದರಿಯಲ್ಲಿ ೧೧-೧೦-೧೯೧೬ರಂದು ಬೆಳಗಾವಿಯಲ್ಲಿ ಸಮಾಜದ ಈ ಸಪ್ತರ್ಷಿಗಳು 'ಕರ್ನಾಟಕ ಲಿಂಗಾಯತ ಶಿಕ್ಷಣ ಸಂಸ್ಥೆ' ಯನ್ನು ಸ್ಥಾಪಿಸಿದರು.

ಕರ್ನಾಟಕ ಕಾಲೇಜು ಸ್ಥಾಪನೆಗಾಗಿ ಕೂಡಿಸಿಟ್ಟ ೯೦,೦೦೦ ರೂಪಾಯಿಗಳಿಂದ ಬರುವ ಬಡ್ಡಿಯಲ್ಲಿ ಸರಕಾರದ ಒಪ್ಪಿಗೆಯಿಂದ ಅರಟಾಳರು ೪೦೦೦ ರೂಪಾಯಿಗಳನ್ನು ಈ ಸಪ್ತರ್ಷಿಗಳಿಗೆ ಕೊಡಿಸಿದರು. ಈ ಹಣದ ಸಹಾಯದಿಂದ ಈ ಹಿರಿಯರು ಬೆಳಗಾವಿಯಲ್ಲಿ ೧೧-೧೧-೧೯೧೬ ರಂದು ಹೈಸ್ಕೂಲನ್ನು ಅಸ್ತಿತ್ವಕ್ಕೆ ತಂದರು. ಇಷ್ಟೇ ಅಲ್ಲದೆ ಅರಟಾಳರು ಗಿಲಗಂಚಿಯವರು ಸಮಾಜಕ್ಕಾಗಿ ಸಲ್ಲಿಸಿದ ಅನುಪಮ ಸೇವೆಯನ್ನು ಅನುಲಕ್ಷಿಸಿ, ತಾವು ಇತರ ಸ್ನೇಹಿತರೊಂದಿಗೆ ಕೂಡಿ ಪ್ರಾರಂಭಿಸಿದ ಈ ಹೈಸ್ಕೂಲಿಗೆ ಇವರಿಬ್ಬರ ಹೆಸರನ್ನಿಟ್ಟು, ಅವರ ಹೆಸರನ್ನು ಚಿರಸ್ಮರಣೀಯವಾಗಿಸಿದರು. ಸಮಾಜಕ್ಕಾಗಿ ದುಡಿದ ವ್ಯಕ್ತಿಗಳಿಗಾಗಿ ಬಸವನಾಳರು ಹಾಗೂ ಅವರ ಸ್ನೇಹಿತರು ಸಮಾಜದ ಪರವಾಗಿ ಸಲ್ಲಿಸಿದ ಗೌರವ, ಸಮಾಜದಋಣ ಇದಾಗಿದೆ. ಅಂದಿನಿಂದ ಈ ಹೈಸ್ಕೂಲು 'ಗಿಲಗಂಚಿ ಅರಟಾಳ ಹೈಸ್ಕೂಲು' ಎಂಬ ನಾಮಕರಣ ಪಡೆದು, ಶಿಕ್ಷಣಪ್ರಸಾರ ಕಾರ್ಯ ಮಾಡತೊಡಗಿತು. ಅಂದಿನಿಂದ ಬೆಳಗಾವಿ ಮಾಧ್ಯಮಿಕ ಶಿಕ್ಷಣ ಪ್ರಸಾರದ, ಮಾನವ ಕಲ್ಯಾಣದ ಕೇಂದ್ರವಾಗಿ, ಕನ್ನಡ-ಕನ್ನಡಿಗರ ಜಾಗೃತಿಯ ಶಕ್ತಿಕೇಂದ್ರವಾಗಿ ಪರಿಣಮಿಸಿತು.

ಬಸವನಾಳರು ಹಾಗೂ ಅವರ ಸ್ನೇಹಿತರ ಈ ಔದಾರ್ಯ ಹಿರಿಯರ ಬಗೆಗಿನ ಪ್ರೀತಿ, ಗೌರವಗಳು ಸ್ಮರಣೀಯವೆನಿಸಿವೆ. ಹೀಗೆ ಲಿಂಗಾಯತ-ಶಿಕ್ಷಣಸಂಸ್ಥೆ ಹಾಗೂ ಗಿಲಗಂಚಿ ಅರಟಾಳ ಹೈಸ್ಕೂಲು ಸ್ಥಾಪನೆಗಳ ಮೂಲಕ ಬಸವನಾಳರು ನಾಡಿನಲ್ಲಿ ಅದರಲ್ಲಿಯೂ ಉತ್ತರಕರ್ನಾಟಕದಲ್ಲಿ ಜ್ಞಾನಜ್ಯೋತಿಯನ್ನು ಹೊತ್ತಿಸಿ, ಮಾಧ್ಯಮಿಕ ಶಿಕ್ಷಣ ಪ್ರಸಾರ ಕಾರ್ಯದ ಪುಣ್ಯಕಾರ್ಯವನ್ನು ಪ್ರಾರಂಭಿಸಿದರು. ಅಂದಿನಿಂದ ಬಸವನಾಳರು ತಮ್ಮ ಸಮಸ್ತ ಬದುಕನ್ನು ಶಿಕ್ಷಣಸಂಸ್ಥೆಗಳ ಸ್ಥಾಪನೆ, ಶಿಕ್ಷಣಪ್ರಸಾರಗಳಿಗಾಗಿಯೇ ಮೀಸಲಾಗಿರಿಸಿದರು. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿ, ಶಿಕ್ಷಣ ಪ್ರಸಾರ ಮಾಡುವುದೇ 'ಲಿಂಗಪೂಜೆ' ಯೆಂದು ಅವರು ಭಾವಿಸಿದರು.

ಈ ಮೊದಲು ಅರಟಾಳರು, ಗಿಲಗಂಚಿಯವರು, ಸಂಗನಬಸಯ್ಯ ಶಾಂತವೀರಪ್ಪನವರು ಹಾಗೂ ಇತರರ ಪ್ರಯತ್ನದಿಂದ ೧೮೮೩ ರಲ್ಲಿ ಧಾರವಾಡದಲ್ಲಿ ಸ್ಥಾಪಿತವಾದ 'ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಶಿಷ್ಯವೇತನ ಮೊದಲಾದ ತನ್ನ ಹಲವಾರು ರಚನಾತ್ಮಕ, ಪ್ರಯೋಜನಾತ್ಮಕ ಕಾರ್ಯಗಳ ಮೂಲಕ 'ಶೈಕ್ಷಣಿಕ ವಾತಾವರಣ

ನಿರ್ಮಾಣಕಾರ್ಯ'ವನ್ನು ಕೈಕೊಂಡು ಉತ್ತರ ಕರ್ನಾಟಕದಲ್ಲಿ ಶಿಕ್ಷಣ ಪ್ರಸಾರಕಾರ್ಯ ಕೈಕೊಂಡಿತು. ಸಾರ್ವತ್ರಿಕವಾಗಿ, ವಿಶೇಷತಃ ಸಾಮಾಜಿಕವಾಗಿ-ಆರ್ಥಿಕವಾಗಿ ಹಿಂದುಳಿದ ವರ್ಗಗಳಲ್ಲಿ ಶಿಕ್ಷಣ ಪ್ರಸಾರ ಮಾಡವುದೇ ಈ ಸಂಸ್ಥೆಯ ಪರಮಧ್ಯೇಯವಾಗಿದ್ದಿತು. ಇದಲ್ಲದೆ ೧೯೦೨ರಂದು ಧಾರವಾಡದಲ್ಲಿ ಜರುಗಿದ ೧ನೆಯ ಅಖಿಲಭಾರತ-ವೀರಶೈವ ಮಹಾಸಭೆ, ೧೯೦೪ರಂದು ಬೆಂಗಳೂರಿನಲ್ಲಿ ನಡೆದ ೨ನೆಯ ಅಖಿಲಭಾರತ ವೀರಶೈವ ಮಹಾಸಭೆ, ಬಾಗಲಕೋಟ-ಬಳ್ಳಾರಿ-ಬೆಳಗಾವಿಗಳಲ್ಲಿ ಸೇರಿದ ಅಖಿಲ ಭಾರತ ವೀರಶೈವ ಮಹಾಸಭೆಗಳಲ್ಲಿ ಹೈಸ್ಕೂಲು ಪ್ರಾರಂಭಿಸುವ ಠರಾವುಗಳು ಪಾಸಾಗಿದ್ದರೂ ಅವು ಕಾರ್ಯರೂಪಕ್ಕೆ ಬರಲಿಲ್ಲ. ಹೀಗಾಗಿ ಬಸವನಾಳರು ಹಾಗೂ ಅವರ ಸ್ನೇಹಿತರು ಉತ್ತರ ಕರ್ನಾಟಕದಲ್ಲಿ ಹಾಗೂ ಗಡಿನಾಡು ಪ್ರದೇಶಗಳಲ್ಲಿ ಮಾಧ್ಯಮಿಕ ಪ್ರೌಢ ಶಾಲೆಗಳನ್ನು ಆರಂಭಿಸಿದ ವೀರಶೈವ ಸಮಾಜದ ಆದ್ಯ ವ್ಯಕ್ತಿಗಳೆನಿಸುತ್ತಾರೆ.

ಲಿಂಗಾಯತ-ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದ ಸಂಸ್ಥಾಪಕ ವ್ಯಕ್ತಿಗಳೇ ಗಿಲಗಂಚಿ-ಅರಟಾಳ ಹೈಸ್ಕೂಲಿನ ಶಿಕ್ಷಕರಾದರು. ಇವರಿಗೆ ಕೌಟುಂಬಿಕ ಸಮಸ್ಯೆ, ಆರ್ಥಿಕ ಅಡಚಣೆಗಳು (ಕೆಲವರನ್ನು ಹೊರತುಪಡಿಸಿ) ಹಾಸಲುಂಟು ಹೊದೆಯಲುಂಟು ಇದ್ದರೂ ಅವೆಲ್ಲವುಗಳನ್ನು ಮರೆತು ಶಿಕ್ಷಕವೃತ್ತಿಯನ್ನು ನಿಷ್ಠೆಯಿಂದ ಕೈಕೊಂಡರು. ವಿದ್ಯಾಮಂದಿರ ಪ್ರವೇಶಿಸಿದ ಕೂಡಲೆ ಇವರು ತಮ್ಮ ಬದುಕಿನ ನೋವು, ನಿರಾಸೆ, ತಳಮಳಗಳನ್ನು ಮರೆತುಬಿಡುತ್ತಿದ್ದರು. ಹೈಸ್ಕೂಲುನಡೆಸಲು ದೊಡ್ಡಮೊತ್ತದ ಯಾವ ಬಂಡವಾಳವೂ ಇವರ ಹತ್ತಿರವಿರಲಿಲ್ಲ. ತಮ್ಮ ಸೇವೆಯೇ ಇವರಿಗೆ ಸರ್ವಸಂಪತ್ತು. ಇವರು ತಮಗೆ ತಾವೇ ಬಂಡವಾಳವಾಗಿದ್ದರು. ಸಾಂಘಿಕವಾಗಿ ವಾಸಿಸುತ್ತಿದ್ದ ಇವರ ಸಮುದಾಯಶಕ್ತಿ ಅಗಾಧವಾದುದಾಗಿದ್ದಿತು. ಈ ಸಂಸ್ಥಾಪಕ ಶಿಕ್ಷಕರ ಆತ್ಮೀಯತೆ, ಒಗ್ಗಟ್ಟು , ಭ್ರಾತೃತ್ವ , ಸಾಮರಸ್ಯ , ಶಿಕ್ಷಣಪ್ರೇಮ, ವಿದ್ಯಾದಾನ ಕಾರ್ಯಗಳಿಂದ ಜಿ.ಎ. ಹೈಸ್ಕೂಲು ಅಲ್ಪಾವಧಿಯಲ್ಲಿಯೇ ಅಗ್ರಪಂಕ್ತಿಯ ಶಿಕ್ಷಣ ಸಂಸ್ಥೆಯಾಗಿ ಬೆಳೆದುನಿಂತಿತು. ಈ ಸಂಸ್ಥಾಪಕರೆಲ್ಲರೂ ಒಡಹುಟ್ಟಿದವರಂತೆ, ಒಂದೇ ಮನೆಯ ಕರುಳಬಳ್ಳಿಯಂತೆ ಇದ್ದರು. ಇವರು ತಮ್ಮ ಮನೆಯನ್ನು ಮನೆಯವರನ್ನೂ ಮರೆತು ಶಿಕ್ಷಣಸಂಸ್ಥೆ ಕಟ್ಟಿದರು. ಮಾಧ್ಯಮಿಕ ಶಿಕ್ಷಣ ಪ್ರಸಾರ ಮಾಡಿದರು ಇಂಥ ಶಿಕ್ಷಣ ಪ್ರೇಮಿಗಳ ತ್ಯಾಗಜೀವನ, ಕರ್ಮಶೀಲತೆಗಳಿಂದ ನಾಡಿನಲ್ಲಿ ಮಾಧ್ಯಮಿಕ-ಶಿಕ್ಷಣಪ್ರಸಾರ ತೀವ್ರಗೊಳ್ಳಲು, ಸಮೃದ್ಧವಾಗಿ ಬೆಳೆಯಲು ಸಾಧ್ಯವಾಯಿತು.

ಆರಂಭದಲ್ಲಿ ಈ ಜಿ.ಎ. ಹೈಸ್ಕೂಲಿನಲ್ಲಿ ೧ರಿಂದ ೫ನೇ ಇಯತ್ತೆವರೆಗೆ ತರಗತಿಗಳು ನಡೆಯುತ್ತಿದ್ದವು. ಡಿಸೆಂಬರ ೧೯೧೭ ರಿಂದ ೬ನೇ ಇಯತ್ತೆ ಪ್ರಾರಂಭವಾದರೆ ಜೂನ ೧೯೧೮ರಿಂದ ಮ್ಯಾಟ್ರಿಕ್ ತರಗತಿ ಆರಂಭಗೊಂಡಿತು. ಈ ಹೈಸ್ಕೂಲಿಗೆ ಬಸವನಾಳರ ಸಹಪಾಠಿಗಳೂ ಎಂ.ಎ.ದಲ್ಲಿ ಇವರಿಗಿಂತ ಕಡಿಮೆ ಅಂಕ ಗಳಿಸಿದವರೂ ಆದ ಶ್ರೀ

ಎಂ. ಆರ್. ಶಾಬಿರೆಯವರು ಮುಖ್ಯಾಧ್ಯಾಪಕರಾದರು. ಬಸವನಾಳರು ಇಂಗ್ಲಿಷ್ ಭಾಷೆ ಇತಿಹಾಸಗಳ ನಾಮಾಂಕಿತ ಶಿಕ್ಷಕರಾಗಿ ಪಾಠ ಬೋಧನೆ ಕಾರ್ಯ ನಿರ್ವಹಿಸುತ್ತಿದ್ದರು. ಬಸವನಾಳರ ಪಾಠಬೋಧನೆಗೆ ಕಾಲದ ಮಿತಿ ಇರುತ್ತಿರಲಿಲ್ಲ. ಅವರ ಅದು ನೀರಸವಾದ ಬೋಧನೆಯಲ್ಲ. ವಿದ್ಯಾರ್ಥಿಗಳನ್ನು ಮಂತ್ರಮುಗ್ಧರನ್ನಾಗಿಸುವ, ಅವರ ಭಾವಗಳನ್ನು ಅರಳಿಸುವ, ಹೃದಯವನ್ನು ತಟ್ಟುವ ಪಾಠಬೋಧನೆಯಾಗಿದ್ದಿತು. ಆಗ ಬಸವನಾಳರು ಅತ್ಯಂತ ಜನಪ್ರಿಯ, ಆಕರ್ಷಕ ಶಿಕ್ಷಕರು. ಇವರ ಪಾಠಬೋಧನೆಯ ಜನಪ್ರಿಯತೆ ನಾಡಿನುದ್ದಕ್ಕೂ ಪಸರಿಸಿತು. ಇದರಿಂದ ಇವರ ತರಗತಿಗಳಿಗೆ ಸ್ಥಳೀಯ ಬೇರೆ ಹೈಸ್ಕೂಲಿನ ವಿದ್ಯಾರ್ಥಿಗಳೂ ಹಾಜರಿರುತ್ತಿದ್ದರು. ಬೆಳಗಾವಿಯಲ್ಲದೆ ಧಾರವಾಡ, ವಿಜಾಪುರ, ಕಾರವಾರ, ಬಳ್ಳಾರಿ, ಮೈಸೂರು ಪ್ರದೇಶಗಳಿಂದಲೂ ವಿದ್ಯಾರ್ಥಿಗಳು ಬಂದು ಈ ಹೈಸ್ಕೂಲಿನಲ್ಲಿ ಪ್ರವೇಶ ಪಡೆಯುವಂತಾಯಿತು. ತಮ್ಮ ಕಾರ್ಯದಕ್ಷತೆ, ಶೈಕ್ಷಣಿಕಶಿಸ್ತು, ವಿಶಾಲವ್ಯಾಸಂಗ, ಪ್ರಾಮಾಣಿಕ ಸೇವೆಗಳ ಮೂಲಕ ಈ ಹೈಸ್ಕೂಲನ್ನು ನಾಡಿನಲ್ಲಿಯೇ ಒಂದು ಮಾದರಿಯ ಶಿಕ್ಷಣಸಂಸ್ಥೆಯಾಗಿ ಅವರು ಬೆಳೆಸಿದರು. ಆ ಮೂಲಕ ವಿದ್ಯಾರ್ಥಿಗಳಲ್ಲಿ ನೈತಿಕಸ್ಥೈರ್ಯ ಸಾಮಾಜಿಕ ಜವಾಬ್ದಾರಿ, ಸೇವಾಭಾವ, ಸಂಘಟನಾ ಶಕ್ತಿ ಮೊದಲಾದ ಸಮಾಜನಿಷ್ಠ ಗುಣಗಳನ್ನು ರೂಢಿಸಿದರು. ಸಮಾಜಸೇವೆ, ನಾಡಸೇವೆ ರಾಷ್ಟ್ರ ಸೇವೆಗಳಿಗಾಗಿ ಅವರನ್ನು ಅಣಿಗೊಳಿಸಿದರು.

ಆರಂಭದಲ್ಲಿ ಈ ಶಿಕ್ಷಕರು ಸಂಯುಕ್ತವಾಗಿ ಪಡೆಯುತ್ತಿದ್ದ ಸಂಬಳ ರೂ ೧೦೦ ಮಾತ್ರ. ಮುಂದೆ ಹೈಸ್ಕೂಲು ವಿದ್ಯಾರ್ಥಿಗಳಿಂದ ೪೦ ಹಣ ಬರತೊಡಗಿತು. ಆಗ ಇವರೆಲ್ಲರೂ ಕೂಡಿ ೧೫೦ ರೂಪಾಯಿ ಪಡೆಯುತ್ತಿದ್ದರು. ೧೯೧೭ರಿಂದ ಇದು ಪೂರ್ಣ ಪ್ರಮಾಣದ ಹೈಸ್ಕೂಲಾಯಿತು. ಅಂದಿನಿಂದ ಇಲ್ಲಿಯ ಪ್ರತಿಯೊಬ್ಬ ಶಿಕ್ಷಕರೂ ತಿಂಗಳಿಗೆ ೨.೫ ರೂಪಾಯಿ ಸಂಬಳ ಪಡೆಯುವಂತಾಯಿತು. ವಾಚನಾಲಯ ಗ್ರಂಥಾಲಯ ಸ್ಥಾಪಿಸಿ, ಹೈಸ್ಕೂಲು ವಿದ್ಯಾರ್ಥಿಗಳಲ್ಲಿ ವಾಚನಾಭಿರುಚಿ, ಜ್ಞಾನಸಂಗ್ರಹ ಪ್ರವೃತ್ತಿಗಳು ಅಧಿಕಗೊಳ್ಳುವಂತೆ ಮಾಡಿದರು. ಜೊತೆಗೆ ವಿದ್ಯಾರ್ಥಿಗಳೊಂದಿಗೆ ಅನ್ಯೋನ್ಯವಾಗಿ ಬೆರೆತು, ಅವರ ಶೈಕ್ಷಣಿಕ ಬದುಕನ್ನು ಹಸನುಗೊಳಿಸಿದರು. ವಿದ್ಯಾರ್ಥಿಗಳನ್ನು ಹೈಸ್ಕೂಲು ಪರೀಕ್ಷೆಗಳಿಗೆ ಮಾತ್ರ ಸಿದ್ಧಗೊಳಿಸದೆ, ಅವರು ಜೀವನಪರೀಕ್ಷೆಯಲ್ಲಿಯೂ ಪಾಸಾಗುವಂತೆ ತರಬೇತಿ ನೀಡಿದರು. ಬಸವನಾಳರ ಪಾಠ ಬೋಧನೆ Examination oriented ಆಗಿರದೆ Knowledge oriented ರೂಪದ್ದಾಗಿದ್ದಿತು. ಇಂಥ ಶಿಕ್ಷಕರಿಂದ ವ್ಯಕ್ತಿಗೌರವ, ಆತ್ಮಗೌರವಗಳು ಅಧಿಕಗೊಳ್ಳುವಂತಾಯಿತು. ಈ ಆದರ್ಶ ಹಾಗೂ ಜನಪ್ರಿಯ ಶಿಕ್ಷಕರಿಂದ ಹೈಸ್ಕೂಲ್ ಪ್ರವೇಶ ದಟ್ಟಣೆಗೊಂಡಿತು. ಇದರಿಂದ ಈ ಹೈಸ್ಕೂಲಿಗೆ ಹೊಸ ಕಟ್ಟಡಗಳು ಕಟ್ಟಲ್ಪಟ್ಟವು.

ಓಗ ಈ ಶಿಕ್ಷಕರು ಮಾಧ್ಯಮಿಕ ಶಾಲೆಯನ್ನೂ ಶಿಕ್ಷಣ ಪ್ರಸಾರವನ್ನೂ ಹುಲುಸಾಗಿ ಬೆಳೆಸಿದ ಕೀರ್ತಿಗೆ ವಂದಿತರೆನಿಸಿದರು.

ಬಸವನಾಳರು ಸಂಬಳಕ್ಕಾಗಿ, ಉದರ ಪೋಷಣೆಗಾಗಿ ಶಿಕ್ಷಕವೃತ್ತಿ ಕೈಕೊಂಡವರಲ್ಲ. ಶಿಕ್ಷಣಪ್ರಸಾರಕ್ಕಾಗಿ ಸಮಾಜದ ಸಂವರ್ಧನೆಗಾಗಿ, ವಿದ್ಯೆಯ ಮೇಲಿನ ಪ್ರೀತಿಗಾಗಿ, ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ದುಡಿದವರು ಇವರಾಗಿದ್ದಾರೆ. ಇವರು ಶಿಕ್ಷಕ ವೃತ್ತಿಯಿಂದ, ಶಿಕ್ಷಣಸಂಸ್ಥೆಯ ಸ್ಥಾಪನೆಯಿಂದ, ಶಿಕ್ಷಣಪ್ರಸಾರಕಾರ್ಯಗಳಿಂದ ಗಳಿಸಿದ್ದು ಹಣವನ್ನಲ್ಲ; ಜನರ ಪ್ರೀತಿಯನ್ನು. ಬಯಸಿದ್ದು ತಮ್ಮ ಉದ್ಧಾರವನ್ನಲ್ಲ; ಸಮಾಜದ ಶ್ರೇಯೋಭಿವೃದ್ಧಿಯನ್ನು. ಅಧಿಕಾರ ಅಂತಸ್ತು, ಹಣಗಳಿಗಾಗಿ ಎಂದೂ ಆಮಿಷಪಟ್ಟವರಲ್ಲ. 'ಮಾವಿನ ಕಾಯೊಳಗೊಂದು ಎಕ್ಕಿಯ ಕಾಯಾಗಿ' ಬಸವನಾಳರು ಮಾಧ್ಯಮಿಕ ಶಿಕ್ಷಣಪ್ರಸಾರ ಮಾಡಿದರು. 'ಎನಗಿಂತ ಕಿರಿಯರಿಲ್ಲ'ವೆಂಬ ಕಿಂಕರಭಾವದಿಂದ ಶಿಕ್ಷಕರಾಗಿ ಸೇವೆಸಲ್ಲಿದರು. ಸದುವಿನಯದ ಸಾಕಾರಮೂರ್ತಿಯಾದ ಬಸವನಾಳರು ಶಿಕ್ಷಣಕ್ಷೇತ್ರದ ತಮ್ಮ ಸಹೋದ್ಯೋಗಿಗಳಿಗೆ ವಿದ್ಯಾರ್ಥಿಗಳಿಗೆ ಎಂದೂ ಕಠೋರ ನುಡಿಗಳನ್ನು ಆಡಿದವರಲ್ಲ. ಸ್ವಾರ್ಥತ್ಯಾಗ, ಪ್ರೀತಿ, ಸೇವೆಗಳು ಬಸವನಾಳರ ವ್ಯಕ್ತಿತ್ವದ ಪ್ರಮುಖ ಲಕ್ಷಣಗಳು, ಶಿಕ್ಷಕನಲ್ಲಿರಬೇಕಾದ ಯೋಗ್ಯತೆ, ವಿನಯಶೀಲತೆ, ವಿದ್ಯಾಸಂಪನ್ನತೆ, ದಕ್ಷತೆ. ಪ್ರಾಮಾಣಿಕತೆ, ಸೇವಾಭಾವ ಅದಮ್ಯ ಉತ್ಸಾಹ ಮೊದಲಾದ ಮೂಲಭೂತ-ಗುಣಗಳು ಇವರಲ್ಲಿ ಸಹಜವಾಗಿ ನಿಕ್ಷಿಪ್ತಗೊಂಡಿದ್ದವು.

ಸಂಸ್ಥೆ ಕಟ್ಟುವುದು ಮುಖ್ಯವಲ್ಲ. ಅದನ್ನು ಬೆಳಸುವದೂ ಅಲ್ಲಿ ಯೋಗ್ಯ ಹಾಗೂ ದಕ್ಷ ಶಿಕ್ಷಕರನ್ನು ನೇಮಕ ಮಾಡುವುದೂ ಬಹಳ ಮುಖ್ಯವಾಗಿರುತ್ತದೆ. ಅದುದರಿಂದ ಬಸವನಾಳರಂಥ ದಕ್ಷ ಹಾಗೂ ಸೇವಾಭಾವದ ಶಿಕ್ಷಕರಿರುವುದರಿಂದಲೇ ಈ ಶಿಕ್ಷಣ ಸಂಸ್ಥೆಯ ಬೆಳವಣಿಗೆ. ಶಿಕ್ಷಣ ಪ್ರಸಾರ ಸಾಧ್ಯವಾಯಿತು. ಸಂಸ್ಥೆಯ ಕಾರ್ಯ ಸಣ್ಣದೇ ಇರಲಿ, ದೊಡ್ಡದೇ ಆಗಿರಲಿ ಅದರಲ್ಲಿ ತಾರತಮ್ಯ ಎಣಿಸದೆ ಬಸವನಾಳರು ಸಮತಾಭಾವ ದಿಂದ ಕೆಲಸ ಮಾಡುತ್ತಿದ್ದರು. ಇವರದು ದಣಿವರಿಯದ ದುಡಿಮೆ. ಶಿಕ್ಷಣ ಸಂಸ್ಥೆ, ಶಿಕ್ಷಕವೃತ್ತಿ, ಅಂತಸ್ತು, ಅಧಿಕಾರಗಳನ್ನು ಬಸವನಾಳರು ಎಂದೂ ತಮ್ಮ ಸ್ವಾರ್ಥಕ್ಕಾಗಿ ಬಳಸಿ ಕೊಂಡವರಲ್ಲ. ಮೆಚ್ಚುಗೆಗಾಗಲಿ, ಜನರಂಜನೆಗಾಗಲೀ ಅವರು ಪ್ರಯತ್ನಿಸಿದವರಲ್ಲ. ಶಿಕ್ಷಣ ಪ್ರಸಾರ, ಆ ಮೂಲಕ ಸಮಾಜದ ಶ್ರೇಯೋಭಿವೃದ್ಧಿ-ಇವು ಬಸವನಾಳರ ಪರಮಧ್ಯೇಯ.

ಬೆಳಗಾವಿಯಲ್ಲಿ ಗಿಲಗಂಚಿ ಅರಟಾಳ ಹೈಸ್ಕೂಲಿನ ಉತ್ಕರ್ಷಕ್ಕಾಗಿ, ಮಾಧ್ಯಮಿಕ ಶಿಕ್ಷಣದ ಪ್ರಸಾರಕ್ಕಾಗಿ ಬಸವನಾಳರು ರಾತ್ರಿಯನ್ನೂ ಹಗಲನ್ನಾಗಿಸಿ ದುಡಿದರು. ಇದರಿಂದ ಹೈಸ್ಕೂಲು ಸರ್ವಾಂಗ ಸುಂದರವಾಗಿ ಸಂಪೂರ್ಣವಾಗಿ ಬೆಳೆದು

ನಿಲ್ಲುವಂತಾಯಿತು. 'ಮಾಡುವವನೂ ನೀನೆ, ಮಾಡಿಸಿಕೊಂಬುವನೂ ನೀನೆ' ಎಂದು ನಂಬಿದ ಬಸವನಾಳರು ಆಮೇಲೆ ಧಾರವಾಡದಲ್ಲಿ ಹೈಸ್ಕೂಲುಗಳ ಸಂಖ್ಯೆ ಕಡಿಮೆ ಇರುವದನ್ನು ಗಮನಿಸಿ, ೧೯೨೨ರಲ್ಲಿ ಸಮಾಜೋನ್ನತಿಗಾಗಿ ಶ್ರಮಿಸಿದ ವಂಟಮುರಿಯ ರಾಜಾ ಲಖಮನಗೌಡ ಸರದೇಸಾಯಿ ಅವರ ಹೆಸರಿನಲ್ಲಿ ಹೊಸ ಮಾಧ್ಯಮಿಕ ಶಾಲೆಯನ್ನು ತೆರೆದು ಮಹಾದಾನಿ ಸರದೇಸಾಯಿಯವರ ಹೆಸರನ್ನು ಅಜರಾಮರಗೊಳಿಸಿದರು. ಈ ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕರಾಗಿ ೧೯೨೨ ರಿಂದ ೧೯೩೩ ರವರೆಗೂ ಬಸವನಾಳರು ಅವಿರತವಾಗಿ ಕಾರ್ಯಮಾಡಿದರು. ತಮ್ಮ ಪುರುಷಮಯ ವ್ಯಕ್ತಿತ್ವ, ಕರ್ತೃತ್ವಶಕ್ತಿ, ಉದಾತ್ತ ವಿಚಾರ, ತ್ಯಾಗಭಾವ, ಸೇವಾಮನೋಭಾವ, ದಕ್ಷತೆ, ಪ್ರಾಮಾಣಿಕತೆಗಳಿಂದ ಇದನ್ನು ಈ ಭಾಗದ ಮಾದರಿ ಮಾಧ್ಯಮಿಕ ಶಾಲೆಯನ್ನಾಗಿ ರೂಪಿಸಿದರು. ಆ ಮೂಲಕ ನಾಡಿನುದ್ದಕ್ಕೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಮಾಧ್ಯಮಿಕ ಶಿಕ್ಷಣ ಪ್ರಸಾರವನ್ನು ಪ್ರಸಾರಗೊಳಿಸಿದರು.

ಈ ಮಾಧ್ಯಮಿಕ ಶಾಲೆಗಳಲ್ಲದೆ ಕರ್ನಾಟಕದ ಗಡಿ ಪ್ರದೇಶವಾದ ಸೊಲ್ಲಾಪುರದಲ್ಲಿ ಕಾಡಾದಿ ಬಂಧುಗಳ ಉದಾರ ಧನಸಹಾಯದಿಂದ ಅಣ್ಣಪ್ಪ ಕಾಡಾದಿ ಹೈಸ್ಕೂಲು, ಬಾರ್ಶಿಯಲ್ಲಿ ಸಿಲ್ವರಜ್ಯೂಬಿಲಿ ಹಾಯಸ್ಕೂಲು : ಅಕ್ಕಲಕೋಟ, ಮಂಗೋಳಿಯಲ್ಲಿ ಒಂದೊಂದು ಹೈಸ್ಕೂಲುಗಳನ್ನು ತೆರೆದರು. ಹೀಗೆ ಗಡಿಪ್ರದೇಶದಲ್ಲಿ ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸಿ, ಕನ್ನಡ ಭಾಷೆ ಹಾಗೂ ಕನ್ನಡಿಗರ ಜಾಗೃತಿ, ಶ್ರೇಯೋಭಿವೃದ್ಧಿಯನ್ನೂ ಮಾಧ್ಯಮಿಕ ಶಿಕ್ಷಣ ಪ್ರಸಾರವನ್ನೂ ನೆರವೇರಿಸಿದರು. ಇದರೊಂದಿಗೆ ಬಾಗಲಕೋಟೆಯಲ್ಲಿ ಬಸವೇಶ್ವರ ಹೈಸ್ಕೂಲು, ವಿಜಾಪುರದಲ್ಲಿ ಸಿದ್ಧೇಶ್ವರ ಹೈಸ್ಕೂಲುಗಳನ್ನು ಪ್ರಾರಂಭಿಸಿದ ಕೀರ್ತಿ ಇವರದಾಗಿದೆ. ಹುಕ್ಕೇರಿ ತಾಲೂಕಿನ ಬೆಲ್ಲದ ಬಾಗೇವಾಡಿಯಂಥ ಗ್ರಾಮೀಣ ಪ್ರದೇಶದಲ್ಲಿಯೂ ಹೈಸ್ಕೂಲು ಆರಂಭಿಸಿದರು. ಬಳ್ಳಾರಿ, ಗುಲಬರ್ಗಾಗಳಲ್ಲಿ ತೆರೆದ ಶಿಕ್ಷಣ ಸಂಸ್ಥೆಗಳಿಗೆ ಇವರು ಮುಕ್ತ ಸಹಕಾರ, ಸಮರ್ಪಕ ಸೂಚನೆ, ಅನುಪಮ ಪ್ರೇರಣೆ ನೀಡಿದರು. ಹೀಗೆ ಉತ್ತರ ಕರ್ನಾಟಕ ಗಡಿಪ್ರದೇಶಗಳ ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆ ಮತ್ತು ಮಾಧ್ಯಮಿಕ ಶಿಕ್ಷಣ ಪ್ರಸಾರ ಕಾರ್ಯಗಳಲ್ಲಿ ತಮ್ಮನ್ನು ಕ್ರಿಯಾತ್ಮಕವಾಗಿ, ತಲಸ್ಪರ್ಶಿಯಾಗಿ ತೊಡಗಿಸಿಕೊಂಡರು. ಈ ಶೈಕ್ಷಣಿಕ ಚಟುವಟಿಕೆಯ ಎಲ್ಲ ಹಂತಗಳಲ್ಲಿಯೂ ಬಸವನಾಳರು ಯಾವ ಫಲಾಪೇಕ್ಷೆಯಿಲ್ಲದೆ, ಸ್ವಾರ್ಥವಿಲ್ಲದೆ ಪ್ರಾಂಜಲ ಮನಸ್ಸಿನಿಂದ ಕಾರ್ಯಮಾಡಿ 'ನಿಷ್ಕಾಮ ಕರ್ಮಯೋಗಿ' ಎನಿಸಿದರು.

ಬಸವನಾಳರು ತಮ್ಮ ಉಜ್ವಲವಾದ ಶೈಕ್ಷಣಿಕ ಚಟುವಟಿಕೆಗಳ ಮೂಲಕ ಉತ್ತರ ಕರ್ನಾಟಕದಲ್ಲಿ, ವಿಶೇಷವಾಗಿ ಗಡಿನಾಡಿನಲ್ಲಿ ಮಾಧ್ಯಮಿಕ ಶಿಕ್ಷಣಪ್ರಸಾರಕಾರ್ಯ

ಮಾಡಿದರು. ಕನ್ನಡ ಭಾಷೆಯನ್ನೂ ಕನ್ನಡಿಗರನ್ನೂ ಜಾಗ್ರತಗೊಳಿಸಿದರು. ಇದರಿಂದ ಜನತೆಯಲ್ಲಿ ನಾಡು-ನುಡಿಗಳ ಬಗೆಗೆ ಅಭಿಮಾನ, ಸ್ವಾಭಿಮಾನ ಮೂಡಿಬರಲು ಸಾಧ್ಯವಾಯಿತು. ಜೊತೆಗೆ ಈ ಪ್ರದೇಶದ ಜನತೆಯ ಬದುಕು ಉದ್ದೀಪನಗೊಳ್ಳಲೂ ಅನುಕೂಲವಾಯಿತು. ಹೀಗೆ ಬಸವನಾಳರ ಸಮಸ್ತ ಕಾರ್ಯಗಳಿಗೆ ಬೆಳಗಾವಿಯೇ ಕೇಂದ್ರ ಶಕ್ತಿಯೆನಿಸಿತು. ಈ ಶಕ್ತಿಕೇಂದ್ರದಿಂದಲೇ ಈ ಪ್ರದೇಶದ, ವಿಶೇಷವಾಗಿ ಗಡಿಪ್ರದೇಶದ ಶಿಕ್ಷಣ ಹಾಗೂ ಜನತೆಯ ಕಲ್ಯಾಣ ಸಾಧ್ಯವಾಯಿತು. ಇದು ಬಸವನಾಳರ ದೂರದೃಷ್ಟಿಯ ಫಲ, ಮಹಾದಾರ್ಶನಿಕತೆಯ ದ್ಯೋತಕವಾಗಿದೆ.

ಬಸವನಾಳರು ಮ್ಯಾಟ್ರಿಕ್ ಪರೀಕ್ಷೆಯ ಪರೀಕ್ಷಕರಾಗಿ, ಅಭ್ಯಾಸ ಮಂಡಳಿಯ ಸದಸ್ಯರಾಗಿ ಮಾಧ್ಯಮಿಕ ಶಿಕ್ಷಣ ಕ್ಷೇತ್ರಕ್ಕೆ ಗಣನೀಯ ಸೇವೆ ಸಲ್ಲಿಸಿದರು. ಇದರೊಂದಿಗೆ ಮಾಧ್ಯಮಿಕ ಶಿಕ್ಷಣದ ಅಧ್ಯಯನಕ್ಕೆ ಅಗತ್ಯವೆನಿಸಿದ ಹಿಂದೂ ದೇಶದ ಚರಿತ್ರೆ, ಇಂಗ್ಲಂಡದ ಅರ್ವಾಚೀನ ಇತಿಹಾಸ (ಹಡಗಲಿ ಹಂಪಯ್ಯನೊಂದಿಗೆ) ಮೊದಲಾದ ಪಠ್ಯಪುಸ್ತಕಗಳನ್ನು ರಚಿಸಿದರು. ಇದಲ್ಲದೆ ಜಿಲ್ಲಾ ಹೆಡ್‌ಮಾಸ್ತರ ಬೋರ್ಡ್, ಪ್ರಾಂತಿಕ ಮಾಧ್ಯಮಿಕ ಶಿಕ್ಷಕರ ಪರಿಷತ್ತು, ಹಾಗೂ ಸೆಕಂಡರಿ ಸ್ಕೂಲ್ಸ್ ಅಥೆಲೆಟಿಕ್ ಅಸೋಸಿಯೇಶನ್‌ಗಳ ಕಾರ್ಯದರ್ಶಿಯಾಗಿಯೂ ಕರ್ನಾಟಕ ಎಜ್ಯುಕೇಶನ್ ವೀಕ್ ಹೆಸರಿನ ಶೈಕ್ಷಣಿಕ ಸಮ್ಮೇಳನದ ಸಂಯೋಜಕರಾಗಿಯೂ ಇವರು ನಿಷ್ಠೆಯಿಂದ ಕಾರ್ಯ ಮಾಡಿದ್ದಾರೆ. ಹೀಗೆ ಈ ಪ್ರದೇಶದ ಮಾಧ್ಯಮಿಕ ಶಿಕ್ಷಣ ಪ್ರಸಾರಕ್ಕೆ ಸಂಬಂಧಿಸಿದ ಯಾವ ಮತ್ತು ಎಂಥ ಕಾರ್ಯವಿದ್ದರೂ ಅದನ್ನು ಬಸವನಾಳರು ಕೈಮುಟ್ಟಿ ಮನಮುಟ್ಟಿ ಮಾಡಿದ್ದಾರೆ.

ಹೀಗೆ ಬಸವನಾಳರು ಶಿಕ್ಷಣ ಸಂಸ್ಥೆಗಳ ಸ್ಥಾಪಕರಾಗಿ, ಶಿಕ್ಷಕರಾಗಿ, ಪರೀಕ್ಷಕರಾಗಿ, ಮುಖ್ಯಾಧ್ಯಾಪಕರಾಗಿ, ಪಠ್ಯಪುಸ್ತಕ ನಿರ್ಮಾಪಕರಾಗಿ, ಶಿಕ್ಷಣ ಸಲಹೆಗಾರರಾಗಿ, ಶೈಕ್ಷಣಿಕ ಚಟುವಟಿಕೆಗಳ ಸಂಘಟಕರಾಗಿ, ಸಂಯೋಜಕರಾಗಿ ಮಾಡಿದ ಮಾಧ್ಯಮಿಕ ಶಿಕ್ಷಣ ಪ್ರಸಾರ ಕಾರ್ಯ ಅತ್ಯಂತ ಅಮೂಲ್ಯವಾದುದಾಗಿದೆ.

ಒಟ್ಟಿನಲ್ಲಿ ಮಾಧ್ಯಮಿಕ ಶಿಕ್ಷಣ ಪ್ರಸಾರದ ಈ ಕಾರ್ಯವನ್ನು ಬಸವನಾಳರು ಮಾಡಿದರೆನ್ನುವುದಕ್ಕಿಂತ ವಿದ್ಯಾಪ್ರೇಮ, ಸೇವಾಭಾವ, ಶೈಕ್ಷಣಿಕಕಾಳಜಿ, ಸಾಮಾಜಿಕ ಅಂತಃಕರಣ, ನಾಡು-ನುಡಿಗಳ ಮೇಲಿನ ಪ್ರೀತಿಗಳು ಬಸವನಾಳರಿಂದ ಈ ಕಾರ್ಯವನ್ನು ಮಾಡಿಸಿದವೆಂದು ಹೇಳುವುದು ಹೆಚ್ಚು ಸೂಕ್ತವೆನಿಸುತ್ತದೆ. ಇವರು ತಾವು ಬೆಳೆಯುವುದರೊಂದಿಗೆ ಶಿಕ್ಷಣಸಂಸ್ಥೆ, ವಿದ್ಯಾರ್ಥಿ, ಸಮಾಜ, ಶಿಕ್ಷಣ ಕ್ಷೇತ್ರಗಳನ್ನೂ ಬೆಳೆಸಿದರು. ತಮ್ಮ ಶಿಕ್ಷಕವೃತ್ತಿಯಿಂದ ವಿದ್ಯಾರ್ಥಿಗಳಲ್ಲಿ ಜ್ಞಾನಜ್ಯೋತಿಯನ್ನು ಹೊತ್ತಿಸಿದರೆ, ಮಾಧ್ಯಮಿಕ ಶಿಕ್ಷಣ ಪ್ರಸಾರದಿಂದ ರೋಗಗ್ರಸ್ತ ಸಮಾಜದಲ್ಲಿ ನವಮನ್ವಂತರವನ್ನು ಉಂಟುಮಾಡಿದರು. ನಾಡಿನಲ್ಲಿ ವೃತ್ತಿಗೌರವವನ್ನು ಹೆಚ್ಚಿಸಿದ,

ಆತ್ಮಗೌರವವನ್ನು ಕಾಪಾಡಿದ. ಮಾಧ್ಯಮಿಕ ಶಿಕ್ಷಣ ಪ್ರಸಾರದ ಮೂಲಕ ಸಮಾಜೋನ್ನತಿ-ಬಯಸಿದ ಅನನ್ಯತೆ ಬಸವನಾಳರದಾಗಿದೆ.

'ಸುಖ ಬಂದಡೆ ಪುಣ್ಯದ ಫಲವೆನ್ನದೆ, ದುಃಖ ಬಂದಡೆ ಪಾಪದ ಫಲವೆನ್ನದೆ' ಬಸವನಾಳರು ಮಾಧ್ಯಮಿಕ ಶಿಕ್ಷಣ ಪ್ರಸಾರ ಮಾಡಿದರು. ಅದರ ಮೂಲಕ ಸಮಾಜದ ಅರಿವನ್ನು ಅರಳಿಸಿದರು; ನವಸಮಾಜ ನಿರ್ಮಾಣ ಕಾರ್ಯವನ್ನು ಕೈಕೊಂಡರು. ಇಂಥ ಶಿಕ್ಷಣ ಪ್ರಸಾರಕರು ಸಾರ್ವಕಾಲಿಕ ವ್ಯಕ್ತಿಗಳೆನಿಸಿ, ಸಮಾಜಪೂಜ್ಯರೂ ಲೋಕವಂದಿತರೂ ಆಗಿ ನಿಲ್ಲುತ್ತಾರೆ. ಹೀಗೆ ಶಿಕ್ಷಣ ಪ್ರಸಾರಕ ಬಸವನಾಳರು ಕೇವಲ ವೀರಶೈವ ಸಮಾಜ, ಕರ್ನಾಟಕಗಳ ಆಸ್ತಿಯಲ್ಲ; ಅವರು ದೇಶದ, ಸಮಸ್ತ ಶಿಕ್ಷಣ ಕ್ಷೇತ್ರದ ಅಮೂಲ್ಯ ಸಂಪತ್ತು.

ಬಸವನಾಳರ ಚರಿತ್ರೆಯೆಂದರೆ ತ್ಯಾಗಜೀವಿಯ, ಕರ್ಮಯೋಗಿಯ, ಶಿಕ್ಷಣತಜ್ಞನ, ಶಿಕ್ಷಣ ಪ್ರಸಾರಕನ, ಸಮಾಜ ಶಿಲ್ಪಿಯ, ಆದರ್ಶ ಶಿಕ್ಷಕನ, ಮಾನವಪ್ರೇಮಿಯ ಅಮರಕಥೆಯೆಂದೇ ಹೇಳಬಹುದಾಗಿದೆ. ಬಸವನಾಳರು ಶಿಕ್ಷಣಸಂಸ್ಥೆ ಶಿಕ್ಷಣ ಪ್ರಸಾರಗಳನ್ನು ಎಂದೂ ವ್ಯಾಪಾರಕ್ಕಿಳಿಸಿದವರಲ್ಲ. ಶಿಕ್ಷಣಸಂಸ್ಥೆ ಶಿಕ್ಷಣಪ್ರಸಾರಗಳನ್ನು ವ್ಯಾಪಾರೀಕರಣ ಮಾಡುತ್ತಿರುವ ಇಂದಿನ ವ್ಯಕ್ತಿಗಳು ಬಸವನಾಳರನ್ನು, ಅವರು ಮಾಡಿದ ಮಹತ್ ಕಾರ್ಯಗಳನ್ನು ಅವಶ್ಯ ಗಮನಿಸಬೇಕಾಗಿದೆ.

ಶಿಕ್ಷಣಪ್ರೇಮಿ ಬಸವನಾಳರು ಇಂದಿನ ವಿದ್ಯಾಸಂಸ್ಥೆಗಳ ಸ್ಥಾಪಕರಿಗೆ, ಶಿಕ್ಷಕರಿಗೆ, ವಿದ್ಯಾಸಂಸ್ಥೆಗಳಿಗೆ, ವಿದ್ಯಾ ಪ್ರಸಾರಕರಿಗೆ ಮಾದರಿಯೆನಿಸಿದ್ದಾರೆ. ಮಾರ್ಗದರ್ಶಿಯಾಗಿದ್ದಾರೆ. ಶೈಕ್ಷಣಿಕ ಮೌಲ್ಯಗಳನ್ನು ಬದುಕಿದ ಬಸವನಾಳರು ಅವುಗಳಿಗೆ ದೃಷ್ಟಾಂತವಾಗಿ ಪರಿಣಮಿಸಿದರು. ಶಿಕ್ಷಣಕ್ಷೇತ್ರದಲ್ಲಿ, ಮಾಧ್ಯಮಿಕ ಶಿಕ್ಷಣ ಪ್ರಸಾರ ಕಾರ್ಯದಲ್ಲಿ ಬಸವನಾಳರಿಗೆ ಬಸವನಾಳರೇ ಉಜ್ವಲ ಉದಾಹರಣೆ. ಹೀಗೆ ತಂದೆ ಶಿವಯೋಗಪ್ಪನವರು ರೇಲ್ವೆ ಸ್ಟೇಶನ್‌ದ ಮಾಸ್ತರರಾಗಿ ಉಗಿಬಂಡಿ ಮೂಲಕ ಜನರ ಪ್ರಯಾಣವನ್ನು ಸುಖಕರವೂ ಸುರಕ್ಷಿತವೂ ಆಗಿ ಮಾಡಿದರೆ, ಮಗ ಶಿವಲಿಂಗಪ್ಪ ಬಸವನಾಳರು ಮಾಧ್ಯಮಿಕ ಶಾಲೆಯ ಮಾಸ್ತರರಾಗಿ ಶಿಕ್ಷಣ ಪ್ರಸಾರದ ಮೂಲಕ ಸಮಾಜದ ಯೋಗಕ್ಷೇಮವನ್ನೆ ನೋಡಿಕೊಂಡರು. ಈ ರೀತಿಯಾಗಿ ಬಸವನಾಳರು ವಾರವೆಂದರಿಯದೆ, ದಿನವೆಂದರಿಯದೆ, ಇರುಳೆಂದರಿಯದೆ, ಹಗಲೆಂದರಿಯದೆ, ಏನೆಂದರಿಯದೇ ಮಾಧ್ಯಮಿಕ ಶಿಕ್ಷಣಪ್ರಸಾರ ಮಾಡುತ್ತ ಮಾಡುತ್ತ ತಮ್ಮನ್ನೇ ಮರೆತರು. ಹೀಗೆ ಬಸವನಾಳರು ಶಿಕ್ಷಣ ಸಂಸ್ಥೆಗಳ ಸ್ಥಾಪಕರ ಸ್ಥಾಪಕರಾಗಿ, ಶಿಕ್ಷಕರ ಶಿಕ್ಷಕರಾಗಿ, ಶಿಕ್ಷಣತಜ್ಞರ ಶಿಕ್ಷಣತಜ್ಞರಾಗಿ, ಮಾಧ್ಯಮಿಕ ಶಿಕ್ಷಣ ಪ್ರಸಾರಕರ ಶಿಕ್ಷಣ ಪ್ರಸಾರಕರಾಗಿ ಕಂಗೊಳಿಸಿದರು.

ಬಸವನಾಳರ ಸಮಗ್ರ ಸಾಹಿತ್ಯ ಸಂಪುಟ ಹೊರತರಬೇಕು. ಈ ಶತಮಾನೋತ್ಸವದ

ಸಂಸ್ಕರಣೆಗಾಗಿ ಸಂಶೋಧನ ಕೇಂದ್ರ, ಶಿಕ್ಷಣ ಕೇಂದ್ರಗಳ ಸ್ಥಾಪನೆಯಾಗಬೇಕು. ಬಸವನಾಳರ ಮನೆಯ ಆವರಣದಲ್ಲಿ ಕನ್ನಡ-ಕನ್ನಡಿಗ-ಕರ್ನಾಟಕಗಳ ಜಾಗ್ರತಿಯ ಸ್ಮಾರಕ ಭವನ ನಿರ್ಮಿಸುವಂತಾಗಬೇಕು. ಇವರ ಹೆಸರಿನಲ್ಲಿ 'ಬಸವನಾಳ ಶಿಕ್ಷಣ ಪ್ರತಿಷ್ಠಾನ' ರಚಿಸಬೇಕು. ಬಸವನಾಳರ ಜನ್ಮದಿನವನ್ನು ನಾಡಿನ ಶೈಕ್ಷಣಿಕ ದಿನವನ್ನಾಗಿ, ಇಲ್ಲವೆ ಸಂಶೋಧನೆಯ ದಿನವನ್ನಾಗಿ ಆಚರಿಸುವಂತಾಗಬೇಕು. ಈ ಕಾರ್ಯಗಳನ್ನು ಕಾರ್ಯಗತಗೊಳಿಸುವುದೇ ನಾವು ಬಸವನಾಳರಿಗೆ ಸಲ್ಲಿಸುವ ನಿಜವಾದ ಗೌರವವೆನಿಸುತ್ತದೆ.

ಬಸವನ ಬಾಗೇವಾಡಿಯ ಸ್ತಂಭಶಾಸನಗಳು

★ **ಎಸ್. ಕೆ. ಕೊಪ್ಪಾ**

ಈಚೆಗೆ ನಾನು ಪ್ರತಿ ಮಾಡಿದ ಇಲ್ಲಿನ ಶಾಸನಗಳು ವಿಜಾಪುರ ಜಿಲ್ಲೆಯ ತಾಲ್ಲೂಕು ಸ್ಥಳ ಬಸವನ ಬಾಗೇವಾಡಿಯ ಬಸವೇಶ್ವರ ದೇವಾಲಯದ ಬೃಹತ್ ನಂದಿಮಂಟಪದ ಎಡ-ಬಲ ಕಂಭಗಳು ಮತ್ತು ದ್ವಾರಮಂಟಪದ ಬಲಭಾಗದ ಶಿಲಾಫಲಕದ ಮೇಲಿವೆ. ಇವುಗಳನ್ನು ಹೊರತು ಪಡಿಸಿ ಈ ಊರಿನ ವಿವಿಧ ಸ್ಥಳಗಳಲ್ಲಿ ಎಂಟು ಶಿಲಾಶಾಸನಗಳು ದೊರಕಿದ್ದು ಅವೆಲ್ಲ ದಕ್ಷಿಣ ಭಾರತದ (ಬಾಂಬೆ ಕರ್ನಾಟಕ) ಶಾಸನ ಸಂಪುಟಗಳಲ್ಲಿ ಪ್ರಕಟಗೊಂಡಿವೆ. ಆದರೆ ಪ್ರಸ್ತುತ ಶಾಸನಗಳು ಮತ್ತು ಅವುಗಳ ವಿಷಯ ಪ್ರಕಟಗೊಂಡಿರುವುದು ಈ ವರೆಗೆ ನನ್ನ ಗಮನಕ್ಕೆ ಬಂದಿಲ್ಲ. ಹೀಗಾಗಿ ಎರಡು ಕಂಭಗಳ ಮೇಲಿರುವ ಶಾಸನಗಳ ವಿವರಗಳನ್ನು ಮಾತ್ರ ಇಲ್ಲಿ ಕೊಡುತ್ತಿದ್ದೇನೆ.

ಕಲ್ಯಾಣ ಚಾಲುಕ್ಯ ವಾಸ್ತುಶೈಲಿಯಲ್ಲಿ ರಚನೆಗೊಂಡಿರುವ ನಂದಿಮಂಟಪದ ಮುಂದು ಮತ್ತು ಚೌಕಾಕಾರದ ಎಡ-ಬಲ ಕಂಬಗಳು ೪"x೧೬", ೮"x೧೬" ಮತ್ತು ೧೦"x೧೬" ಇಂಚುಗಳ ವಿಭಿನ್ನ ಉದ್ದಗಲಗಳುಳ್ಳ ನಾಲ್ಕು ಮುಖಗಳ ೩ ಚೌಕು ಪಟ್ಟಿಕೆ (shaft)ಗಳನ್ನು ಹೊಂದಿವೆ. ಈ ಪಟ್ಟಿಕೆಗಳ ಒಂದೇ ಮುಖದ ಮೇಲೆ ಪ್ರಸ್ತುತ ಶಾಸನಗಳನ್ನು ಕೊರೆಯಲಾಗಿದೆ. ಬಲಭಾಗ ಕಂಭದ ಪೂರ್ವ ಮುಖಕ್ಕಿರುವ ಶಾಸನದಲ್ಲಿ ಒಟ್ಟು ೧೩ ಸಾಲುಗಳಿದ್ದು, ಮೊದಲ ಭಾಗ ೩, ಎರಡನೆಯ ಭಾಗ ೭ ಮತ್ತು ಮತ್ತು ೩ನೆಯ ಭಾಗ ೩ ಸಾಲುಗಳನ್ನು ಹೊಂದಿದೆ. ಇದೇ ಕಂಭದ 3ನೇ ಪಟ್ಟಿಕೆಯ ಉತ್ತರ ಮುಖದ ಮೇಲೆ ಕಾಲ ನಿರ್ದೇಶನವಿಲ್ಲದ ೪ ಸಾಲಿನ ಶಾಸನವಿದೆ. ಎಡಭಾಗ ಕಂಭದ ದಕ್ಷಿಣ ಮುಖಕ್ಕಿರುವ ೩೦ ಸಾಲುಗಳ ಶಾಸನ ೩ ಸಾಲುಗಳ ಮೊದಲಭಾಗ ೯ ಸಾಲುಗಳ ಎರಡನೆಯ ಭಾಗ ಮತ್ತು ೧೮ ಸಾಲುಗಳ ಮೂರನೆಯ ಭಾಗವನ್ನೊಳಗೊಂಡಿದೆ.

ಬಲಭಾಗದ ಕಂಭದ ಮೇಲಿರುವ ಶಾಸನ ಕಲಚುರಿ ಸಂಕಮದೇವನ ೩ನೇ ವರ್ಷವನ್ನು ಉಲ್ಲೇಖಿಸುತ್ತಿದ್ದು ಅದು ಕ್ರಿ.ಶ.೧೧೭೮ ಕ್ಕೆ ಸರಿಹೊಂದುತ್ತದೆ. ಇದೇ ಕಂಭದ ಕೆಳಭಾಗದಲ್ಲಿ ಉತ್ತರಾಭಿಮುಖವಾಗಿರುವ ತೇದಿಯಿಲ್ಲದ ಶಾಸನ ೧೩ನೇ ಶತಮಾನದ ಲಿಪಿಲಕ್ಷಣವನ್ನೊಳಗೊಂಡಿದೆ. ಎಡಭಾಗದ ಕಂಭದ ಮೇಲಿರುವ ಇನ್ನೊಂದು ಶಾಸನ ಯಾದವ ಜಯಿತಪಾಳ (ಜಮ್ಮುಗಿ ಜೈತುಗಿ) ದೇವನ ೮ನೇ ವರ್ಷವನ್ನು ತಿಳಿಸಿದ್ದು. ಅದು ಕ್ರಿ.ಶ. ೧೧೯೯ ಕ್ಕೆ ಸಂಬಂಧಿಸಿದುದಾಗಿದೆ. ಈ ಶಾಸನಗಳು ಕನ್ನಡ ಭಾಷೆ ಹಾಗೂ ಲಿಪಿಯಲ್ಲಿವೆ. ಎರಡರ ಪಠ್ಯಭಾಗದಲ್ಲಿ ಪ್ರಾರ್ಥನಾ ಶ್ಲೋಕ ಹಾಗೂ ಫಲಶ್ರುತಿ ಶ್ಲೋಕಗಳಿವೆ. ಎಡಭಾಗದ ಕಂಭದ ಶಾಸನದಲ್ಲಿ ಒಂದು ವೃತ್ತ ಬಳಸಿದ್ದನ್ನು ಬಿಟ್ಟರೆ ಇಲ್ಲಿನ ಶಾಸನಗಳ ಉಳಿದ ಭಾಗ ಪೂರ್ತಿ ಗದ್ಯದಲ್ಲಿವೆ. ಅಕ್ಷರಗಳು ಲಿಪಿಶಾಸ್ತ್ರದನ್ವಯ

ಶಾಸನಗಳ ಕಾಲಕ್ಕೆ ಹೊಂದಿಕೆಯಾಗುತ್ತಿದ್ದು; ವಿರಳವಾಗಿ ಅನುನಾಸಿಕ ಬಳಸಲಾಗಿದೆ. ಮೊದಲ ಶಾಸನದ ''ಬೊನ್ತೇಸ್ವರ (2ನೇ ಸಾಲು), ಎರಡನೆಯ ಶಾಸನದ ''ದಣ್ಡನಾಯಕ'' (12ನೇ ಸಾಲು) ಪದಪ್ರಯೋಗವನ್ನು ನೋಡಬಹುದು. ಎರಡನೆಯ ಶಾಸನದ ''ಬೊಂನ್ತೇಸ್ವರ'' (14,33ಮತ್ತು 38 ನೇ ಸಾಲು) ಎನ್ನುವಲ್ಲಿ ಅನುನಾಸಿಕ, ಅನುಸ್ವಾರ ಎರಡನ್ನೂ ಬಳಸಲಾಗಿದೆ.

ಕಲಚುರಿ ಸಂಕಮದೇವನ ಕಾಲದ ಶಾಸನ ಸಾಸಿರ್ವರು ಬೊಂತೇಶ್ವರ ದೇವರಿಗೆ 'ಹೇರು' ತೆರಿಗೆ ದಾನಬಿಟ್ಟದ್ದನ್ನು ತಿಳಿಸುತ್ತದೆ. ಆದರೆ ಇಲ್ಲಿನ ಸಾಸಿರ್ವರು ಯಾರು ಎಂಬುದು ಗೊತ್ತಾಗುವುದಿಲ್ಲ. ಯಾದವ ಜೈತುಗಿ ಕಾಲದ ಶಾಸನ ಬೊಂತೇಶ್ವರ ದೇವರ ಕೇರಿಯಿಂದ ದಕ್ಷಿಣಕ್ಕಿರುವ ಕೇರಿಯನ್ನು ಕೊಂಡು ದೇವರಿಗೆ ಬಿಟ್ಟದ್ದನ್ನು ವಿವರಿಸುತ್ತದೆ. ಮೊದಲು ಈ ಕೇರಿಯನ್ನು ಅಗ್ರಹಾರ ಬಾಗೇವಾಡಿಯ ಮಹಾಜನರು ಹಣಪಡೆದು ಮೂಗುಳ ಬುದ್ಧಿಯ ನಾರಣದೇವನಿಗೆ ಬಿಟ್ಟುಕೊಟ್ಟಿರುತ್ತಾರೆ. ನಂತರ ಆ ಕೇರಿಯನ್ನು ದೇಶಿಯ ದಂಡನಾಯಕ ಮಧುವರಸಯ್ಯ ಮುದ್ರಹಸ್ತ ನಾಗರಸರ ಸನ್ನಿಧಾನದಲ್ಲಿ ಐನೂರ್ವರು (ಮಹಾಜನರು) ಸಭಾಮಂಟಪದಲ್ಲಿ ನೆರೆದು ಏಕಸ್ತರಾಗಿ ದೇವರಾಶಿ ಪಂಡಿತದೇವರಿಂದ ನಾರಣದೇವನ ಹಣವನ್ನು ಕೊಡಿಸಿ ಬೊಂತೇಶ್ವರ ದೇವರಿಗೆ ಧಾರಾಪೂರ್ವಕವಾಗಿ ಬಿಟ್ಟುಕೊಡುತ್ತಾರೆ. ಈ ಕೇರಿಯನ್ನು ಹಸ್ತಾಂತರಿಸಲು ಪಡೆದ ದ್ರವ್ಯ (ಹಣ)ದ ಪ್ರಮಾಣಾದಿ ವಿವರಗಳು ಇಲ್ಲಿನ ಶಾಸನದಲ್ಲಿ ಇಲ್ಲ, ಸಾಮಾನ್ಯವಾಗಿ ಹಣ, ಭೂಮಿ ಮತ್ತು ನಿವೇಶನಗಳನ್ನು ದೇವಾಲಯಗಳಿಗೆ ಬಿಡುವ ಸಂಗತಿ ಕನ್ನಡ ಶಾಸನಗಳಿಂದ ತಿಳಿದುಬರುತ್ತದೆ. ಆದರೆ ಅಗ್ರಹಾರದ ಕೇರಿಯನ್ನು ಪಡೆದು ಬಿಡುವ ಇಲ್ಲಿನ ಉಲ್ಲೇಖ ವಿರಳವೆಂದೇ ಹೇಳಬೇಕು. ಹಾಗೇ ನಾರಣದೇವನಿಗಿರುವ ''ಮೂಗುಳ ಬುದ್ಧಿ'' ವಿಶೇಷಣ ಗಮನಾರ್ಹವಾಗಿದೆ.

ಕಾಲನಿರ್ದೇಶನವಿಲ್ಲದ ಇನ್ನೊಂದು ಶಾಸನದ ವಿಷಯ ಮರುಳಯ್ಯ ಬೊಂತೇಶ್ವರ ದೇವರಿಗೆ ಭೂದಾನ ನೀಡಿದುದಾಗಿದೆ. ನಮ್ಮ ಶಾಸನಗಳು ಕಟ್ಟಿಸಿದ ವ್ಯಕ್ತಿಯ ಹೆಸರಿನಲ್ಲಿ ದೇವಾಲಯಗಳಿರುವುದನ್ನು ಸಮರ್ಥಿಸುತ್ತವೆ. ಈ ಹಿನ್ನಲೆಯಲ್ಲಿ ಬೊಂತೇಶ್ವರ ದೇವಾಲಯನ್ನು ಬೊಂತಾದೇವ ಇಲ್ಲವೆ ಬೊಂತಾದೇವಿ ಹೆಸರಿನ ವ್ಯಕ್ತಿ ಕಟ್ಟಿಸಿರಬಹುದಾಗಿದೆ. ಕಲ್ಯಾಣ ಚಾಲುಕ್ಯ ಇಮ್ಮಡಿ ತೈಲಪನ (ಕ್ರಿ.ಶ. 973-997) ತಾಯಿಯ ಹೆಸರು ಬೊಂತಾದೇವಿ ಎಂಬುದು ಸುವಿದಿತವಾಗಿದೆ. ಬಾಗೇವಾಡಿಯ ಕಲ್ಯಾಣ ಚಾಲುಕ್ಯ ಮೊದಲನೆಯ ಸೋಮೇಶ್ವರನ ಕಾಲದ ಒಂದು ಶಾಸನ (ಸಾ. ಇ. ಇ., XI-i, 83 ಕ್ರಿ.ಶ. 1049 ಪ್ರಧಾನಿ ಬೊಂಥಾದೇವನನ್ನು ಉಲ್ಲೇಖಿಸಿದೆ. ಇದರಿಂದ ನಿರ್ದಿಷ್ಟ ಆಕರಗಳು ದೊರೆಯುವವರೆಗೆ ಈ ಇಬ್ಬರಲ್ಲಿ ಒಬ್ಬರು ಬಾಗೇವಾಡಿಯ ಬೊಂತೇಶ್ವರ ದೇವಾಲಯದ ನಿರ್ಮಾತೃಗಳಾಗಿರಬೇಕೆಂದು ಊಹಿಸಬಹುದಾಗಿದೆ.

ಒಟ್ಟಿನಲ್ಲಿ ಈ ಶಾಸನಗಳಿಂದ :

1. ಸದ್ಯದ ಬಸವೇಶ್ವರ ದೇವಾಲಯ ಹಿಂದೆ ಬೊಂತೇಶ್ವರ ದೇವಾಲಯವೆಂದಿದ್ದು, ಮಠವನ್ನು ಹೊಂದಿದ ಮತ್ತು ಅದರ ಆಚಾರ್ಯ ದೇವರಾಶಿ ಪಂಡಿತರಾಗಿರುವ ವಿನೂತನ ಅಂಶ

2. ಯಾದವ ಜೈತುಗಿ ಕಾಲದಲ್ಲಿ ದೇಸಿಯ ದಂಡನಾಯಕ ಮಧುವರಸಯ್ಯ ಮುದ್ರಹಸ್ತ ನಾಗರಸರೆಂಬ ಅಧಿಕಾರಿಗಳಿದ್ದ ವಿಷಯ ಮೊದಲ ಬಾರಿಗೆ ತಿಳಿಯುವ

3. ಯಾವ ಅಧಿಕಾರವನ್ನೂ ಹೊಂದಿರದ ಸಾಮಾನ್ಯ ಮರುಳಯ್ಯ ಈ ದೇವಾಲಯಕ್ಕೆ ದಾನಬಿಟ್ಟ ಸಂಗತಿ - ಈ ಮೊದಲಾದ ಹೊಸ ವಿವರಗಳು ತಿಳಿದುಬರುತ್ತವೆ.

ಶಾಸನ ಪಾಠ

ಶಾಸನ ಒಂದು : ಬಲಭಾಗ ಕಂಭದ ಪೂರ್ವಮುಖ

ಭಾಗ - ೧

೧. ನಮಸ್ತುಂಗ ಶಿರಶ್ಚುಂಬಿ ಚಂದ್ರಚಾಮರ ಚಾರವೇ ತ್ರೈಳೋಕ್ಯನಗರಾರಂಭ

೨. ಮೂಲಸ್ತಂಭಾಯ ಶಂಭವೇ ॥ ಶ್ರೀಮತು ಕಳಚುರ್ಯ

೩. ಭುಜಬಳ ಚಕ್ರವರ್ತ್ತಿ ಸಂಕಮದೇವ ವರ್ಷದ 3ನೆಯ ವಿಳಂಬಿ

ಭಾಗ -೨

೪. ಸಂವತ್ಸರದ ಅಶಾಡ ಸುದ್ದ ೧ ಬೃಹಸ್ಪತಿ

೫. ವಾರದಂದು ದಕ್ಷಿಣಾಯನ ಸಂಕ್ರಾಂತಿ ಭ್ಯತಿ

೬. ಪಾತ ನಿಮಿತ್ತದಿಂ ದಾರಾಪೂರ್ವಕಂ ಮಾಡಿ

೭. ಶ್ರೀಮತು ಬೊನ್ತೇಸ್ವರ ದೇವರಿಗೆ ಸಾಸಿರ್ವರು

೮. ಬಿಟ್ಟರು ಹೇಱಿಂಗೆ [ಲೆ] ದೆಱೆ ತಳದ್ಯೆ

೯. ನೂರ್ವರುಯಿಂತೀಧರ್ಮ್ಮಮಂ ಪ್ರತಿಪಾಟಿಸು

೧೦. ವರು

ಭಾಗ -೩

೧೧. ಸ್ವದತ್ತಂ ಪರದತ್ತಂ ವಾಯೋ ಹರೇತಿ ವ

೧೨. ಸುಂದರ ಸಷ್ಟಿರ್ವ್ವರ್ಷ ಸಹಸ್ರಾಣಿ ವಿ

೧೩. ಷ್ಠಾಯಾಂ ಜಾಯತೇ ಕ್ರಿಮಿಃ ॥

ಬಲಭಾಗದ ಕಂಭದ ಉತ್ತರ ಮುಖ (ಕೆಳಭಾಗದಲ್ಲಿ)

೧. ಶ್ರೀಮತು ಬೊಂತೇಸ್ವರ ದೇವರ್ಗ್ಗೆ

೨. ಮರುಳಯ್ಯ ಸೋಮೂ
೩. ವಾರ ಅಮವಾಸ್ಯೆ ಸೂರಿಯ
೪. ಗ್ರಹಣದಲ್ಲಿ ತನ್ನೆಸರ ಗೆಯ್ಯ

ಶಾಸನ ಎರಡು : ಎಡಭಾಗ ಕಂಭದ ಉತ್ತರ ಮುಖ

ಭಾಗ -೧

೧. ಶ್ರೀ ಜಯತ್ಯಾಯುರ್ಬ್ಬವನಂ ಘೋತಾಂಗವಾಡ ಜಠಂ ವ
೨. ಪುಃ ವಾಮಾಂಘ್ರಿ ನೂಪುರಾಕಾರಂ ಬಹುಬ್ರ
೩. ಹ್ಮಾಂಡಮಂಡಳಂ ॥ ನಮಸ್ತುಂಗ ಶಿರಶ್ಚುಂಬಿ ಚಂ

ಭಾಗ -೨

೪. ದ್ರಚಾಮರ ಚಾರವೇ ॥ ತ್ರೈಲೋಕ್ಯ ನಗರಾರಂಭ ಮೂ
೫. ಲಸ್ತಂಭಾಯ ಸಂಭವೇ ॥ ಸ್ವಸ್ತಿ ಶ್ರೀ
೬. ಮತು ಯಾದವ ನರಾಯಣ ಪ್ರತಾಪ ಚ
೭. ಕ್ರವರ್ತ್ತಿ ಜಯಿತಪಾಳದೇವರುಷದ ಎಣ್ಟನೆಯ ಕಾ
೮. ಳಯುಕ್ತ ಸಂವಛ್ಚರದ ಮಾಘ ಸುಧ ದಸಮಿ ಸೋಮವಾ
೯. ರದಲು ॥ ಸ್ವಸ್ತಿ ಶ್ರೀಮದುತ್ತಮದಗ್ರಹಾರಂ ಬಾಗ
೧೦. ವಾಡಿಯ ಅಶೇಷ ಮಹಾಜನಂಗಳುಂ ಸಭಾಮಂಟಪದ
೧೧. ಲು ನೆರದೇಕಕಸ್ತರಾಗಿರ್ದ್ದು ಮೂಗುಳ ಬುದ್ಧಿಯ ನಾರಣದೇ
೧೨. ವನ ಕೈಯಲು ದ್ರಬ್ಯವ ಕೊಂಡು ಶ್ರೀ ಬೊಂನ್ತೇಸ್ವರ ದೇ

ಭಾಗ -೩

೧೩. ವರ ಕೇರಿಯಿಂ ತೆಂಕದಿಸೆಯ ಕೇರಿಯನು ಧಾರೆಯಿಂ ಕೊಟ್ಟರು ಆ
೧೪. ನ (ನಾ) ರಣದೇವನ ಕೈಯಲು ಶ್ರೀ ಬೊಂನ್ತೇಸ್ವರ ದೇವರ ಮಟವಾಚಾ
೧೫. ರ್ಯ್ಯ ದೇವರಾಶಿ ಪಂಡಿತದೇವರು ಆ ನಾರಣದೇವನ
೧೬. ದ್ರಬ್ಯವಂ ಕೊಟ್ಟು ಆ ಕೇರಿಯನು ಶ್ರೀ ಮದೇ (ದ್ವೇ) ಶಿ
೧೭. ಯ ದಣ್ಣನಾಯಕ ಮಧುವರಸೈಂಗಳು
೧೮. ಮುದ್ರಹಸ್ತ ನಾಗರಸಂಗಳ ಸಂನಿಧಾನದಲು ಆ

೧೯. ಯಿನೂರ್ಬ್ಬರುಂ ಸಭಾಮಂಟಪದಲು ನೆರೆದೇಕಸ್ತ್ರಾ
೨೦. ಗಿರ್ದ್ದು ಶ್ರೀ ದೇವರಾಸಿ ಪಂಡಿತ ದೇವರ ಕೈಯಲು
೨೧. ದ್ರಬ್ಯವಂ ಕೊಂಡು ಆ ತೆಂಕದೆಸೆಯ ಕೇರಿಯಂ
೨೨. ಸರ್ವನಮಸ್ಯವಾಗಿ ಶ್ರೀ ಬೊಂನ್ತೇಸ್ವರ ದೇವರಿಗೆ ದಾ
೨೩. ರಾಪೂರ್ವಕಂ ಮಾಡಿಕೊಟ್ಟರು ★ ಮುಂನಾದುತ್ತ
೨೪. ಮವೃತ್ತಿ ನಿಂದುದೆಡೆಯೊಳು ಸುಸ್ಥಾಪನಾಚಾರ್ಯ
೨೫. ರಿಂದಿಂನ್ನಾನ್ನಿಂದುದನೆಲ್ಲವಂ ಬಿಡಲ್ ಸಮರ್ತ್ಥಂದು (ಪಡೆವನಾಂ ಮತ್ತೆಂದು) ದೇವರಾ
೨೬. ಸಿ ಪಂಡಿತದೇವರು ನಾನಾಗುಣಮುಳ್ಳ ಅಯಿನೂರ್ವರಿ
೨೭. ಗೊ-ಪಸಿಕ್ಕಿ ಸಂಪಂನ್ನಂ ತಾಂ ಪಡೆದೀಗಳ್ ಕೇರಿಯಂ ಶ್ರೀ
೨೮. ಬೊಂನ್ತೇಶ್ವರಂಗಿತ್ತನು ★ ಸ್ವದತ್ತಾಂ ಪರದತ್ತಾಂ ವಾಯೋ
೨೯. ಹರೇತಿ ವಸುಂದರಾಂ ಷಷ್ಟಿರ್ವರ್ಷ ಸಹಸ್ರಾಣಿ ವಿ
೩೦. ಷ್ಟಾಯಾಂ ಜಾಯತೇ ಕ್ರಿಮಿಃ

ಆರು ದಲಿತ ಆತ್ಮಕಥನಗಳು : ಒಂದು ಚಿಂತನೆ

ಮರಾಠಿ ಮೂಲ : ವಾಸುದೇವ ಮುಲಾಟೆ

ಕನ್ನಡಕ್ಕೆ : ಎಸ್.ಪಿ. ಪಾಟೀಲ

ಮಾನವನಿಗೆ ತನ್ನ ದುಃಖವನ್ನು ಅದರಂತೆ ಆನಂದವನ್ನು ಯಾವಾಗಲಾದರೂ ಯಾರಲ್ಲಿಯಾದರೂ ಆಗಲಿ ಹೇಳಬೇಕೆನಿಸುತ್ತದೆ. ಹೀಗೆ ಅಂತರ್ಮನದಲ್ಲಿ, ಮನದ ಆಳದಲ್ಲಿ ಯಾವುದೋ ಭಾಗದಲ್ಲಿ ಪುಟಿಯುವ, ಅದುಮಿಡಲಾಗದ, ಹೊರಬೀಳಲು ಉತ್ಸುಕವಾದ ಹಾಗೂ ಹೇಳಿದ ಮೇಲೆ ತಾನು ಅನುಭವಿಸಿದ ಹಾಗೂ ಪಡೆದುದನ್ನು ಅನುಭವಿಸುವಾಗ, ಸಹಿಸುವಾಗ ಆದ ಮಾನಸಿಕ, ಭಾವನಾತ್ಮಕ ಒತ್ತಡವು ಹೇಗೋ ಹಗುರಾದಂತೆ ಅನ್ನಿಸುತ್ತದೆ. ವಾಸ್ತವದಲ್ಲಿ ಅನುಭವಕ್ಕೆ ಬಂದುದೆಲ್ಲವೂ ಅವನೊಬ್ಬನದೇ ಆಗಿರುತ್ತದೆ. ಅದಕ್ಕಾಗಿ ಇತರರಿಂದ ಯಾವುದಾದರೂ ಸಹಾಯವು ಇಂಥ ಮಾನಸಿಕ ವಿವೇಚನೆಯಿಂದ ಪ್ರಾಪ್ತವಾದೀತೆಂದೇ ಇಲ್ಲ. ಆದರೂ ಹಗರು ಹಗುರಾಗಿ ಅನ್ನಿಸುವ ಮಾನಸಿಕ ಅವಸ್ಥೆ ಅವನಿಗೆ ಭಾಸಮಾನವಾಗುತ್ತದೆ. ಭಾಸಮಾನ ಎಂದು ಹೇಳುವ ಕಾರಣವೆಂದರೆ ಇಂಥ ಆತ್ಮಕಥನದ ತರುವಾಯ ಅವನ ಮಾನಸಿಕ ಒತ್ತಡ ಕಡಿಮೆಯಾದೀತೆಂದೇನೂ ಹೇಳಲಾಗದು. ಬದಲಾಗಿ ಅವನ ಜವಾಬುದಾರಿ ಇನ್ನಷ್ಟು ಹೆಚ್ಚುವುದರಿಂದ ಆ ಮಾನಸಿಕ ಒತ್ತಡವೂ ಹೆಚ್ಚುವ ಸಾಧ್ಯತೆಯೂ ಇರುತ್ತದೆ. ಆದುದರಿಂದ ಈ ವರೆಗೆ ಮುಚ್ಚಿದ ಭಾಗದಲ್ಲಿದ್ದುದನ್ನು ಹೊರಗೆ ತೆಗೆದುದೇಕೆ? ತನ್ನ ಗಾಯಗಳನ್ನೇ ಹೃದಯಕ್ಕೆ ಒಯ್ದು ಮೈದಡವುತ್ತ ಕೂಡ್ರುವುದಕ್ಕಿಂತ ಹೊರತೆಗೆದುದೇಕೆ ? ಎಂಬ ಪ್ರಶ್ನೆಗಳು ಪೀಡಿಸಬಹುದಾಗಿದೆ. ಅಲ್ಲದೆ ಯಾರ ಅನುಭವಗಳು ಕಟುವಾಗಿವೆಯೋ ಜೀವನವನ್ನೇ ಹೀರುವಂಥವಾಗಿವೆಯೋ ಅಂಥ ಭೂತಕಾಲ ಮತ್ತು ಅದರಲ್ಲಿನ ಅನುಭವ ಕಥನದಲ್ಲಿ ತನಗೆಂಥ ಸುಖ ದೊರೆಯುತ್ತದೆ? ಎಂಬುದರ ಲೆಕ್ಕಚಾರವು ಮನದಲ್ಲಿ ಮೂಡದೇ ಇರಲಾರದು. ಅಲ್ಲದೇ ಹೃದಯದ ಅಂತರ್ಯದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡುವ ದ್ರವ್ಯದ ಪರಿಣಾಮಗಳನ್ನು ಲೆಕ್ಕಿಸುವುದಿಲ್ಲ. ಹೀಗೆ ಹೇಳಬೇಕೆನ್ನಿಸುವುದು ಮಾನವನ ಹುಟ್ಟಿನೊಂದಿಗೆ ಬಂದ ಪ್ರವೃತ್ತಿಯಾಗಿದೆ. 'ಕಾಟ್ಯಾವರಚಿ ಪೋಟ'ದ ಆರಂಭದಲ್ಲಿಯೇ ಉತ್ತಮನು ಹೇಳುತ್ತಾನೆ. ''ಮನದಲ್ಲಿ ವಿಚಾರ ಬರುತ್ತದೆ ; ಎಲ್ಲಿಯಾದರೂ, ಯಾರಿಗಾದರೂ ಈ ಎದೆಯನ್ನು ಸೀಳಿ ಇಡಿಯಾಗಿ ಬಿಡಿಬಿಡಿಸಿ ತೋರಿಸಬೇಕು'' ಇದೇ ಅದರ ಹಿನ್ನಲೆಯಲ್ಲಿನ ಮೂಲಭೂತ ಭಾವನೆಯಾಗಿರುತ್ತದೆ.

ಇಂಥ ನಿವೇದನೆಗೆ, ಅನುಭವ ಕಥನಕ್ಕೆ ಅಕ್ಷರರೂಪ ಪ್ರಾಪ್ತವಾದಾಗ ಒಂದು ಸಾಹಿತ್ಯ ಕೃತಿಯ ಜನನವಾಗುತ್ತದೆ. ಹೀಗೆ ಸಾಹಿತ್ಯಕೃತಿಯಲ್ಲಿ ಕಲ್ಪನೆಯ ಭರಾಟೆಗೆ ಸ್ವಪ್ನರಂಜನೆಗೆ

ಅವಕಾಶವಿರುತ್ತದೆ. ಅದು ಲೇಖಕನ ಆಂತರಿಕ ಜೀವನದ ಅನುಮತಿಯಾಗಿರುತ್ತದೆ. ಅದರಂತೆಯೇ ಬಾಹ್ಯ ಜೀವನದ ಅನುಭೂತಿಯಾಗಿರುತ್ತದೆ. ಹೀಗೆ ಸಾಹಿತ್ಯ ಕೃತಿಯು ನಿವೇದನೆಯಲ್ಲಿ ವ್ಯಕ್ತಿನಿಷ್ಠತೆಯಿದ್ದರೂ ಸಮೂಹಶೀಲತೆಯೂ ಅಪೇಕ್ಷಿಸಲ್ಪಟ್ಟಿರುತ್ತದೆ. ಹೀಗೆ ಇದು ತೊಡಕಿನ ಕೆಲಸವಾಗಿರುತ್ತದೆ. ಸ್ವಂತದ ಬಗ್ಗೆ ಹೇಳುತ್ತಿರುವಾಗ 'ಸ್ವ' ಕ್ಕೆ ಕಡಿವಾಣ ಹಾಕಬೇಕಾಗುತ್ತದೆ. , ವಿಕಾರಗಳಿಂದ ಅಲಿಪ್ತವಿರಬೇಕಾಗುತ್ತದೆ. ಅದರಂತೆ 'ಸ್ವ'ವನ್ನು ಅಲಿಪ್ತವಿಡುವುದು, ವಿಕಾರ ರಹಿತವಾಗಿಡುವುದು ಅಷ್ಟೇ ಕಠಿಣವಾಗಿರುತ್ತದೆ. ಆದರೆ ಹೀಗೆ 'ಸ್ವ'ವನ್ನು ಅಲಿಪ್ತವಾಗಿರಿಸಿ ಅತ್ಯಂತ ತಟಸ್ಥತೆಯಿಂದ ಸ್ವತಃ ಸ್ವಂತದೆಡೆಗೆ ನೋಡಿ, ವಸ್ತುನಿಷ್ಠ ಭೂಮಿಕೆಯಿಂದ ಆತ್ಮಕಥೆ, ಆತ್ಮಾನುಭವವನ್ನು ಹೇಳಬೇಕಾಗುತ್ತದೆ. ಅಂದರೆ ಮಾತ್ರ ಅದು ವಾಸ್ತವ ಮತ್ತು ಪ್ರತ್ಯಯಕಾರಿಯೆನಿಸುತ್ತದೆ. ಸುಪ್ರಸಿದ್ಧ ಮರಾಠಿ ದಲಿತ ಲೇಖಕ ಮತ್ತು ಕವಿ ಪ್ರಾ.ಕೇಶವ ಮೇಶ್ರಾಮ ಅವರು ಆತ್ಮಕಥನಾತ್ಮಕ ಕಾದಂಬರಿ 'ಹಕಿಕತ್'ದ ಬರವಣಿಗೆಯ ಪೂರ್ವದ ಅವಸ್ಥೆಯನ್ನು ಹೇಳುತ್ತಾರೆ 'ಈಗ ನಾನೇ ನನ್ನ ಎದುರಿಗೆ ನನ್ನನ್ನೇ ನಿಲ್ಲಿಸುವವನಿದ್ದೆ. ಪರಕೀಯ ಕಣ್ಣುಗಳಿಂದ ತ್ರಯಸ್ಥನಾಗಿ ಸಾಧ್ಯವಾದಷ್ಟು ನನ್ನೆಡೆಗೆ ನಾನೇ ನೋಡುವವನಿದ್ದೆ'. ದಲಿತ ಆತ್ಮಕಥನಗಳ ಜಾತಿಕುಲವನ್ನು ನೋಡುವಾಗ ಎಲ್ಲಕ್ಕೂ ಮೊದಲು ಈ ದೃಷ್ಟಿಯಿಂದ ವಿಚಾರ ಮಾಡಬೇಕಾಗುತ್ತದೆ.

ಮಹಾತ್ಮಾ ಫುಲೆ, ರಾಜರ್ಷಿ ಶಾಹೂ ಮಹಾರಾಜ, ಕರ್ಮವೀರ ಬಾಪುರಾವ್ ಪಾಟೀಲ, ವಿಠ್ಠಲ ರಾಮಜಿ ಶಿಂಧೆ-ಮೊದಲಾದ ಪುರೋಗಾಮಿ ಸಮಾಜ ಸುಧಾರಕರ ಪ್ರಯತ್ನದಿಂದಾಗಿ ಬಹುಜನಸಮಾಜ, ತುಳಿತಕ್ಕೊಳಗಾದ ಸಮಾಜ ನಿಧಾನವಾಗಿ ಜಾಗೃತವಾಗುತ್ತ ಹೋಯಿತು. ಶಿಕ್ಷಣವನ್ನು ಮುಕ್ತಗೊಳಿಸುತ್ತಾ ಸಾಗಿತು. ಈ ಶಿಕ್ಷಣದಿಂದಾಗಿ ಅವರಲ್ಲಿನ ಸ್ವಾಭಿಮಾನವನ್ನು ಬಡಿದೆಬ್ಬಿಸಿತು. ಅದರಿಂದಾಗಿ ತಮ್ಮ ದೀನ ಅವಸ್ಥೆಯ ಎಚ್ಚರವೂ ಅವರಿಗೆ ಆಯಿತು. ಡಾ॥ ಬಾಬಾಸಾಹೇಬ ಅಂಬೇಡ್ಕರರ ಚಳುವಳಿಯಿಂದಾಗಿ ಹಾಗೂ ವಿಶೇಷವಾಗಿ ಧರ್ಮಾಂತರದಿಂದಾಗಿ ದಲಿತ ಸಮಾಜಕ್ಕೆ ಆತ್ಮಜಾಗೃತಿಯುಂಟಾಯಿತು. ಮನುವು ನಿರಾಕರಿಸಿದ ಲೇಖನಿ ಮತ್ತು ವಾಣಿಯ ಸಾಮರ್ಥ್ಯವು ಪ್ರಾಪ್ತವಾಯಿತು. ಹಿಂದೂಧರ್ಮ, ಅಧರ್ಮದಲ್ಲಿ ನಿರ್ಮಾಣವಾದ ವರ್ಣವ್ಯವಸ್ಥೆಯನ್ನಾಧರಿಸಿದ ಮಾನವನ ವಿಭಜನೆ ಇವುಗಳಿಂದ ಉಸಿರು ಕಟ್ಟಿದಂತಿದ್ದ ಧ್ವನಿ ಹೊರಗೆ ಬರಹತ್ತಿತ್ತು. ನೀಟಾಗಿ ಮಾತನಾಡಲು ಬರಹತ್ತಿದ ಚಿಕ್ಕಬಾಲಕ ತನಗೆ ಮಾತನಾಡಲು ಬರುತ್ತದೆಂಬ ಆನಂದದಬ್ಬರದಲ್ಲಿ ಅಧಿಕಾಧಿಕ ಮಾತನಾಡಬಯಸುವಂತೆ, ಅದೇ ಆಗ ಪದಗಳ ಪರಿಚಯವಾದ, ಲೇಖನಿಯನ್ನು ಕೈಯಲ್ಲಿ ಹಿಡಿದ ದಲಿತ ಮಾನವನ ಅವಸ್ಥೆಯಾಯಿತು. ಒಳಗೊಳಗೆ ಹಿಂಡಿ ಹಾಕುವ ವ್ಯಥೆ-ವೇದನೆಗಳಿಗೆ ಶಬ್ದದಾಕಾರ ಕೊಡಬೇಕು, ಅಕ್ಷರಬದ್ಧಗೊಳಿಸಬೇಕು ಎಂದು ಅವನಿಗೆ ಅನ್ನಿಸಹತ್ತಿತು. ಹೀಗಾಗಿ ಅವನು ಬರೆಯಲಾರಂಭಿಸಿದ. ಹೊಂದಿಕೆಯಾಗುವಂತೆ ಸೂಚಿತವಾಗುವ ಪ್ರತ್ಯೆ

ಇದಾಗಿರಲಿಲ್ಲ. ತಲೆ ತಲೆಮಾರಿನಿಂದ ಸಂಚಿತವಾಗಿ ತುಂಬಿ ತುಳುಕುತ್ತಿದ್ದ ಅನುಭವಗಳ ದುಃಖದ ಸಂಚಯ ಅವನಲ್ಲಿದ್ದಿತು. ಪ್ರತಿಭೆ, ಕಲಾತ್ಮಕತೆ, ಕಲಾವಿಲಾಸ ಮೊದಲಾದವುಗಳ ಪ್ರಯೋಜನೆಗಳ ಮೋಹದಲ್ಲಿ ದಲಿತ ಸಾಹಿತಿ ಸಿಕ್ಕಿಹಾಕಿಕೊಳ್ಳಲಿಲ್ಲ. ದಲಿತರ ವೇದನೆಯ ಹೂಂಕಾರವು ಮರಾಠಿ ಸಾಹಿತ್ಯದಲ್ಲಿ ಕವಿತೆಯ ಸ್ವರೂಪದಲ್ಲಿ ಮೂಡಿತು. ಮತ್ತು ವೇದನೆಯ ಬೆಂಕಿ ಕಾಗದದ ಮೇಲೆ ಇಳಿಯಲಾರಂಭಿಸಿತು. ಕವನ, ಕಥೆ, ಕಾದಂಬರಿ, ಎಂಬ ಯಾವುದೇ ಸಾಹಿತ್ಯ ಪ್ರಕಾರದ ಬಂಧನದಲ್ಲಿ ಉಳಿಯದೇ ಯಾವುದೇ ಸಾಹಿತ್ಯ ನಿರ್ಮಿತಿಯಾಗಲಾರಂಭಿಸಿತು. 'ನಾನು ಎಲ್ಲಿಂದ, ಯಾರಲ್ಲಿಂದ, ಹೇಗೆ ಬಂದೆ? ಎಂಬ ಸಂವೇದನಶೀಲ ಮನಕ್ಕೆ ಮೇಲಿಂದ ಮೇಲೆ ಕಾಡುತ್ತಿದ್ದ ಪ್ರಶ್ನೆಗಳಿಂದ ದಲಿತ ಆತ್ಮಕಥನಗಳು ಬರೆಯಲ್ಪಡಹತ್ತಿದವು.

ಹೊಲೆಯ-ಮಾದಿಗರಾದಿ ಕೆಳವರ್ಗದ ಸಮಾಜದ ಮನುಷ್ಯರು ತಮ್ಮ ಅನುಭವಗಳನ್ನು ಸಾಹಿತ್ಯದ ಮೂಲಕ ಹೇಳಲಾರಂಭಿಸಿದಾಗ ಮರಾಠಿ ಸಾಹಿತ್ಯವು ಅಧಿಕ ಪುಷ್ಟ . ಅಧಿಕ ಪ್ರಾತಿನಿಧಿಕ ಹಾಗೂ ವಾಸ್ತವವಾಗುತ್ತದೆ ಎಂದು ಪ್ರಾ॥ ಶ್ರೀ. ಮ. ಮಾಟೆ ಹೇಳುತ್ತಿದ್ದರು. ಮಾಟೆ ಅವರ 'ಸ್ವಪ್ನ' ಇಂದು ಪ್ರತ್ಯಕ್ಷದಲ್ಲಿ ಬಂದಿದೆ. ಅವರಿಗೆ ಅಭಿಪ್ರೇತವಾಗಿದ್ದ ಸಮಾಜದ ನಿಮ್ನಸ್ತರದ ಜಾತಿಯ ವ್ಯಥಿತ ಮನಗಳು ಬರೆಯಲಾರಂಭಿಸಿದವು. ದಲಿತ ಸಾಹಿತ್ಯವು ವಾಙ್ಮಯದ ಕ್ಷಿತಿಜವನ್ನು ವಿಸ್ತರಿಸಿತು. ಹಾಗೂ ಸಂಪೂರ್ಣ ದಲಿತ ಸಾಹಿತ್ಯವೆಂದರೆ ಚಿಕ್ಕ ದೊಡ್ಡ ಅನುಭವಗಳ ಬುತ್ತಿಯಾದ ಆತ್ಮಕಥನಗಳೇ ಆಯಿತು. ''ದಲಿತ ಸಾಹಿತ್ಯವೆಂದರೆ ಮೂಲತಃ ಲಾಕ್ಷಣಿಕ ಅರ್ಥವಲ್ಲ ದಲಿತ ಆತ್ಮಕಥನವೇ ಆಗಿದೆ. ಕವನವೆಂದರೆ ವೇದನೆಗಳ ಆತ್ಮೋದ್ಗಾರವಾದರೆ ದಲಿತಕಥೆಯಲ್ಲಿ ಕಾವ್ಯ ಮೂಡಿದೆ. ಕಾದಂಬರಿಯಲ್ಲಿ ದಲಿತ ಕಥೆಯಿದೆ. ಮತ್ತು ದಲಿತ ಆತ್ಮಕಥೆಯಲ್ಲಿ ಅಥವಾ ದಲಿತ ಆತ್ಮಚರಿತ್ರೆಯಲ್ಲಿ ದಲಿತ ಕಾದಂಬರಿಯಿದೆ'' ಎಂದು ಡಾ. ಸದಾ ಕರ್ಹಾಡೆ ಬರೆದಿದ್ದಾರೆ.

'ಬಲೂತ' 'ಆಠವಣಿಚೆ ಪಕ್ಷಿ' ಮುಕ್ಕಾಂ ಪೋಷ್ಟ ದೇವಾಚೆ ಗೋಠಣೆ; 'ಉಪರಾ; 'ಕಾಟ್ಯಾ ವರಚಿ ಪೋಟ' ಮತ್ತು 'ತರಾಳ ಅಂತರಾಳ ' ಇವು ಆರಂಭದ ಬಹುಚರ್ಚಿತ ದಲಿತ ಆತ್ಮಕಥನಗಳಾಗಿವೆ. ಇವುಗಳಲ್ಲಿನ ಪ್ರತ್ಯೇಕ ಪುಸ್ತಕದ ಬರವಣಿಗೆ ಸಾಹಿತ್ಯ ಪ್ರಕಾರದ ದೃಷ್ಟಿಯಿಂದ ಅವಲೋಕಿಸದೆ ತಥಾಕಥಿತ ಸಾಹಿತ್ಯಪ್ರಕಾರದ ಸಂಕೇತ, ಆಕೃತಿ-ಬಂಧವನ್ನು ಬೀಸಾಡಿ ಈ ಬರವಣಿಗೆ ಆಗಿರುತ್ತದೆ. ಆತ್ಮಚರಿತ್ರೆಯಲ್ಲಿನ ಆತ್ಮನಿವೇದನೆಯು ಆಯುಷ್ಯದ ಉತ್ತರಾವಸ್ಥೆಯ ಮತ್ತು ಬಹುಶಃ ಸಿಂಹಾವಲೋಕನ ಸ್ವರೂಪದ್ದಾಗಿರುತ್ತದೆ. ಆದರೆ 'ತರಾಳ-ಅಂತರಾಳ' ಆತ್ಮಕಥೆಯನ್ನು ಅಪವಾದವೆಂದು ಬಿಟ್ಟರೆ 'ಬಲೂತ' 'ಆಠವಣಿಚೆ ಪಕ್ಷಿ' 'ಮುಕ್ಕಾಂ ಪೋಷ್ಟ ದೇವಾಚೆ ಗೋಠಣೆ' 'ಉಪರಾ' ಮತ್ತು 'ಕಾಟ್ಯಾವರಚಿ ಪೋಟ' ಈ ನಾಲ್ಕು ಆತ್ಮಕಥೆಗಳ ಲೇಖಕ ಮತ್ತು ಆತ್ಮನಿವೇದನೆ

ಮಾಡಿಕೊಳ್ಳುವ ನಾಯಕನ ವಯಸ್ಸು ನಲವತ್ತರ ಅಥವಾ ನಲವತ್ತಕ್ಕಿಂತ ಒಳಗಿನದಾಗಿದೆ. ಎರಡನೆಯ ವಿಷಯವೆಂದರೆ ಅವರ ಆತ್ಮಕಥನದ ಸ್ವರೂಪವು ಕೇವಲ ತೃಪ್ತಮನದಿಂದ ಮೂಡಿದ ಜೀವನದ ಸಿಂಹಾವಲೋಕನವಲ್ಲ; ಒಳಗೊಳಗ ನೋಯುವ ಗಾಯದಿಂದ ವಿಹ್ವಲವಾದ ಅಸ್ವಸ್ಥಮನಸ್ಸು ಮಾಡಿದ ಕಥನ -ಈ ಎರಡೂ ಆತ್ಮಕಥನಗಳಲ್ಲಿ ಅವತರಿಸಿದೆ. ಇದನ್ನೂ ಬರೆಯುವಾಗ, ಮತ್ತೆ ಆ ಭೂತಕಾಲದಲ್ಲಿ ಘಟಿಸಿದ ಘಟನೆಗಳಿಂದ ಮತ್ತೊಮ್ಮೆ ಗಾಯಾಳುವಾಗಿ ಅನುಭವಿಸುವ ಅನುಭವ 'ಎರಡೂ ಲೇಖಕರಿಗೆ ಬಂದುದಾಗಿದೆ. ಕಾಲುದಾರಿಯಲ್ಲಿ ಮೂಡಿದ ಹೆಜ್ಜೆ ಗುರುತುಗಳನ್ನು ಕಂಡು ತಮಷ್ಟಕ್ಕೆ ತಾವು ಹೆಜ್ಜೆ ಎತ್ತಿ ಇಡುವಂತೆ ತೋರುತ್ತದೆ ಈ ಭಾವನೆ. ಲೌಕಿಕ ಕಾರ್ಯದಿಂದ ಬದಲಾದ ಲೇಖಕ ಅಂತರ್ಯಾಮದಲ್ಲಿ ಅದೇ ಭೂತಕಾಲದಲ್ಲಿರುತ್ತಾನೆ. ಭೂತಕಾಲದಲ್ಲಿಯ ಆ 'ಅವನು' ಮತ್ತು ವರ್ತಮಾನದಲ್ಲಿ ಕೆಲಮಟ್ಟಿಗೆ ಸ್ಥಿರಗೊಂಡ 'ಅವನು' ಇವರಲ್ಲಿನ ಅಂತರದ್ವಂದ್ವದಿಂದ ಆತ್ಮಕಥನದ ನಿರ್ಮಿತಿಯಾಗಿರುತ್ತದೆ. ಈ ಮೇಲೆ ಉಲ್ಲೇಖಿಸಿದ ಆತ್ಮಕಥನಗಳ ಬಗ್ಗೆ ವಿಚಾರ ಮಾಡುವಾಗ ದಯಾ ಪವಾರರ 'ಬಲೂತೆ' ಲಕ್ಷ್ಮಣ ಮಾನೆಯ 'ಉಪರಾ' ಈ ಎರಡರ ಮತ್ತು ಉತ್ತಮ ಬಂಡು ತುಪೆಯ 'ಕಾಟ್ಯಾವರಚಿ ಪೋಟ' ಇವುಗಳ ಬಾಹ್ಯಾಕಾರ ಒಂದೇ ರೀತಿಯದಾಗಿದೆ. ಅವುಗಳ ಸ್ವರೂಪ ಕಾದಂಬರಿ ಪ್ರಕಾರಕ್ಕೆ ಹೊಂದುವಂತಿದೆಯಾದರೂ ಸ್ವಂತದ ಜೀವನದ ಇತಿಹಾಸವನ್ನು ಹೇಳುವಂತಿದೆ. ಆದರೆ ಈ ಮೂರು ಕೃತಿಗಳಲ್ಲಿ ಸೂಕ್ಷ್ಮವ್ಯತ್ಯಾಸವೂ ಇದೆ. ದಯಾ ಪವಾರ ದಗುಡು ಪವಾರದಲ್ಲಿ ತನ್ನಲ್ಲಿಯ ಸ್ವಲ್ಪ ಸ್ವಲ್ಪ ವಿಕಸಿತವಾಗುತ್ತ ಸಾಗಿದ ಅಂತರ್ಮನದಲ್ಲಿ ತಳವೂರಿದ 'ಸ್ವ 'ದಿಂದ ವಿಕಸಿತವಾದ ವರ್ತಮಾನದಲ್ಲಿನ ಎರಡನೆಯ 'ಸ್ವ' ನಿಗೆ (ದಯಾ ಪವಾರನಿಗೆ) ತನ್ನ ಕಥೆಯನ್ನು ಹೇಳಬೇಕೆಂಬ ಕಲ್ಪನೆಯಿಂದ ಬರವಣಿಗೆಯನ್ನು ಮಾಡಲಾಗಿದೆ. ಲಕ್ಷ್ಮಣ ಮಾನೆ ಸರಳವಾಗಿ 'ನಾವು' 'ನಾನು' ಮೂಲಕ ಆತ್ಮನಿವೇದನೆ ಮಾಡಿದ್ದಾರೆ. 'ಕಾಟ್ಯಾವರಚಿ ಪೋಟ' ದಲ್ಲಿಯೂ 'ನಾನು' ಎಂಬುವವನೇ ನಿವೇದನೆ ಮಾಡಿಕೊಳ್ಳುತ್ತಾನೆ. ಆದರೆ ಅದು ನೆನಪಿನ ಸ್ವರೂಪದಲ್ಲಿದೆ. ಸೋನಕಾಂಬಳೆ ಅವರ 'ಆಠವಣಿಚೆ ಪಕ್ಷಿ' ಕೃತಿಯು ನೆನಪುಗಳಿಗೆ 'ಬಿಡಿಬಿಡಿ ಲೇಖನಗಳ ಸ್ವರೂಪವನ್ನು ಕೊಟ್ಟು ಚಿತ್ರಿಸಲಾಗಿದೆ. ಶಂಕರರಾವರ ಆತ್ಮಕಥನ ತರಾಳ-ಅಂತರಾಳ ಮಾತ್ರ ನಿಜವಾದ ಅರ್ಥದಲ್ಲಿ ಆತ್ಮಕಥನ ಸ್ವರೂಪದ್ದಾಗಿದೆ. ಇದು ಆತ್ಮಚರಿತ್ರೆಯೊಂದಿಗೆ ಸಮೀಪದ ಸಂಬಂಧವನ್ನೂ ಪಡೆಯುವುದಾಗಿದೆ. (ಆದರೂ ಅದು ಆತ್ಮಚರಿತ್ರವಲ್ಲ !) ತಮ್ಮ ಸುದೀರ್ಘವಾದ ಜೀವನದ ಅನೇಕ ಅನುಭವಗಳನ್ನು ನೆನಪಾದಂಥವನ್ನು ಹಾಗೂ ನೆನಪಾದಂತೆ ಅವರು ಅದರಲ್ಲಿ ಸಾಕಾರಗೊಳಿಸಿದ್ದಾರೆ. ಈ ಎರಡೂ ಆತ್ಮಲೇಖನಗಳ ಬಾಹ್ಯ ಪರಿವೇಷವು ಬೇರೆ ಬೇರೆಯಾಗಿದ್ದರೂ ಅಂತರ್ಮನದ ರಚನೆಯಿಂದಲೇ ಅವುಗಳ

ಅಂತರ್-ತಿರುಳನ್ನು ರೂಪಿಸಲಾಗಿದೆ ಎಂಬುದನ್ನು ಗಮನಿಸುವುದು ಅತೀ ಮಹತ್ವದ್ದಾಗಿದೆ. ವೇದನಾಗರ್ಭವುಳ್ಳ ಸ್ಮರಣೆಯೂ ಆಗಬಾರದೆನಿಸುವ, ಆದರೂ ಮರೆಯಲಾಗದಂಥ ಗತ ಜೀವನದ ವ್ಯಥೆಗಳ ಗಂಟನ್ನು ಸತತ ಎದೆಯ ಮೇಲಿರಿಸಿಕೊಂಡು ಅಲೆದಾಡುವ ಲೇಖಕರ ಆತ್ಮಕಥನಗಳೇ ಇವಾಗಿವೆ.

ಈ ಆರೂ ಆತ್ಮಕಥನಗಳಲ್ಲಿ ಗ್ರಾಮೀಣ ಜೀವನದ ಚಿತ್ರಣ ಬಂದಿದೆ. ಅದಕ್ಕೆ ಕಾರಣವೆಂದರೆ ದಯಾ ಪವಾರ, ಪ್ರ.ಈ ಸೋನಾ ಕಾಂಬಳೆ, ಮಾಧವ ಕೊಂಡವಿಲಕರ, ಲಕ್ಷ್ಮಣ ಮಾನೆ, ಉತ್ತಮ ಬಂಡೂ ತುಪೆ ಮತ್ತು ಶಂಕರರಾವ ಖರಾತ ಈ ಲೇಖಕರೆಲ್ಲ ಮೂಲತಃ ಗ್ರಾಮೀಣ ಪ್ರದೇಶದಿಂದ ಬಂದವರಾಗಿದ್ದಾರೆ. ಇವರಲ್ಲಿ ದಯಾ ಪವಾರರ ಬಾಲ್ಯವು ಧಾಮಣಗಾಂವದಂತಹ ಹಳ್ಳಿಯಲ್ಲಿ ಮತ್ತು ಸಂಗಮನೇರದಂಥ ತಾಲೂಕಿನ ಸ್ಥಳದಲ್ಲಿ ಕಳೆದಿದೆ. ಅದರಂತೆ ಪ್ರ.ಈ ಸೋನಕಾಂಬಳೆಯವರ ಬಾಲ್ಯವು ಚೇರಾ, ಹಡಳೋತೀ ಅಥವಾ ಅಹಮದಪೂರ ಉದಗೀರ ಕಡೆಯ ಗ್ರಾಮೀಣ ಪ್ರದೇಶದಲ್ಲಿ ಕಳೆದಿದೆ. ಕೊಂಡವಿಲಕರರು ಇಂದಿಗೂ ಹಳ್ಳಿಯಲ್ಲಿ ವಾಸವಾಗಿದ್ದಾರೆ. ಲಕ್ಷ್ಮಣ ಮಾನೆ ಕೈಕಾಡಿ ಸಮಾಜ (ಅಲೆಮಾರಿ ಜನಾಂಗ)ದವರಾಗಿದ್ದರೂ ಕೂಡ ಸಾತಾರಾ ಕೊಲ್ಹಾಪೂರ ಭಾಗದ ನಿರಗುಡಿ, ಸೋಮಥಲಿ ಫಲಟಣದಂಥ ಗ್ರಾಮೀಣ ಪ್ರದೇಶದಲ್ಲಿಯೇ ಬೆಳೆದರು. ಉತ್ತಮ ಬಂಡುತುಪೆ ಇವರ ಬಾಲ್ಯ ಶ್ರೀಗೋಂದಾ ಸಮೀಪದ ಗ್ರಾಮೀಣ ಪರಿಸರದಲ್ಲಿ ಕಳೆಯಿತು. ಶಂಕರರಾವ ಖರಾತರ ಪೂರ್ವಾಯುಷ್ಯ ಆಟಪಾಡಿ, ದಿಂಥ ಮೊದಲಾದ ಸಾತಾರಾ ಕಡೆಯ ಭಾಗದ ಗ್ರಾಮೀಣ ಪರಿಸರದಲ್ಲಿ ಕಳೆಯಿತು. ಒಟ್ಟಿನಲ್ಲಿ ಆರೂಜನ ಲೇಖಕರಿಗೆ ಗ್ರಾಮೀಣ ಜೀವನದ ಸಂಪೂರ್ಣ ಅನುಭವವಿದೆ. ಇದರಿಂದಾಗಿ ಅಹಮದನಗರ ಸಂಗಮನೇರ ಪರಿಸರ, ಮರಾಠವಾಡದ ಅಹಮದಪೂರ ಉದಗೀರ ಪ್ರದೇಶ ಅಂದರೆ ಕರ್ನಾಟಕ-ಮಹಾರಾಷ್ಟ್ರಗಳ ಗಡಿ ಪ್ರದೇಶವಾದರೂ ,ಮರಾಠಿಭಾಷೆಯ ಮೇಲೆ ಕನ್ನಡದ ಪ್ರಭಾವವುಳ್ಳ ಪರಿಸರ, ಫಲಟಣ -ಕೊಲ್ಹಾಪೂರ ಭಾಗದ ಗ್ರಾಮೀಣ ಪರಿಸರ, ಶ್ರೀಗೋಂದಾ ಭಾಗದ ಗ್ರಾಮ ಜೀವನ ಮತ್ತು ಆಟಪಾಡಿ -ಸಾತಾರಾ-ಸಾಂಗಲಿ ಭಾಗದ ಪರಿಸರ ಹೀಗೆ ಮಹಾರಾಷ್ಟ್ರದ ವಿವಿಧ ಭಾಗದ ಗ್ರಾಮೀಣ ಜೀವನದ ಚಿತ್ರಣ ಅನುಭವ ಕಥನದ ನಿಮಿತ್ತದಿಂದ ಇಲ್ಲಿ ಬಂದಿದೆ. ಇದರಿಂದಾಗಿ ಆಯಾಭಾಗದ ಭೌಗೋಲಿಕ ಪರಿಸರ, ಅಲ್ಲಿಯ ನಿಸರ್ಗ, ನೆಲ-ಜಲ, ಅಲ್ಲಿಯ ಜನಜೀವನ,ಜಾತ್ರೆ, ಧಾರ್ಮಿಕ-ಶ್ರದ್ಧಾಸ್ಥಾನಗಳು, ಭಾವುಕ ಶ್ರದ್ಧಾಳು ಜನ, ಅವರ ನಂಬಿಕೆ -ಅಪನಂಬಿಕೆ, ಅಂಧಶ್ರದ್ಧೆ, ಆಚರಣೆ, ಸಂಪ್ರದಾಯ, ಪರಂಪರೆ -ರೂಢಿ, ಆಡುಮಾತು ಇವುಗಳ ವೈಶಿಷ್ಟ್ಯಗಳು ಇಲ್ಲಿ ಅವತರಿಸಿವೆ. ಲೇಖಕ ಜನ್ಮತಾಳಿದ ಜಾತಿಯನ್ನನುಸರಿಸಿ ಆಯಾಜಾತಿಯ ಆಚಾರ-ವಿಚಾರ, ವ್ಯವಸಾಯ, ಅವುಗಳ ಸ್ವರೂಪ, ಜಾತಿಯ

ಪಂಚಾಯತಿ, ಲಗ್ನಕಾರ್ಯಗಳು, ಅಂತ್ಯಸಂಸ್ಕಾರ, ಮೊದಲಾದವುಗಳ ವಿವರ ಇಲ್ಲಿ ಬಂದಿದೆ. ಇದರಿಂದಾಗಿ ಸಹಜವಾಗಿಯೇ ಆಯಾ ಭಾಗದ ಒಟ್ಟು ಪ್ರದೇಶದ ವೈಶಿಷ್ಟ್ಯಗಳ ದರ್ಶನವಾಗಿದೆ. ಹೊಲೆಮಾದಿಗ ಸಮಗಾರರ, ವಸತಿಗಳ, ಅಜ್ಞಾನ-ದೈನ್ಯ ಮತ್ತು ದಾಸ್ಯದ ಚಕ್ರದಲ್ಲಿ ಜೀವನವನ್ನು ಕಳೆಯುವ ಹಳ್ಳಿಯ ಕೆಳವರ್ಗದ ಸಮಾಜದ ದೈನ್ಯ, ತುಕ್ಕು ಹಿಡಿದ ಜೀವನಕ್ಕೆ ಬೇಸತ್ತ, ಈ ಹರಿದು ಚಿಂದಿಯಾದ, ಆಯುಷ್ಯದಲ್ಲಿಯೂ ಎಲ್ಲ ಮಾನವ ವಿಕಾರಗಳೊಂದಿಗೆ ಜೀವಿಸುವ ಮಾನವರ ಮತ್ತು ಸ್ಮಶಾನದ ದಾರಿಯಲ್ಲಿಯೂ ದೇವರನ್ನು ಪೂಜಿಸುವ ಮನುಷ್ಯರ ದರ್ಶನವಾಗುತ್ತದೆ.

'ಮುಕ್ಕಾಂ ಪೋಷ್ಟ ದೇವಾ'ದ ಗೋಠಣ ಊರಿನ ಮಾಧವ ಕೊಂಡವಿಲಕರರನ್ನು ಬಿಟ್ಟರೆ ಉಳಿದವರೆಲ್ಲರಿಗೆ ನಗರ ಜೀವನಕ್ಕೆ ಅಪರಿಹಾರ್ಯವಾಗಿ ಬರಬೇಕಾಗಿದೆ. ನಗರ ಜೀವನಕ್ಕೆ ಬಂದ ಮೇಲೆ ಅಲ್ಲಿನ ಜೀವನದಲ್ಲಿ ನಿರ್ಮಾಣಗೊಂಡ ಸಂಘರ್ಷ ಮತ್ತು ಆ ಸಂಘರ್ಷದ ಒತ್ತಡದ ಚಿತ್ರಣ ಇಲ್ಲಿ ಬಂದಿದೆ. ಆದರೆ ಆ ಗ್ರಾಮೀಣ ಜೀವನದಿಂದ ಇವರೆಲ್ಲರೂ ಬೇರ್ಪಟ್ಟಿದ್ದಾರೆ. ಮಾಧವ ಕೊಂಡವಿಲಕರ ಮಾತ್ರ ಅದೇ ಗ್ರಾಮೀಣ ಪ್ರದೇಶದ ದೇವರೂಖದಂಥ ಸ್ಥಳದಲ್ಲಿ ವಾಸವಾಗಿದ್ದಾರೆ. ಆದರೂ ಅವರಿಗೆ ಹಾಗೂ ಇತರ ಐವರೂ ಲೇಖಕರಿಗೆ ನಗರ ಜೀವನ, ಮಧ್ಯಮವರ್ಗದ, ಸುಸಂಸ್ಕೃತ ಎನ್ನಿಸಿಕೊಳ್ಳುವ ಸ್ಥಿರ ಜೀವನದ ಆಕರ್ಷಣೆಯಿದೆ; ಹಾಗೆ ಜೀವಿಸುವ ಪ್ರಯತ್ನವಿದೆ. ಹೆಚ್ಚು ಕಡಿಮೆ ಪ್ರಮಾಣದಲ್ಲಿ ಅವರಿಗೆ ಇದು ಪ್ರಾಪ್ತವಾಗಿಯೂ ಇದೆ. ಇದಕ್ಕೆ ಅಪವಾದವಾಗಿ ಉತ್ತಮ ಬಂಡೂ ತುಪೆಯಂತಹ ಒಬ್ಬ ಲೇಖಕ ಇರುವ ಸಾಧ್ಯತೆಯಿದೆ. ಇದರಿಂದಾಗಿಯೂ ಕೆಲವು ನವೀನ ಒತ್ತಡಗಳು ನಿರ್ಮಾಣವಾಗಿವೆ. ಈ ಒತ್ತಡಗಳ ಪ್ರತಿರತೆಯು ದಯಾ ಪವಾರರ 'ಬಲೂತ'ದಲ್ಲಿ ಮಾಧವ ಕೊಂಡವಿಲಕರ 'ಮುಕ್ಕಾಮ ಪೋಷ್ಟ ದೇವಾಚೆ ಗೋಠಣೆ'ಯ ಆತ್ಮಕಥನ ಸ್ವರೂಪದ ದಿನಚರಿಯಲ್ಲಿ ಮತ್ತು ಲಕ್ಷ್ಮಣ ಮಾನೆಯ 'ಉಪರಾ'ದಲ್ಲಿ ವಿಶೇಷವಾಗಿ ಕಂಡುಬರುತ್ತದೆ. ನಮ್ಮ ಸಮಾಜವನ್ನು ನಾವು ಸುಧಾರಿಸಿದರೆ ಆತನನ್ನೂ 'ದಲಿತ-ಬ್ರಾಹ್ಮಣ'ನೆಂದು ತಿಳಿಯಲಾಗುತ್ತದೆಂಬ ತಕರಾರಿನಲ್ಲಿ ದಯಾ ಪವಾರರ ಮನ ಎರಡು ಹೋಳಾದುದು ಮನವರಿಕೆಯಾಗುತ್ತದೆ. ಅಂದರೆ ಇವರು ಕಲಿತು ಸುಧಾರಿಸಿ ಉಳಿದವರಿಗಿಂತ ಸ್ಥಿರವಾಗಿ ಇಂದಿಗೂ ಅದೇ ಅಜ್ಞಾನ ದಾರಿದ್ರ್ಯದಲ್ಲಿ ಜೀವಿಸುವ ಸ್ವಜಾತಿಯ ಜನರಿಂದ ದೂರವಾಗಿ ಉಳಿಯುತ್ತಾರೆ. ಆದರೆ ಸವರ್ಣ ತಥಾಕಥಿತ ಮಧ್ಯಮವರ್ಗದ ಉಚ್ಚಭ್ರೂ ಮೇಲಿನ ಸಮಾಜಿಕ ಸ್ತರದ ಜಾತಿಯವರು ಇಂದಿಗೂ ಅವರನ್ನು ಮನಸಾರೆ ಅರ್ಥಮಾಡಿಕೊಳ್ಳಲು ಸಿದ್ಧರಿಲ್ಲ. ಇಂಥ ಸಂದಿಗ್ಧತೆಯಲ್ಲಿ ದಯಾ ಪವಾರ ಸಿಲುಕಿಕೊಂಡಿದ್ದಾರೆ. ಹೆಚ್ಚು ಕಡಿಮೆ ಪ್ರಮಾಣದಲ್ಲಿ ಇದೇ ಅವಸ್ಥೆ ಮಾಧವ ಕೊಂಡವಿಲಕರರದಾಗಿದೆ. ಜಾತಿಯ ರೀತಿ ಸಂಪ್ರದಾಯಗಳನ್ನು ಇವರು ಪಾಲಿಸುವುದಿಲ್ಲ.

ತಮ್ಮ ಕಾಲ ಮೇಲೆ ನಿಲ್ಲುವುದಿಲ್ಲವೆಂಬುದು ಅವರ ಸ್ವಜಾತಿಯವರ ತಕರಾರು, ಆದರೆ ಸವರ್ಣೀಯರ ಬರವಣಿಗೆಯಲ್ಲಿ ಇಂದಿಗೂ ಅವರು 'ಹೊಲೆ ಮಾದಿಗರೇ' ಆಗಿದ್ದಾರೆ.

ಇಂಥವೇ ಅನುಭವ ಸವರ್ಣೀಯರಿಗೆ ಸಂಬಂಧಿಸಿರುವುದನ್ನು ಪ್ರ.ಈ ಸೋನ ಕಾಂಬಳೆ 'ಊಂಟಾವರಚಾ ಪ್ರವಾಸ' ಎಂಬ ಲೇಖನದಲ್ಲಿದೆ. ಆದರೆ ಮಾನೆಯವರು ಅನ್ಯಜಾತಿಯ ಹುಡುಗಿಯನ್ನು ಮದುವೆ ಆದುದರಿಂದ ಜಾತಿ ಕೆಟ್ಟಿತೆಂದು ಬಂಧುಗಳ ಪಂಚಾಯಿತಿಯ ಎದುರು ನಿಲ್ಲಬೇಕಾಗುತ್ತದೆ. ಅದರಂತೆ ತಮ್ಮ ಜಾತಿಯ ರೀತಿಯಂತೆ ನಡೆದುಕೊಳ್ಳುವುದಿಲ್ಲ, ಜಾತಿಯ ಬಗ್ಗೆ ಬರೆಯುತ್ತಾನೆ ಎಂದು ಜಾತಿ ಪಂಚಾಯಿತಿ ನೀಡಿದ ನಿರ್ಣಯವನ್ನು ಕೊಂಡವಿಲಕರ ಮಾನ್ಯ ಮಾಡಬೇಕಾಗಿದೆ. ಅಸೂಯೆಯಿಂದ ಅಥವಾ ಸುಧಾರಣೆ ಎಂದು ಶಂಕರರಾವ ಖರಾತ ಅಥವಾ ಉತ್ತಮ ಬಂಡು ತುಪೆ ಇವರು ಮಾತ್ರ ಸ್ವಜಾತಿಯ ಬಗ್ಗೆ ತಕರಾರಿನ ಧ್ವನಿ ಎತ್ತಿಲ್ಲ. ದಯಾ ಪವಾರ, ಪ್ರ.ಈ ಸೋನ ಕಾಂಬಳೆ, ಖರಾತ ಯಾವ ಸಂದರ್ಭದಲ್ಲಿ ಯಾವ ಯಾವ ಸವರ್ಣೀಯರು ಸಹಾಯ ಮಾಡಿದರೆಂಬುದನ್ನು ಕೃತಜ್ಞತೆಯಿಂದ ಉಲ್ಲೇಖಿಸಿದ್ದಾರೆ. ಇಂಥ ಉಲ್ಲೇಖಗಳು 'ಅಠವಣಿಚೆ ಪಕ್ಷಿ' 'ಉಪರಾ' 'ಮುಕ್ಕಾಮು ಪೋಷ್ಟ ದೇವಾಚೆ ಗೋಠಣೆ' 'ಕಾಟ್ಯಾವರಚೀ ಪೋಟ' ಮತ್ತು 'ತರಾಳ-ಅಂತರಾಳ'ದಲ್ಲಿ ವಿಶೇಷವಾಗಿ ಕಂಡು ಬರುತ್ತವೆ.

ನೀರನ್ನು ಅಂತರದ ಮೇಲಿಂದ ಉಣಿಸುವುದು; ನೀರು ನೀಡಲು ನಿರಾಕರಿಸುವುದು ಅಥವಾ ಬೊಗಸೆಯಿಂದ ಕುಡಿಯುವಂತೆ ಮಾಡುವುದು. ಅಥವಾ ಬೇರೆ ಪ್ರತ್ಯೇಕ ಪಾತ್ರೆಯನ್ನು ಕೊಡುವುದು; ಊಟಕ್ಕೆ ಹೊಲಸಿನಲ್ಲಿ, ಹಿತ್ತಲಿನಲ್ಲಿ ಅಂತರದಲ್ಲಿ ಕೂಡ್ರುವಂತೆ ಮಾಡುವುದು; ಅಥವಾ ಪಂಕ್ತಿಯಿಂದ ಎಬ್ಬಿಸುವುದು ಶಾಲೆಯಲ್ಲಿ ಅಂತರದಲ್ಲಿ ಕೂಡ್ರುವಂತೆ ಮಾಡುವುದು ದೂರಿನಿಂದ ಬೆತ್ತದಿಂದ ಹೊಡೆಯುವುದು; ಮೊದಲಾದ ಅಸ್ಪೃಶ್ಯತೆಯಿಂದಾದ ಅನುಭವಗಳು ಎಲ್ಲ ಆತ್ಮಕಥನಗಳಲ್ಲಿ ಬಂದಿವೆ. ಆದರೆ ಕೆಳಜಾತಿಯವನೆಂದು ಪ್ರೇಮವನ್ನು ನಿರಾಕರಿಸುವುದರ ಅನುಭವವು 'ಬಲೂತ' 'ಉಪರಾ' ಮತ್ತು 'ತರಾಳ-ಅಂತರಾಳ'ಗಳಲ್ಲಿ ಇದೆ.

ದಲಿತ ಆತ್ಮಕಥನಗಳಿಗೆ ಸಮೂಹ ಮನದ ಸ್ಪಂದನವಿರುತ್ತದೆಂದು ಹೇಳುವಾಗ ಬಾಲಮನದ ಭಾವವಿಶ್ವ, ಆ ಕಾಲದ ಆಟ, ಜಯಕೆ, ಆಯ್ಕೆ ತುಂಟಾಟ ಹಳ್ಳಿಗಾಡಿನ ರೀತಿ, ತಾರುಣ್ಯದ ಪ್ರೇಮ ಪ್ರಕರಣ........... ಆ ವಯಸ್ಸಿನಲ್ಲಿ ವಿಷಯ ಸುಖದ ಅರಿವು ವಿಕಾಸವಾಗುತ್ತಿರುವಾಗ ಮಾಡಿದ ಉದ್ಯೋಗ ಅಥವಾ ಸುತ್ತಲಿನ ಜನರ ವಿಷಯಾಸಕ್ತ ಜೀವನ ವಿಷಯದ ಬರವಣಿಗೆ, ಸ್ವಂತ ಪುರುಷಾರ್ಥದ ಆತ್ಮಗೌರವಪಡೆಗೆ ಹಾಲಿದ ವರ್ಣನೆ, 'ಬಲೂತ' 'ಉಪರಾ' ಮತ್ತು 'ಕಾಟ್ಯಾವರಚೀ ಪೋಟ' ಈ ಆತ್ಮಕಥನಗಳಲ್ಲಿ

ಬಂದ ಸ್ತ್ರೀಪುರುಷರ ವಿಕೃತ ವಾಸನೆ ವಿಕಾರಗಳ ಪ್ರಸಂಗಗಳು ಈ ದೃಷ್ಟಿಯಿಂದ ವಿಶೇಷ ಗಮನಕ್ಕೆ ಬರುತ್ತವೆ.

ಇಂಥ ಕೆಲವು ಅಪವಾದಾತ್ಮಕ ಕೊರತೆಗಳನ್ನು ಬಿಟ್ಟರೆ ಈ ಆತ್ಮಕಥನಗಳಲ್ಲಿ ಸಮೂಹಮನದ ಚಿತ್ರಣವಾಗಿದೆಯೆಂದು ಹೇಳಬಹುದು. ಹಸಿವೆಯ ಅಸ್ತಿತ್ವ ಎಲ್ಲದರಲ್ಲೂ ಇದೆ. ಸರ್ವಪ್ರಶ್ನೆಗಳ ಅಗ್ರಭಾಗದಲ್ಲಿ ಹಸಿವು ಇದೆ. 'ಅಠವಣೀಚೆ ಪಕ್ಷಿ' 'ಉಪರಾ' 'ತರಾಳ-ಅಂತರಾಳ' ಮತ್ತು 'ಕಾಟ್ಯಾವರಚೀ ಪೋಟ' ಇವುಗಳಲ್ಲಿ ಅದು ತನ್ನ ಅಧಿಕ ತೀವ್ರರೂಪವನ್ನು ಧರಿಸಿದುದು ಕಂಡುಬರುತ್ತದೆ. ಅದರಲ್ಲೂ ಸೋನ ಕಾಂಬಳೆ ಮತ್ತು ಖರಾತ ಇವರ ಅನುಭವ ಸಾಕಷ್ಟು ಭಯಾನಕವಾಗಿವೆ. ದಾರಿದ್ರ್ಯ, ಹಸಿವೆಯ ಸಂಕಟ, ಅಜ್ಞಾನ ಇವುಗಳಿಂದಲೇ ಈ ಎಲ್ಲ ಲೇಖಕರು ತಮ್ಮ ಜೀವನವನ್ನು ರೂಪಿಸಿಕೊಳ್ಳಬೇಕಾಯಿತು. ಇದೆಲ್ಲದರ ತಳಹದಿಯಲ್ಲಿ ಧರ್ಮವನ್ನಾಧರಿಸಿದ ಜಾತೀಯ ವ್ಯವಸ್ಥೆಯೇ ಕಾರಣೀಭೂತವಾಗಿದೆ. ಆದುದರಿಂದ ಈ ಲೇಖಕರ ಆತ್ಮಕಥನಗಳು ಕೇವಲ ಅವರೊಬ್ಬಬ್ಬರವಾಗಿರದೆ ಅವು ಸಮಾಜದ ಪ್ರಾತಿನಿಧಿಕವಾದ ಆತ್ಮಕಥನಗಳಾಗುತ್ತವೆ. ಅದರಲ್ಲಿ ಮೇಲೆ ಉಲ್ಲೇಖಿಸಿದ ನಿರ್ದೋಷವ್ಯಕ್ತ ದೋಷಗಳ ಮಿಶ್ರಣವಾದುದರಿಂದ ಕೆಲವು ಸಲ ಅವುಗಳ ಸ್ವರೂಪ ವ್ಯಕ್ತಿಗತ ಸ್ವರೂಪದವಾಗಿದ್ದರೂ ಅವರ ಬರವಣಿಗೆಯ ಧೋರಣೆ ಮತ್ತು ದೃಷ್ಟಿಯನ್ನು ಗಮನಿಸಿದರೆ ಅವು ಸಾಮಾಜಿಕ ಜೀವನದ ಪ್ರಾತಿನಿಧಿಕ ಆತ್ಮಕಥನಗಳಾಗಿ ನಿರ್ಧರಿಸಲ್ಪಡುತ್ತವೆ.

ಇಲ್ಲಿ ನನಗೆ ಮೆಚ್ಚುಗೆಯಾದ ಬರೆಯಲೇಬೇಕೆನಿಸಿದ 'ಬಲೂತ' 'ಅಠವಣೀಚೇ ಪಕ್ಷಿ' 'ಮುಕ್ಕಾಮ ಪೋಷ್ಟ ದೇವಾಚೆ ಗೋಠಣೆ' 'ಉಪರಾ' 'ಕಾಟ್ಯಾವರಚೀ ಪೋಟ' ಮತ್ತು 'ತರಾಳ-ಅಂತರಾಳ' ಈ ಆರು ಪುಸ್ತಕಗಳ ಬಗ್ಗೆ ವಿವೇಚನೆ ಮಾಡಲಾಗಿದೆ. ವಾಸ್ತವಿಕವಾಗಿ ಇದೇ ಕಾಲದಲ್ಲಿ ಪ್ರಕಟವಾದ ರಾಮ ನಗರಕರರ 'ರಾಮನಗರಿ' ಪ್ರಾ॥ಕೇಶವ ಮೇಶ್ರಾಮರ 'ಹಕಿಕತ್' ಮತ್ತು 'ಜಟಾಯು'; ಪ್ರಾ॥ ಕುಮುದ ಪಾವಡೆಯ 'ಅಂತಸ್ಫೋಟ' ನಾನಾಸಾಹೇಬ ಝೋಡಗೆಯ 'ಫಾಂಜರ' ಮತ್ತು ಇತ್ತೀಚೆಗೆ ಪ್ರಕಟವಾದ ಪ್ರಾ॥ ಅಚಲಖಾಂಬರ 'ಗಾವಕೀ' ಮೊದಲಾದ ಆತ್ಮಕಥನಗಳ ಬಗ್ಗೆಯೂ ಬರೆಯುವುದು ಅಗತ್ಯವಿದೆ.

ಆಣೆ - ಪ್ರಮಾಣ

★ ಎಚ್.ವಿ. ನಾಗೇಶ್

ಆಣೆ -ಪ್ರಮಾಣ ಪದ್ಧತಿಯ ಪರಿಚಯವಿಲ್ಲದ ಸಮುದಾಯವಾಗಲಿ, ಜನಾಂಗವಾಗಲಿ ಇಲ್ಲವೇ ಇಲ್ಲ ಎಂದು ಆಣೆಮಾಡಿ ಹೇಳಬಹುದೇನೊ ! ಅಂದರೆ, ಅದು ಅಷ್ಟು ಪ್ರಾಚಿನ ಮತ್ತು ವ್ಯಾಪಕವಾದ ಪದ್ಧತಿ. ಪ್ರಾಚೀನ ನ್ಯಾಯದಾನದಲ್ಲಂತೂ ಆಣೆ -ಪ್ರಮಾಣ ಬಹಳ ಮಹತ್ವ ಪಡೆದಿತ್ತು.

ಆಣೆ ಎಂದರೆ ಪ್ರಮಾಣವಚನ. ಈ ಪ್ರಮಾಣವಚನಕ್ಕೆ ಪ್ರಾಚೀನರಲ್ಲಿ ಸತ್ಯದಷ್ಟೇ ಸ್ಥಾನ. ಪ್ರಮಾಣ ಮಾಡಕೊಟ್ಟ ಹೇಳಿಕೆಯನ್ನು ಕುಲದ ಹಿರಿಯರೂ, ಗ್ರಾಮದ ಪಂಚರೂ, ಧರ್ಮದ ಪ್ರತಿನಿಧಿಗಳೂ ಸಾಮಾನ್ಯವಾಗಿ ಒಪ್ಪಿಕೊಂಡುಬಿಡುವುದು ನಮ್ಮಲ್ಲಿ ರೂಢಿ. ದೇವರ ಮುಂದೆ, ಧರ್ಮಾಧಿಕಾರಿಗಳ ಮುಂದೆ, ಅಥವಾ ಧರ್ಮಗುರುಗಳ ಮುಂದೆ ಆಣೆ- ಪ್ರಮಾಣ ಮಾಡಿಸುವುದು ಎಲ್ಲರಿಗೂ ಒಪ್ಪಿತವಾದ ಸಾಮಾನ್ಯ ಪದ್ಧತಿ. ನಮ್ಮ ದೇಶದಲ್ಲಿ ದೇವಸ್ಥಾನಗಳಲ್ಲಿ, ದೇವರ ಸಮ್ಮುಖದಲ್ಲಿ ಆಣೆ-ಪ್ರಮಾಣ ಮಾಡಿ ಹೇಳಿಕೆ ಕೊಡುವುದು ಬಹಳ ವ್ಯಾಪಕವಾಗಿ ಬಳಕೆಯಲ್ಲಿತ್ತು. ಕೆಲವೊಮ್ಮೆ ಊರ ಹಿರಿಯರ ಸಮ್ಮುಖದಲ್ಲಿ ಅಥವಾ ಪಂಚಾಯತಿಗಳ ಎದುರು ಇಂತಹ ಆಣೆ - ಪ್ರಮಾಣ ಮಾಡಿಸುತ್ತಿದ್ದರು. ಪಾಶ್ಚಾತ್ಯ ದೇಶಗಳಲ್ಲಿಯೂ ಆಣೆ ಇಡುವ ಪದ್ಧತಿ ಬಳಕೆಯಲ್ಲಿತ್ತು. ಕ್ರೈಸ್ತ ಮಠಾಧಿಪತಿಯ ಮುಂದೆ ಪ್ರಮಾಣ ತೆಗೆದುಕೊಂಡು ಜನರು ತಮ್ಮ ವ್ಯವಹಾರಗಳನ್ನು ಬಗೆಹರಿಸಿಕೊಂಡ ಬಗ್ಗೆ ವಿಪುಲವಾದ ಮಾಹಿತಿ ಸಿಗುತ್ತದೆ. ಇಸ್ಲಾಮೀ ದೇಶಗಳಲ್ಲಿಯೂ ಆಣೆ-ಪ್ರಮಾಣ ಸಾಕಷ್ಟು ಮಾನ್ಯತೆ ಪಡೆದದ್ದನ್ನು ನೋಡಬಹುದು. ಪವಿತ್ರ 'ಕುರಾನ್' ವನ್ನು ಮುಟ್ಟಿಸಿ ಅಥವಾ 'ಅಲ್ಲಾ'ನ ಹೆಸರಿನಲ್ಲಿ ಅಥವಾ 'ಪ್ರವಾದಿ'ಯ ಹೆಸರಿನಲ್ಲಿ ಆಣೆ-ಪ್ರಮಾಣ ಮಾಡಿಸಿಕೊಳ್ಳುವ ಪದ್ಧತಿ ಅವರಲ್ಲಿ ಈಗಲೂ ಇದೆ.

ಮುಖ್ಯವಾಗಿ ಮೂರು ಕಾರಣಗಳಿಗಾಗಿ ಜನರು ಆಣೆ 'ತಿನ್ನುತ್ತಿದ್ದರು, ಅಥವಾ 'ತಿನ್ನಿಸು'ತ್ತಿದ್ದರು. ಮೊದಲನೆಯದಾಗಿ, ಆಣೆ ತಿನ್ನುವದು ಅಥವಾ ತಿನ್ನಿಸುವದು ಒಬ್ಬ ವ್ಯಕ್ತಿಯ ಪ್ರಾಮಾಣಿಕತೆಯನ್ನು ಅಥವಾ ನಿರಪರಾಧಿತ್ವವನ್ನು ಸಾಬೀತುಪಡಿಸಲು ಎನ್ನಬಹುದು. ಆ ವ್ಯಕ್ತಿಗೆ ಪ್ರಿಯವಾದ ಅಥವಾ ಅವನ ಗೌರವಕ್ಕೆ ಪಾತ್ರವಾದ ವ್ಯಕ್ತಿ ಅಥವಾ ವಸ್ತುವಿನ ಹೆಸರು ಹೇಳಿ ಆಣೆ ಮಾಡಿಸಲಾಗುತ್ತದೆ. ದೇವರ ಮುಂದೆ ಅಥವಾ ಮಠಾಧೀಶರ ಮುಂದೆ ಮಾಡಿದ ಆಣೆಯನ್ನು ಸತ್ಯವೆಂದೂ, ನಿರಪರಾಧಿತ್ವದ ಸಾಕ್ಷಿ ಎಂದೂ ಸ್ವೀಕರಿಸಲಾಗುತ್ತದೆ. ಭಾರತದಲ್ಲಿ ಇದು ಬಹು ವ್ಯಾಪಕವಾಗಿ ಕಂಡುಬರುತ್ತಿದ್ದ ಪದ್ಧತಿ.

ಎರಡನೆಯದಾಗಿ, ಆಣೆ - ಪ್ರಮಾಣ ಮಾಡಿಸುವದು ಜಗಳ ಬಗೆಹರಿಸುವ ಅಥವಾ ನ್ಯಾಯದಾನಮಾಡುವ ಒಂದು ವಿಧಾನವೂ ಆಗಿತ್ತು. ಬಹಳ ಸೂಕ್ಷ್ಮವಾದ ಲೌಕಿಕ ವ್ಯವಹಾರಗಳಲ್ಲಿ ಇಬ್ಬರ ನಡುವ ತಗಾದೆ ಉಂಟಾದರೆ ಅವರಿಬ್ಬರ ನಂಬಿಕೆ ಮತ್ತು ಗೌರವಕ್ಕೆ ಪಾತ್ರನಾದ ಮೂರನೆಯವನೊಬ್ಬನು ವಾದಿ ಮತ್ತು ಪ್ರತಿವಾದಿ ಇಬ್ಬರಿಂದಲೂ ಮತ-ಗ್ರಂಥವನ್ನು ಕೈಯಲ್ಲಿ ಹಿಡಿಸಿ, ಅಥವಾ ದೈವದ ಹೆಸರು ಹೇಳಿಸಿ, ಪ್ರಮಾಣ ಮಾಡಿಸುತ್ತಿದ್ದನು. ಆಗ ಸತ್ಯವಂತನಿಗೆ ಮಾತ್ರ ಹಾಗೆ ಪ್ರಮಾಣಮಾಡುವ ಧೈರ್ಯವಿರುತ್ತಿತ್ತು. ಇಂತಹ ಪ್ರಮಾಣಗಳ ಆಧಾರದ ಮೇಲೆ ಇಬ್ಬರಿಗೂ ಅನುಕೂಲವಾಗುವ ರೀತಿಯಲ್ಲಿ ನ್ಯಾಯದಾನ ಮಾಡಲಾಗುತ್ತಿತ್ತು. ಶಾಸನಗಳಲ್ಲಿಯೂ, ಚರಿತ್ರೆಯ ಗ್ರಂಥಗಳಲ್ಲಿಯೂ ಇದಕ್ಕೆ ಸಾಕಷ್ಟು ಉದಾಹರಣೆಗಳು ದೊರೆಯುತ್ತವೆ. ದೇವಾಲಯದಲ್ಲಿ ಯಾರು ಸುಳ್ಳು ಆಣೆ ಮಾಡುವ ಧೈರ್ಯ ಮಾಡುತ್ತಿರುಲಿಲ್ಲ. ಪಾಶ್ಚಿಮಾತ್ಯ ದೇಶಗಳಲ್ಲಿಯೂ ಕ್ರೈಸ್ತ ಮಠಾಧಿಪತಿಯ ಮುಂದೆ ಮಾಡಿದ ಪ್ರಮಾಣವನ್ನು ನಿರಪರಾಧಿತ್ವದ ಸಂಕೇತವೆಂದು ತಿಳಿಯುವ ಪರಿಪಾಠವಿತ್ತು. ಮುಂದೆ ಲೌಕಿಕ ನ್ಯಾಯಾಲಯದಲ್ಲೂ ಆಣೆ - ಪ್ರಮಾಣದ ಬಳಕೆ ಪ್ರಾರಂಭವಾದಂತೆ ಕಾಣುತ್ತದೆ.

ಆಣೆ - ಪ್ರಮಾಣಗಳು ಬಹುತೇಕವಾಗಿ ದೇವಾಲಯದಲ್ಲಿ ನಡೆಯುತ್ತಿದ್ದರೂ, ದೇವಾಲಯದ ಹೊರಗೆ ನಡೆದರೂ ಅಭ್ಯಂತರವಿರಲಿಲ್ಲ. ಕೆಲವೊಮ್ಮೆ ಸಮುದಾಯದ ಹಿರಿಯರ ಮುಂದೆ ಬಯಲಿನಲ್ಲಿ ಇಂತಹ ಕೆಲಸ ನಡೆಯುತ್ತಿತ್ತು. ಆ ಸಂದರ್ಭಗಳಲ್ಲಿ ಸೂರ್ಯ - ಚಂದ್ರರೆ ಇದಕ್ಕೆ ಸಾಕ್ಷಿ ಎಂದು ನಂಬುತ್ತಿದ್ದರು. ಜನಪದರು ಸೂರ್ಯ - ಚಂದ್ರರ ಹೆಸರಿನಲ್ಲಿ ಮಾತ್ರವಲ್ಲ, ಕುಲದ ದೇವರ ಆಣೆ ಹಸುಗೂಸಿನ ಆಣೆ ಗೋವಿನ ಆಣೆ ಅರಳೀಮರದ ಆಣೆ, ತಂದೆ-ತಾಯಿಗಳ ಆಣೆ ಇಡುತ್ತಿದ್ದರು.' ಈ ವಸ್ತುಗಳೂ, ವ್ಯಕ್ತಿಗಳೂ ದೇವರಿಗೆ ಸಮ ಎಂಬುದು ಜನರ ಭಾವನೆಯಾಗಿತ್ತು. ಒಂದು ವೇಳೆ ಸುಳ್ಳು ಆಣೆ ಮಾಡಿದರೆ ಆಣೆಯಿಟ್ಟವನಿಗೆ ದೇವರು ಮುನಿಯುತ್ತಾನೆ. ಕೂಸಿಗೆ ಕೇಡಾಗುತ್ತದೆ, ಗೋವಿನ ಶಾಪ ತಟ್ಟುತ್ತದೆ, ತಂದೆ-ತಾಯಿಗಳ ಆಯುಷ್ಯ ಕಡಿಮೆಯಾಗುತ್ತದೆ ಇತ್ಯಾದಿ ನಂಬಿಕೆಗಳಿದ್ದವು . ಬರಬರುತ್ತ ದೇವರು, ಧರ್ಮ ಇತ್ಯಾದಿಗಳಲ್ಲಿ ಜನರಿಗಿದ್ದ ಭಯ, ಭೀತಿ ಕಡಿಮೆಯಾದಂತೆ ಆಣೆ ಪ್ರಮಾಣದ ಪಾವಿತ್ರ್ಯ ಕಡಿಮೆಯಾಯಿತು. ಅದು ನ್ಯಾಯಾನ್ಯಾಯವನ್ನು ನಿರ್ಣಯಿಸಲು ಅಶಕ್ತವಾಯಿತು. ಬ್ರಿಟಿಷರ ಕಾಲದಲ್ಲಿ

ಕೋರ್ಟುಗಳಲ್ಲಿ ವಾದಿ-ಪ್ರತಿವಾದಿಗಳಿಬ್ಬರೂ 'ಗೀತೆ ' 'ಬೈಬಲ್ ' ಅಥವಾ 'ಕುರಾನ್'ಗಳನ್ನು ಹಿಡಿದು ಪ್ರಮಾಣ ಮಾಡಬೇಕಾಗಿ ಬಂದಾಗ ಅದೊಂದು ಅನಿವಾರ್ಯ ವಿಧಿಯಾಗಿತ್ತೇ ಹೊರತು ಅದರಲ್ಲಿದ್ದ ಪಾವಿತ್ರ್ಯ ಹೊರಟುಹೋಯಿತು. 'ದೇವರ ನ್ಯಾಯ' ದ ಸಾಧನವಾಗುವ ಬದಲು ಅದು ಲೌಕಿಕ ನ್ಯಾಯದ ಒಂದು ಸತ್ವಹೀನ ಆಚರಣೆಯಾಗಿ ಮಾರ್ಪಟ್ಟಿತು.

ಆಣೆ - ಪ್ರಮಾಣ ಮಾಡುವ ಅಥವಾ ಮಾಡಿಸುವ ಮೂರನೆಯ ಉದ್ದೇಶ ಅಥವಾ ಸಂದರ್ಭವೆಂದರೆ ತನ್ನ ಕೋರಿಕೆಯನ್ನು ಇನ್ನೊಬ್ಬನು ತಪ್ಪದೇ ನಡೆಸಿಕೊಡಬೇಕೆಂದು ನಿರ್ಬಂಧಿಸುವದು. ನಮ್ಮ ಶಾಸನ ಮತ್ತು ಪ್ರಾಚೀನ ಕಾವ್ಯಗಳಲ್ಲಿ ಈ ರೀತಿಯ ಆಣೆ - ಪ್ರಮಾಣಗಳಿಗೆ ಬೇಕಾದಷ್ಟು ಉದಾಹರಣೆಗಳು ಸಿಗುತ್ತವೆ. ' ವಡ್ಡಾರಾಧನೆ' ಯಲ್ಲಿ ಬರುವ ಈ ಪ್ರಸ್ತಾಪ ನಿರ್ಬಂಧ ಸೂಚಕವಾದುದು - 'ಉಳ್ಳುದುಳ್ಳಂತೆ ಪೇಳೆಯೆಪ್ಪೊಡೆ ನಿನಗೆನ್ನಾಣೆ ಎಂದು ತನ್ನಮೇಗೆ ಸೂರುಳಿಸಿ ಬೆಸಗೊಂಡೊಡೆ; ಗದಾಯುದ್ಧ'ದಲ್ಲಿ ಆಣೆಯ ಒಂದು ಉದಾಹರಣೆ ಈ ರೀತಿ ಇದೆ - ಪೋದೊಡೆ ಧೂರ್ಜಟಿಯಾಣೆ, ಮೀರಿ ಪೋದೊಡೆ ಕಲಿಭೀಮನಾಣೆ ..... ಕುಮಾರವ್ಯಾಸನ ಭಾರತದಲ್ಲಿ-ಇಂದ್ರಜಿತ್ತಲು ಪಾರ್ಥಪೋಗದಿರಿತ್ತಲಶ್ವತ್ಥಾಮನಾಣೆ' ಎಂದು ಪಾರ್ಥನಿಗೆ ಆಣೆ ಹಾಕ ಲಾಗಿದೆ. ತೊರವೆ ರಾಮಾಯಣದಲ್ಲಿ ಪಶುಪತಿಯ ಮೇಲಾಣೆ ಮೀಸಿದಡೆ ಶಿಶುನಾಣೆ' ಎಂಬ ಆಣೆಯ ಪ್ರಸ್ತಾಪವಿದೆ.

ಬಸವಣ್ಣನವರು ತಮ್ಮ ವಚನಗಳಲ್ಲಿ ಕೂಡಲಸಂಗಮದೇವನ ಹೆಸರಿನಲ್ಲಿ ನೂರಾರು ಸಂದರ್ಭಗಳಲ್ಲಿ ಆಣೆ ಇಡುವದನ್ನು ನೋಡಬಹುದು. ಕೆಲವು ಸಂಗಮನಾಥನ ನಿಲುವನ್ನು ನಿರ್ಬಂಧಿಸುವ ಆಣೆಗಳು; ಕೆಲವು ತನ್ನ ಅಂತರಂಗಕ್ಕೆ ವಿಧಿಸಿಕೊಂಡ' ಸ್ವನಿರ್ಬಂಧದ ಆಣೆಗಳು. ಅವರು ಶರಣರಲ್ಲದವರನ್ನು ಒಲ್ಲೆನೆಂದು ಇಡುವ ಆಣೆಗಳು ಅನೇಕ. 'ನಡೆ ನುಡಿ ಹುಸಿಯುಂಟಾದಡೆ ಕೂಡಲಸಂಗಮ ತೋರಿದ ಚನ್ನಬಸವಣ್ಣನಾಣೆ' ಇಟ್ಟದ್ದೂ ಉಂಟು. 'ಮಾಡುವ ನೇಮಕ್ಕೆ ಫಲವಿಲ್ಲದಿದ್ದಡೆ ಆಣೆ - ನಿಮ್ಮಾಣೆ' ಎಂದೂ, 'ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದಕ್ಕೆ ಮಾಡೆನು. ನಿಮ್ಮ ಸೊಮ್ಮಿಂಗೆ ಸಲಿಸುವೆನು ನಿಮ್ಮಾಣೆ ಕೂಡಲಸಂಗಮದೇವಾ' ಎಂದೂ ಮತ್ತೊಂದು ವಚನದಲ್ಲಿ ಸಂಗಮನಾಥನು ಜಂಗಮ ರೂಪದಲ್ಲಿ ಬಂದು ತನ್ನೆದುರು ಧನವನ್ನು ಸೂರೆಮಾಡುತ್ತಿದ್ದರೆ 'ತಾನು ಬೇಕು - ಬೇಡೆಂದು ಮನದಲ್ಲಿ

ಮುರುಗಿದೆನಾದೊಡೆ ನಿಮ್ಮಾಣೆ - ನಿಮ್ಮ ಪ್ರಮಥರಾಣೆ' ಎನ್ನುತ್ತಾರೆ. ಇಂತಹ ಆಣೆಗಳಿಗೆ ಲೆಕ್ಕವಿಲ್ಲ. ಇವೆಲ್ಲವೂ ಬಸವಣ್ಣನವರು ತಮ್ಮ ಅಂತರಂಗಕ್ಕೆ ತಾವೇ ಹಾಕಿಕೊಂಡ ಆಣೆಗಳು. ಈ ಆಣೆಗಳು ಅವರು ಭಕ್ತಸ್ಥಲದಿಂದ ಐಕ್ಯಸ್ಥಲದ ಊರ್ಧ್ವಗತಿಗೆ ಏರುವಾಗ ವಿಧಿಸಿಕೊಂಡ ನಿರ್ಬಂಧಗಳಂತೆ ಕಾಣುತ್ತವೆ. ಇತರ ವಚನಕಾರರ ವಚನಗಳಲ್ಲಿಯೂ ಆಣೆ-ಪ್ರಮಾಣದ ಉದಾಹರಣೆಗಳು ವಿಪುಲವಾಗಿ ಕಾಣಿಸಿಕೊಂಡಿವೆ.

ಈ ಮೇಲಿನ ಎಲ್ಲ ಉದಾಹರಣೆಗಳೂ ಒಬ್ಬನಿಗೆ ಪ್ರಿಯವಾದ ಅಥವಾ ಅವನ ಗೌರವಕ್ಕೆ ಪಾತ್ರವಾದ ದೈವ ಅಥವಾ ವ್ಯಕ್ತಿಯ ಹೆಸರು ಹೇಳಿ 'ತಿಂದ' ಆಣೆಗಳು. ಇಲ್ಲಿ ನಿನ್ನಾಣೆ, ನಿಮ್ಮಾಣೆ ನಿಮ್ಮ ಪ್ರಮಥರಾಣೆ, ಧೂರ್ಜಟಿಯಾಣೆ, ಕಲಿಭೀಮನಾಣೆ, ಅಶ್ವತ್ಥಾಮನಾಣೆ, ಪಶುಪತಿಯಾಣೆ ಹೀಗೆ ವಿವಿಧ ವ್ಯಕ್ತಿಗಳ ಮೇಲೆ ಆಣೆ ಇಡಲಾಗಿದೆ. ಅಲ್ಲದೆ, ಶಿಶುವಿನ ಹೆಸರಿನಲ್ಲೂ ಆಣೆ ಮಾಡಲಾಗಿದೆ. ಇವೆಲ್ಲ ಗಂಭೀರ ಸ್ವರೂಪದ, ನಿರ್ಬಂಧಿಸುವ ಆಣೆಗಳಾದರೆ ಮುದ್ದಣ್ಣನ 'ರಾಮಾಶ್ವಮೇಧ'ದ ದಂಪತಿಗಳಿಡುವ ಆಣೆ ತುಸು ಲಘುಪ್ರವೃತ್ತಿಯದು - ಕೊರಳಾಣೆ, ಉಂಗುರದಾಣೆ, ಪೇಳ್ದಿಲ್ಲದೆ ಬಿಡೆಂ'.

ಆಣೆ - ಪ್ರಮಾಣವನ್ನು ಗಂಭೀರವಾಗಿಯೇ ತೆಗೆದುಕೊಳ್ಳಬೇಕೆಂಬುದು ನಮ್ಮವರ ಆಶಯ. ಸುಮ್ಮ - ಸುಮ್ಮನೆ ಆಣೆ ಹಾಕುವವರು ಆಣೆಯನ್ನು ಜನ ನಂಬುತ್ತಿರಲಿಲ್ಲ, ಗಂಭೀರವಾಗಿ ತೆಗೆದುಕೊಳ್ಳುತ್ತಿರಲಿಲ್ಲ. ಮಾತು-ಮಾತಿಗೆ ಆಣೆ ಇಡುವವರನ್ನು ಮೂರ್ಖರ ಸಾಲಿಗೆ ಸೇರಿಸುತ್ತಿದ್ದರು. ಇನ್ನೂ ಕೆಲವು ಆಣೆಗಳನ್ನು ಪ್ರಮುಖರು, ಪಂಚಾಯತದಾರರು, ಹಿರಿಯರು ಒಪ್ಪುತ್ತಿರಲಿಲ್ಲ. ಕೆಲವು ರೀತಿಯ ಮಾನಸಿಕ ಪರಿಸ್ಥಿತಿಯಲ್ಲಿರುವ ಜನರ ಆಣೆ ಆಣೆಯಲ್ಲ. ಉದಾಹರಣೆಗೆ - ಸಾಲಕೊಳ್ಳುವದನ್ನು ಚಟ ಮಾಡಿಕೊಂಡವ ಆಣೆ, ಸಾರಾಯಿ ಕುಡಿದವನಾಣೆ, ಕಾಮಾತುರನಾಣೆ ಇಂತಹವುಗಳನ್ನು ಅವರು ಸ್ವೀಕರಿಸುವದಿಲ್ಲ. ಅವರು ಆಣೆ ಏನು ಬಿಡಿ; ಎಂದು ನಕ್ಕು ನಿರ್ಲಕ್ಷಿಸುತ್ತಾರೆ.

ಅಸಂಬದ್ಧ ರೀತಿಯ ಆಣೆ ಇಡುವವರದು ಇನ್ನೊಂದು ಜಾತಿ. ಇಲ್ಲದ ದೇವರ ಆಣೆ ಇಡುವವರೂ ಇದ್ದಾರೆ. ಅಂತಹ ಒಂದು ಉದಾಹರಣೆ ವೃತ್ತವಿಲಾಸನ 'ಧರ್ಮ ಪರೀಕ್ಷೆ'ಯಲ್ಲಿದೆ- ಬೆಲ್ಲಮಂ ಮೇಲಿರ್ದೆನಾದೊಡೆಂ ದಧಿದೇವರಾಣೆ ಎಂದವನಿರದವನಾಣೆಯುಮನಿಟ್ಟು ತೊರೆದಂ, ಗುಡಮುಂ ಕಡುಮೂರ್ಖನೆಂಬವಂ' ಬೆಲ್ಲ ತಿನ್ನುವುದನ್ನು ಬಿಡುತ್ತೇನೆಂದು ಮೊಸರಿನ ಆಣೆಯನ್ನು ಇಟ್ಟನಂತೆ ಒಬ್ಬ ಮೂರ್ಖ; ಇದು ಯಾವ ದೇವರಾಣೆಯೋ, ಯಾರಿಗೆ

ಪ್ರಿಯವೋ; ನಮ್ಮ ಹಳ್ಳಿಯ ಮುಕ್ಕರಲ್ಲಿ ಹಾಗೂ ಶಹರದ ಮಂಕರಲ್ಲಿ ಇಂತಹವರಿಗೇನು ಬರಗಾಲವಿಲ್ಲ.

ಕಾವ್ಯಗಳಲ್ಲಿ ಏನು ಹೇಳಿದ್ದರೂ ನಿತ್ಯದ ವ್ಯವಹಾರದಲ್ಲಿ ಆಣೆ-ಪ್ರಮಾಣವನ್ನು ಅಷ್ಟು ಲಘುವಾಗಿ ಕಾಣುವದು ಸಾಧ್ಯವಿರದ ಮಾತಾಗಿತ್ತು. ದೇವರೆದುರಿಗೆ ಮಾಡಿದ ಆಣೆ - ಪ್ರಮಾಣ ಅಥವಾ ಊರ 'ದೈವ' ದವರೆದುರಿಗೆ ಮಾಡಿದ ಆಣೆ - ಪ್ರಮಾಣ ನಗೆಚಾಟಿಕೆಯ ಮಾತಲ್ಲ. ಜನರಲ್ಲಿ ದೈವ ಮತ್ತು ಧರ್ಮದ ವಿಚಾರಗಳ ಬಗೆಗೆ ಭಯ - ಭೀತಿ ಇದ್ದುದರಿಂದ ಸತ್ಯವನ್ನು ಹೊರ ತೆಗೆಯಲು, ನಿರಪರಾಧಿತ್ವವನ್ನು ಸಾಬೀತುಪಡಿಸಲು, ನಿರ್ಬಂಧಗಳನ್ನು ಹೇರಲು ಆಣೆ - ಪ್ರಮಾಣ ಒಂದು ಉತ್ತಮ ಮಾರ್ಗವಾಗಿತ್ತು. ಕೊಟ್ಟ ಮಾತಿಗೆ ತಪ್ಪಬಾರದೆಂಬ, ಅಸತ್ಯವನ್ನು ನುಡಿಯಬಾರದೆಂಬ, ಅನ್ಯಾಯವನ್ನು ಮಾಡಬಾರದೆಂಬ ನೈತಿಕ ಭಾವನೆಗಳು ಜೀವಂತವಿರುವ ಸಮಾಜಗಳಲ್ಲಿ ಆಣೆ-ಪ್ರಮಾಣಗಳಿಗೆ ಸ್ಥಾನ ಇದ್ದೇ ಇರುತ್ತದೆ. ಆದರೆ ಮತ - ವಿಚಾರಗಳ ಬಗ್ಗೆ ಅವಜ್ಞೆ ಉಂಟಾದಂತೆ, ಲೋಕರೂಢಿಗಳ ಬದಲಿಗೆ ಕಾನೂನುಗಳು ನ್ಯಾಯಾಲಯದ ಪೀಠ ಏರಿದಂತೆ, ಸಾಕ್ಷಿಪುರಾವೆಗಳ ಅವಶ್ಯಕತೆ ಹೆಚ್ಚುತ್ತ ಹೋದಂತೆ, ಜನಪದರ ಆಣೆ- ಪ್ರಮಾಣಗಳಿಗೆ ಕವಡಿ ಕಿಮ್ಮತ್ತಿಲ್ಲದ ಪರಿಸ್ಥಿತಿ ಉಂಟಾದರೆ ಅಶ್ಚರ್ಯವಿಲ್ಲ.

ಒರೆಗಲ್ಲು

★ ಎಸ್. ಶಿವಣ್ಣ

೧. ಇಮ್ಮಡಿ ಗುರುಸಿದ್ಧಸ್ವಾಮಿಗಳ ಶಿವರಹಸ್ಯ ಪುರಾಣದ ನಾಂದ್ಯ

ಖಂಡಶಶಿಮಂಡನ ಮಹೇಶಮ್ಯ-
ಕಂಡುನಂದನ ಬಾಧನೋದ್ಯತ
ದಂಡಪಾಣಿ ಮದಾದ್ರಿ ಭೇದನ ಹೀರ ಸುಖಸಾರ
ಕುಂಡಲೀಶ್ವರ ಕುಂಡಲೋಜ್ವಲ
ಗಂಡಮಂಡಿಲ ಪಂಡಿತಸ್ತುತ
ಚಂಡಸಾಹಸ ಚಂಡಿಕಾಧವ ಸಲಹು ಶಿವಲಿಂಗ ॥೧॥

ಚಂದುಟಿಯ ಕೆಂಬೆಳಗಿನಿಂ ಮೊಗ
ಚಂದಿರನ ಮಿಱುಗಿಂದೆಯುಂ ಪ್ರಿಯ
ನಂದದ ಕಿರೀಟಸ್ಥ ಗಂಗೋತ್ಪಳ ಕಮಳ ಕುಳವ-
ನೊಂದುಳಿಯದಂತಲರಿಸುತೆ ತರು-
ಣೇಂದುಮೌಲಿಯ ವಾಮಭಾಗಮ
ನೊಂದಿ ರಾಜಿಪ ಗೌರಿ ಪೊರೆಗೆಮ್ಮನು ಗಿರಿಯಕುವರಿ ॥೨॥

ಪ್ರಣವದಿಂದವತರಿಸಿ ಶಂಬರ
ಗಣವನೊರಸುತೆ ಭಕ್ತತತಿಯನು
ಬಣತೆಯಿಂ ಸಲಹಿ ಜಗತ್ರಯದೊಳು ಪೆಸರ್ವಡೆದ
ಮಣಿವ ವಿಬುಧ ಜನಕ್ಕೆ ವಿದ್ಯೆಯ-
ನಣಯರದೆ ಕೊಡುವಚಲ ಪರುಷದ
ಕಣಯೆನಿಪ ಸುಂಡಿಲಮಗನು ನಿರ್ವಿಘ್ನತೆಯನೀಗೆ ॥೩॥

ದಕ್ಷಯಾಗ ನಿಮಿತ್ತಲೀಶ್ವರ-
ನಕ್ಷಿಪಾವಕನಿಂದವತರಿಸಿ
ಪಕ್ಷಪಾತಕದೈವತರನರ್ಧಿಸಿ ಪೊಗಳೆ ಕಾಯ್ದು
ಪಕ್ಷಪತಿರಥನಮಳ ಕಾಳಿಯ
ವಕ್ಷದುರುತರ ಚಾರು ಚಂದನ
ಲಕ್ಷಣ್ಣರನು ವೀರಭದ್ರನು ಕುಡುಗವಿಘ್ನತೆಯಂ ॥೪॥

ನಂದಿ ಭಂಗಿಮುಖ ಪ್ರಮಥ ವರ-
ರಿಂದುಧರನಾತ್ಮಜನ ಕೃತಿಗೊಲ-
ವಿಂದೆ ನಿರ್ವಿಘ್ನತೆಯನೀಗೆ ಮನೋನುರಾಗದಲಿ
ಸಂದ ಸುರನರ ವಿಬುಧ ತತಿಯುಂ
ಬಂದು ಬಹುರತಿವೆರಸುತೀ ಕೃತಿ-
ಗೊಂದಿಸುಗಲಂಕಾರ ರಸ ಭಾವಾದಿ ಲಕ್ಷಣಮಂ ॥೫॥

ಗುರುವೆ ಸದ್ಗತಿಯಿರುವೆ ಮುಕ್ತಿಯ
ಕರುವೆ ಪರಶಿವನಱಿವೆ ಶಾಂತಿಯ
ಸರುವೆ ಬುಧಸುರತರುವೆ ದುರಿತಗಿರಿಸ್ವರುವೆ ಪರವೆ
ಪರವೆ ಸುಖದಾಗರವೆ ಮತಿಸಿಸಾ-
ಗರವೆ ಯಾನಿಮಗೆರವೆ ನಿಜದಿಂ
ಕೊರವೆ ಜನ್ಮವನೊರವೆ ನಿಮ್ಮಿಂದಧಿಕರಿಲ್ಲೆಂದು ॥೬॥

ಬಾಂಬೊಳೆಯ ತಾಳ್ದಂಗೆ ತಿಸುಳಿಗೆ
ಮೀಂಬಳಗೆಯನನುರುಪಿ ಕಾಯ್ದಂ-
ಗಂಬುದುದಿಗಿತ್ತುಣಿಸನಾ ಮುಪ್ಪೊಳಲನೊಡಲಿಚನ
ಬೆಂಬಿಡದ ಹೆಟ್ಟಿಗೆಗೆ ಬಲಗೈ
ನಂಬುಗೆಯನಿತ್ತಿರದೆ/ ಸಲಹಿದ
ಸಂಬು ಪರಶಿವಲಿಂಗ ಗಿರಿಜಾಲಿಂನಾಂಗ ಜಯ ॥೭॥

ಪಿರಿಯ ದಕ್ಷನನಿರವನಱಿಯುತೆ
ಕುಱಿದಲೆಯನಿತ್ತವನ ತಂದೆಯ
ಮೆಱೆವ ಮಂಡೆಯನುತ್ತರಿಸಿ ಸರಿಮೊಗನೆನಿಸಿಯವನ
ಪೆಱಿನೊಸಲ ಪೆಂಡತಿಯ ಮೂಗನು
ತಱೆದು ನಗೆಗೆಡೆಯಾಗಿಸಿದೆಯ್ಯೆ
ಕಱೆಗೊರಲ ಶಿವಲಿಂಗ ನಿನಗಿದು ನೀತಿಯೇ ಪೇಳ ॥ ೮ ॥

ಅಂಜದಹಿಪತಿಯುಗಳ ಕಪ್ಪಿನ
ನಂಜನುಂಡು ಜಗಂಗಳನು ಪೊರೆ-
ದಂಜುಳಿಗಳನು ಮುಗಿದು ಸೇವಿಪ ದೇವತಾವಳಿಯುಂ
ರಂಜನೆಗೆತಂದಸಮದೈತ್ಯರ
ಪುಂಜದುರುಗರ್ವಂಗಳನು ಮಿಗೆ
ಭಂಜಿಸಿದ ಶಿವಲಿಂಗ ಜಯ ನಿರ್ಜಪುರವಿಜಯ ॥ ೯ ॥

ಅಱಿಯ ಬಾರದ ತೆರದೆ ದೇವರ
ಮಱಿಯೊಳಗೆ ತನ್ನಾಮರೂಪುಗ-
ಳಱಿಕೆಗಾಣಿಸುತವರವರಿಗವರಂತೆ ನೆಲಸಿರ್ದು
ಕಱಿಗೊರಳಸಿದ್ಧಿಗಳನೀವುತೆ
ಪಿಱಿಯನಾದಪೆ ಮತ್ತೆಯವರನು
ಪಿಱಿತಿನಿಯರೊಳು ಗಣಿಸುವೆಯಿದೇನಯ್ಯ ಶಿವಲಿಂಗ
ಗಿರಿಜೆ ಶಪಿಸುತ್ತೆಡದ ಭಾಗವ ||೧೦||

ನಿರದೆ ಪಡೆಯಲು ಹರಿಯದನೆ ತಪ-
ದೆರಕದಿಂ ಬೇಡಿದೊಡೆ ಕೊಡಲದಱಿಂದಲೀರ್ವರಿಗೆ
ಬರದೆ ಕದನವು ಬರುತಿರಲವರು
ಸರಸದಿಂದೊಂದಾದರೇತಕೆ
ಪರಮ ಶಿವಲಿಂಗೇಶ ಪೇಳೆನಗುಭಯತರ ಚಿಡಗಂ ||೧೧||

ಹರಿ ವಿಧಿ ಸುರೇಂದ್ರಾದಿ ಪಶುಗಳ
ನಿರದೆ ಕಾವುತೆ ಮೂಜಂಗಂಗಳೊ-
ಳುರುತರದ ಪಶುಪತಿಯೆನಿಪ್ಪಾಖ್ಯಾನದೊಳಗುಂದಿ
ಧರೆಯಱಿಯೆ ಕಱುಗಾಯನೆಂದೊಡೆ
ದರುಳನೆನ್ನನು ಹುಡುಗನೆಂದವ-
ನೊರೆದವನೆನುತ್ತಣಕವಂ ಮಾಡದಿರ ಶಿವಲಿಂಗ ||೧೨||

ಕರೆದು ಮನ್ನಣೆಗೆಯ್ದು ಬಾವಿಪ
ಸುರರನೇಸರಲಿಂದೆಸೆದು ಸಿಂ-
ಗರದೆ ಕೊಲ್ಲದ ಕೊಲೆಯ ನೀವನುಘಾತಕನೆನಿಪ್ಪ
ಸ್ಮರನ ನೂತನ ಸೇನೆಯನು ನೀಂ
ಸರಕುಮಾಡದೆ ನೆನಹಿಗಿಲ್ಲದೆ
ಪರಮಯತಿಯೆಂದೆನಿಪೆಯ್ಯೆ ಶಿವಲಿಂಗ ಧವಳಾಂಗ ||೧೩||

ಸಕಲ ದೈವತ ಸಾರ್ವಭೌಮನ
ವಿಕಟ ದೈತ್ಯ ಕು [ಲಾ] ಬ್ಜ ಸೋಮನು
ಸುಕರ ಚರಿತನು ಪಾರಿ ಮದಗಿರಿ ಶಂಭನವಿಳಂಬಂ
ಚಿಕುರಭಯತಾರಾಳಿಬಾಕನು
ಮುಕುರಸನ್ನಿಭ ಸತ್ಕಪೋಳನು
ಚಕಚಕಿತ ಶಿವಲಿಂಗನೀಗೆಮಗಮಳ ಸದ್ಗತಿಯಂ ||೧೪||

ಮದನ ಮೂರ್ತಿಯನುರುಪಿ ಬೂದಿಯ
ಸದಮಲಾಂಗದೊಳಾಂತು ಬಳಿಕಂ
ಮುದದೆ ಯತಿಯೆನಿಸಿರ್ದು ಬೆಟ್ಟಣುಗಿಯ ತಪಕ್ಕೊಲಿದು
ಮದುವೆಯಾಗುತೆ ಮಗುವ ಪುಟ್ಟಿಸಿ
ಚದುರತನದಿಂ ಮೂಜಗದೊಳಂ
ಪದುಳದಿಜತಿಯೆನಿಸಿದಪೆಯಿದನುಸಿರ ಶಿವಲಿಂಗ ।೧೫।।

ಮೈದುನನ ಮಗನಳಿಯನೆಂಬುದು
ಮೇದಿನಿಯೊಳಿದು ನೀತಿಯದನುಳಿ-
ದಾದರಿಸದವನನು ನೊಸಲ ಕಿಡಿಗಿತ್ತು ಬಳಿಕವನ
ಬೂದಿಯನು ಮೈಯ್ಯಲ್ಲಿ ತಳೆವುದು
ಹಾದಿಯೇ ಎನಗುಸಿರಿದನು ನೀ
ವೇದದೊಳು ಸತ್ಯಾತ್ಮನೆನಿಸುವೆಯಯ್ಯ ಶಿವಲಿಂಗ ।೧೬।।

ತಮ್ಮ ಕಜ್ಜಕ್ಕಮರರೆಲ್ಲರು
ಕಮ್ಮಗೋಲನನೊಲಿಸಿ ನಿನ್ನೆಡೆ-
ಗುಮ್ಮಳಿಸದಟ್ಟಿದೊಡವನನುರುಹಿದುದನಲನಯ[ನ]ಂ
ಸುಮ್ಮನಿರ್ದರು ಸುರರದನು ಕಂ-
ಡಮ್ಮದಮ್ಮಮ್ಮಿವರ ನಂಬಲು
ಕೆಮ್ಮನಪ್ಪುದು ಕಾರ್ಯವಿವರಿಂ ಕೇಡು ಶಿವಲಿಂಗ ।೧೭।।

ಕಟಕಿವಾತುಗಳಿಂದೆ ಭಕ್ತರ
ಗಟಮಟಸಿ ಕಾಡುವದುಚಿತವೇ
ತಟತಟನೆಯಲ್ಲಲ್ಲಿ ತಿರುಗುತೆ ಕಂಡಕಂಡಂತೆ
ಮಟಮಟನೆ ನುಡಿವುತ್ತೆ ಕಡೆಗದು
ಘಟಿಸದಿರಲೊಳ್ಪೊಕ್ಕು ಲಂಚದ
ನಟನೆಯಗ್ಗಳ ಕೈಯ್ಯ ಸೇವೆಯಿದೇಕೆ ಶಿವಲಿಂಗ ।೧೮।।

ಶರಣಜನ ಮಂದಾರ ಮಾನಿಪ
ತರುಣ ರವಿ ಶತಕೋಟಿ ತೇಜ-
ಸ್ಫುರಣಮರಸಂಹರಣ ನಿರ್ಮಲಾಕರಣ ಜಿತಮರಣ
ತರುಣಿ ಶಶಿಧರ ಮೌಳಿ ನಾನಾ-
ಭರಣಭೂಷಿತ ಭವ್ಯಸನ್ನುತ
ತರಣಿಸುತ ಮದಭಂಗ ಶರಣಾಗಭವ ಶಿವಲಿಂಗ ।೧೯।।

ಪೆತ್ತವರು ಮುನ್ನಿಲ್ಲ ಉದಯದ
ಗೊತ್ತನಾವನು ಬಲ್ಲನಿಲ್ಲವು
ಚಿತ್ತಜಾರಿ ಸುದತಿಯರನು ಕಣ್ಣೆತ್ತಿ ನೋಡುವನ
ಮತ್ತತನದೀ ಗಿರಿಕುಲೇಶ್ವರ-
ನುತ್ತಮಾತ್ಮಜೆಯನು ನಿನಗೆ ರತಿ-
ವೆತ್ತು ಕೊಟ್ಟುದನೆನಗುಸಿರ ಶಿವಲಿಂಗ ಸುರತುಂಗ ॥೨೦॥

ಸಗುಣ ನಿರ್ಗುಣಮೂರ್ತಿ ನಿನ್ನಯ
ಬಗೆಯನಱಿವವರಾರಮರರೊಳು-
ಮಿಗೆ ಹರಿವಿರಿಂಚಿಗಳಿರದೆ ಕಾಲ್ಟಲೆಗಳನು ಕಾಣ್ಬ
ಸೊಗಸಿನಿಂದಂ ಪಂದಿ ಪರ್ದಾ-
ಗೊಗುಮಿಗಿಲು ತಿರುಗಿದಂ ಬಿಳದೊಳು
ನಗಪತಿಯಳಿಯನಾದೆ ನೀಂ ಶಿವಲಿಂಗ ಸುಕೃತಿಯನು ॥೨೧॥

ಭುವನಪತಿ ನೀನೆಂಬ ಗರ್ವದೊ-
ಳವಿರತವು ಮಿಗೆ ಮಾಡಬಾರದು
ಕವಲಬಟ್ಟೆಯ ಕೃತ್ಯಕೃತ್ಯಂಗಳನೆಸಗಲದರಿಂ
ಭುವಿಯೊಳಗೆ ನೀನಪಜಯವು ತಾ-
ನವಿರತವು ಬರುತಿರ್ಪನಂತಿ-
ದುರ್ವರಲಾ ನಿಜಕಾ ಭಕ್ತರಿಂತಹರ್ದೇಕೆ ಶಿವಲಿಂಗ ॥೨೨॥

ತಪವನಾಚರಿಸುತ್ತೆ ನಿನ್ನನು
ವಿಪುಳಲೋಚನೆ ಗಿರಿಜೆ ಮೆಚ್ಚಿಸಿ
ಸುಪಥದಿಂ ಕಲ್ಯಾಣ ಭೂಷಣ ನಿಚಯವನು ತಳೆದು
ವಿಪರಿಮಿತನಹ ನಿನ್ನನೇಂ ತಾಂ
ಕಪಟವಿಲ್ಲದೆ ಮದುವೆಯಾದುದು
ತ್ರಿಪುರಹರ ದಿಟವೋಯಿದೆಲ್ಲವು ಸಟೆಯೊ ಶಿವಲಿಂಗ ॥೨೩॥

ಭಕ್ತವತ್ಸಲವೇನಖಿಳದೊಳು
ರಕ್ತಿಗೆಯ್ಯಲು ಪಾರ್ವತಿಯನಂ-
ದುಕ್ತಿಪೂರ್ವಕನಾದ ಮಾತಿಗೆ ಮದುವೆಯಾಗುತ್ತೆ
ಶಕ್ತಿಸಂಪುಟನೆನಿಸಿ ಜಗದೊಳು
ಯುಕ್ತಿ ದಂಪತಿ ಭಾವವನು ನೀಂ
ವ್ಯಕ್ತವನು ಮಾಡಿದೆ ಗಡಾ ಶಿವಲಿಂಗ ರುಚಿರಾಂಗ ॥೨೪॥

ಜಗದ ಸಕಲಾತ್ಮರು ವಿಚಾರಿಸೆ
ನಿಗಮನುತ ನಿನ್ನಂಶ ಸಂತತಿ
ನೆಗಳ್ದು ಹಾರುವ ಬಿರಿಸುಗಿಡಿಗಳವೆಂತು ಕಿಚ್ಚಹವು?
ತಗಿಲದಿಂತಾಗಿರಲುಳಿದವನು
ಸೊಗಸು ಮಿಗಿಲೊಳಕೊಂಡು ನೆಲಸಿಹೆ
ನಗಜೆಯಧಿಪತಿ ಜಲಧಿಪನಿಗಳನೆಂತು ಶಿವಲಿಂಗ ॥೨೫॥

ಪ್ರಮಥಪತಿ ಪರಮಾತ್ಮ ಸುರಗಣ
ನಮಿತ ಪದಪಂಕಜ ಮಹೇಶ್ವರ
ಹಿಮಗಿರೀಂದ್ರ ತನೂಭವಾಧರ ಬಿಂಬಫಳಕೀ[ರ]
ಕಮನ ನಂದೀಶನ ಪರಾಕಿಗೆ
ವಿಮಲ ಮಂದಸ್ಮಿತ ವದನದಿಂ-
ದಮರರನು ನಡೆ ನೋಳ್ಪ ಶಿವಲಿಂಗೇಶ ಪೊರೆಯೆಮ್ಮಂ ॥೨೬॥

ರೂಪಲಾವಣ್ಯಾತಿಶಯದಿಂ
ಲೋಪಿಸುತೆ ಮನ್ಮಥನ ಚೆಲುವನು
ಮಾಪಮುಖಸುರರಂತರಂಗದೊಳೋತು ಕಾಣಿಸುವ
ಜಾಪುರವು ಮೊದಲಾದ ಪರಿಮಳ
ಲೇಪಿತಾಂಗದಿನೆಸೆವ ಚಂದ್ರಕ-
ಲಾಪ ಜಯ ಶಿವಲಿಂಗ ಶೃಂಗಾರಾಂಗ ಜಿತಭಂಗಾ ॥೨೭॥

ದಂಪತಿಗಳೆಜೆಯಂಗೆ ಮೂಜಗ
ವಂ ಪಡೆದು ಪರಿಪಾಲಿಪಂಗಾ
ಸೊಂಪಿನಗ್ಗಳ ಚೆಲುವರಾಯಂಗಾ ತ್ರಿಮೂರ್ತಿಗಳಂ
ಪೆಂಪಿನಿಂ ಪೆತ್ತವರವರೊಳನು-
ಕಂಪೆಯಿಂ ವ್ಯೂಹತ್ರಯವನಾ-
ದಿಂಪಿನಿಂದಿತ್ತಂಗೆ ಶಿವಲಿಂಗಂಗೆ ನತನಪ್ಪೆಂ ॥೨೮॥

ಗ್ರಂಥಾವಲೋಕನ

ಜನಭಾಷೆ-ಜನಪರ ನಿಲುವು

'ನಾ ಕವಿ ಅಲ್ಲಾ': ಧರಣೇಂದ್ರ ಕುರಕುರಿ ಎಂ. ಎ. ಜಾಗೃತಿ ಪ್ರಕಾಶನ, ಸ್ಟೇಟಬ್ಯಾಂಕ್ ಕಾಲೊನಿ,ಶಿರಸಿ
ಪು.೭೫ ಬೆಲೆ ೨೦-೦೦

★ **ಕಾವ್ಯಜೀವಿ**

ಇದು ಧರಣೇಂದ್ರ ಕುರಕುರಿಯವರ ನಾಲ್ಕನೆಯ ಕವನ ಸಂಕಲನ. ತಮ್ಮ 'ನೀರಾಗ ಕುಂತೇನ ನೆನಕೊಂತ' ಸಂಕಲನದಿಂದಲೇ ಕಾವ್ಯಾಸಕ್ತರು ಮತ್ತೆ ಮತ್ತೆ ನೆನಪಿಸಿಕೊಳ್ಳುವಂತೆ ಮಿಂಚಿದ ಈ ಕವಿ ಪ್ರಸ್ತುತ ಸಂಕಲನದಲ್ಲಿ ಓದುಗರ ನಿರೀಕ್ಷೆಯನ್ನು ಜೀವಂತವಾಗಿರಿಸುವುದರಲ್ಲಿ ಸಫಲರಾಗಿದ್ದಾರೆ.

ಇಲ್ಲಿನ ಸುಮಾರು ೩೦ ಪದ್ಯಗಳಲ್ಲಿ ಎದ್ದು ಕಾಣುವ ಮುಖ್ಯ ಲಕ್ಷಣಗಳು ಎರಡು-ಮೊದಲನೆಯದಾಗಿ, 'ನೋವುಣ್ಣುತ್ತಿರುವವರ ಪರವಾದ ಕವಿಯ ಗಟ್ಟಿ ನಿಲುವು, ಎರಡನೆಯದಾಗಿ-ತೀರ ಸಹಜವೆನ್ನುವಂತೆ ಕವಿ ಉಪಯೋಗಿಸುವ ಧಾರವಾಡ ಜಿಲ್ಲೆಯ ಆಡುಭಾಷೆ. ನಾಡು ಹಾಗೂ ಸುತ್ತಲಿನ ಬದುಕಿನ ಅವನತಿಯನ್ನು ಕುರಿತ ಕವಿಯ ತೀವ್ರ ವಿಷಾದ, ಅದರ ವಿರುದ್ಧ ರೊಚ್ಚಿಗೇಳದ ಜನತೆಯ ಬಗೆಗೆ ಪಶ್ಚಾತ್ತಾಪ, ದಗಲಬಾಜಿಗಳ ಬಗೆಗಿನ ಅಸಹ್ಯ -ಇವೆಲ್ಲ ಇಲ್ಲಿನ ಪ್ರತಿಯೊಂದು ಕವನದಲ್ಲಿಯೂ ಎದ್ದು ಕಾಣುತ್ತವೆ. ಕೆಲವು ಉದಾಹರಣೆಗಳನ್ನು ನೋಡಬಹುದು.

ಲಗಾಮು ಕೈಯ್ಯಾಗ ಹಿಡಿಯೋದರೊಳಗ
ಖಬರುಗೆಟ್ಟು
ಹೇಕರಿಸಿಗೊಂತ ಹಾರಿಕಿ ಬಿದ್ದಿತ್ತು
ಕಣ್ಮುಚ್ಚಿ ಕಣ್ಣ ತೆಗೆಯೋದರೊಳಗs
ನನ್ನ ಬೇಲ್ಯಾಗ ತುರಕಿತ್ತು (ಕುದರಿ)
ಕತ್ತಲದೊಳಗ ಬತ್ತಲ ಜನರ
ಮನಸ್ಸೆಲ್ಲ ಅತ್ತಾವೋ
ಸುತ್ತಮುತ್ತ ಎತ್ತ ಹೋದರೂ
ಕನಸೆಲ್ಲ ಸತ್ತಾವೋ (ಬೀದಿಗಳೆಲ್ಲ ಕಳವು ಆಗ್ಯಾವೋ)
ನಮ್ಮೂರಿನ ಕರಿಯಪ್ಪ
ಮರಿಯಪ್ಪ ಅಕಸ್ಮಾತ್
ಕಣ್ಣ ತಗೆದು

ತಲೆತಿರುಗಿ ಬೀಸಿ ಒಗೆದ ಬಡಿಗಿ
ಬಡದು
ಮೆತ್ತನ್ನ ಗಾದಿ
ಮುದ್ದಿ ಆದಾಗ
ಈ ದೇಸದಾಗ
ಒಂದು ಹೊಸಾ ಲೆಕ್ಕ
ಆರಂಭ ಆಗತೈತಿ (ಹೊಸಾ ಲೆಕ್ಕ)

ತಮ್ಮ ನಿರಾಸೆ, ವಿಷಾದ, ಅಸಮ್ಮತಿಯನ್ನು ನೇರವಾಗಿ ವ್ಯಕ್ತಪಡಿಸುವ ಕುರಕುರಿಯವರ ಧಾಟಿಯಲ್ಲಿ ತೀವ್ರ ಅಸಹಿಷ್ಣುತೆ (ಹಲವಾರು ದಲಿತ ಕವಿಗಳಲ್ಲಿ ಕಂಡು ಬರುವಂತೆ) ಇಲ್ಲ. ಬದಲಾಗಿ ಅಲ್ಲೂ ಸಂಯಮವಿದೆ. ''ಮೆದು '' ಎನ್ನುವಂಥ ಸಂಯಮ. ಇದು ನೇರವಾಗಿ ಹೋರಾಟ ಮಾಡಲಾಗದ ತನ್ನ ಅಸಹಾಯಕತೆಯ ಅರಿವಿನಿಂದ ಬಂದದ್ದು. ಮಧ್ಯಮವರ್ಗದ ಅನೇಕ ಸಂವೇದನಾಶೀಲರ ಸ್ಥಿತಿ ಇದೇ. ಹೀಗಾಗಿ ಕುರಕುರಿಯವರ ಈ ಸಂಕಲನ ಒಂದು ರೀತಿಯಲ್ಲೆಲ್ಲ ಪ್ರಾತಿನಿಧಿಕ.

ಬದುಕಿನ ತಾತ್ವಿಕ ವಿಶ್ಲೇಷಣೆಯನ್ನು ಕೊಡುವ ಕೆಲವು ಪದ್ಯಗಳು ಇಲ್ಲಿವೆ. ಕಿರು ಗಾತ್ರದ ಈ ಪದ್ಯಗಳಲ್ಲಿ ತುಂಬಾ ಕಡಿಮೆ ಶಬ್ದಗಳಲ್ಲಿ ಕವಿ ತಮ್ಮ ಚಿಂತನೆಯನ್ನು ಹೊರ ಹಾಕುವ ಮೋಡಿ ಆಕರ್ಷಕವಾಗಿದೆ.

ಉದಾ: ಕಣ್ಣು
ಮುಚ್ಚಿದರ
ಕತ್ತಲ
ತೆರದರ
ಬೆಳಕು
ಅದ ಽ
ಜಗತ್ತಿನ ಕೂಡ
ನಮ್ಮ
ಸಂಬಂಧ (ಸಂಬಂಧ)

ತೀರ ಹೊಸದಾದೊಂದು ರೀತಿಯಲ್ಲಿ ಅತೀ ಸಂಕ್ಷಿಪ್ತವಾಗಿ ಬದುಕು, ಹಣ, ಜಗತ್ತಿನ ಸಂಬಂಧಗಳನ್ನು ವ್ಯಾಖ್ಯಾನಿಸಿರುವ ರೀತಿ ವಿಸ್ಮಯಕರವೂ ಮೆಚ್ಚುಗೆಗೆ ಅರ್ಹವೂ ಆಗಿವೆ. ಇಂಥ ನಾಲ್ಕೈದು ಪದ್ಯಗಳಿಲ್ಲಿವೆ.

ಪ್ರಾಮಾಣಿಕ ಕಾಳಜಿಯನ್ನು ಆಕರ್ಷಕವಾಗಿ ಹೇಳುವತ್ತಲೇ ಈ ಕವಿಯ ಲಕ್ಷ್ಯ ಹೆಚ್ಚು ನೆಟ್ಟಿರುವಂತೆನಿಸುತ್ತದೆ. ಇದು ಪ್ರಸ್ತುತದಲ್ಲಿ ಇವರ ಕಾವ್ಯದ ಮಿತಿ. ಇಲ್ಲಿನ ಹಲವಾರು ಪದ್ಯಗಳು ಮತ್ತೆ ಮತ್ತೆ ಮೆಲುಕು ಹಾಕುವಂಥವು. ಕೆಲವು ಒಮ್ಮೆ ಓದಿ ಆನಂದಿಸಬಹುದಾದಂಥವು. ಚೆನ್ನಾಗಿಲ್ಲ ಎನ್ನಬಹುದಾದ ಯಾವ ಕವಿತೆಯೂ ಇಲ್ಲ. ಇದೇನೂ ಸಣ್ಣ ಸಾಧನೆಯಲ್ಲ ನಿಜ.

ಲೇಖಕರ ವಿಳಾಸಗಳು

೧. ಶಿವರುದ್ರ ಕಲ್ಲೋಳಕರ
ಅಧ್ಯಾಪಕರು, ಇತಿಹಾಸ ಮತ್ತು ಪ್ರಾಚ್ಯಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೨. ಡಾ. ಎನ್. ಜಿ. ಮಹಾದೇವಪ್ಪ
ಪ್ರಾಧ್ಯಾಪಕರು, ತತ್ವಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೩. ಡಾ. ವಿಲ್ಯಂ ಮಾಡ್ತ
ಭಾಷಾವಿಜ್ಞಾನ ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಡಾ. ಬಸವರಾಜ ನಾಯ್ಕರ
ಪ್ರವಾಚಕರು, ಇಂಗ್ಲೀಷ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೫. ಡಾ. ವೀರಣ್ಣ ರಾಜೂರ
ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಎಂ. ಮುನಿಸ್ವಾಮಯ್ಯ
ಭೂವಿಜ್ಞಾನಿ, ಅಂತರ್ಜಲ ವಿಭಾಗ
ಜಿಲ್ಲಾ ಪರಿಷತ್, ಧಾರವಾಡ

೭. ಡಾ. ಬಿ. ಆರ್. ಹಿರೇಮಠ
ಪ್ರಾಧ್ಯಾಪಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೮. ಡಾ. ಎಸ್. ಕೆ. ಕೊಪ್ಪಾ
ಕನ್ನಡ ಅಧ್ಯಾಪಕರು
ಕಲಾ ಮತ್ತು ವಾಣಿಜ್ಯ ಕಾಲೇಜು ಇಂಡಿ (ಜಿಲ್ಲೆ-ವಿಜಾಪುರ)

೯. ಡಾ. ಎಸ್. ಪಿ. ಪಾಟೀಲ
ಪ್ರವಾಚಕರು, ಕನ್ನಡ ಅಧ್ಯಯನಪೀಠ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೧೦. ಶ್ರೀ ಎಸ್. ಶಿವಣ್ಣ
ಸಂಪಾದಕರು, ಹಸ್ತಪ್ರತಿ ವಿಭಾಗ ಕನ್ನಡ ಅಧ್ಯಯನ ಕೇಂದ್ರ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

೧೧. 'ಕಾವ್ಯಜೀವಿ'
ಡಾ. ಎಸ್. ಪಿ. ಪದ್ಮಪ್ರಸಾದ, ಶಿಕ್ಷಣ ಮಹಾವಿದ್ಯಾಲಯ, ಇಲಕಲ್ಲ
ಜಿ : ವಿಜಾಪೂರ